ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 11 ಬುಧವಾರ 2023

ಸಂಪುಟ: 44 | ಸಂಚಿಕೆ: 176 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಹಿಷ ದಸರಾ, ಚಲೋ ಚಾಮುಂಡಿಬೆಟ್ಟಕ್ಕೆ

ಅನುಮತಿ ನಿರಾಕರಣೆ

- ಕಾನೂನು ವಿರೋಧಿ ನಿಲುವು ತಳೆದರೆ ಕಠಿಣ ಕ್ರಮ ಖಚಿತ
- ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಎಚ್ಚರಿಕೆ



ಮೈಸೂರು, ಅ.10(ಬಿಎಲ್‌ಯು)– ಮೈಸೂರು ನಗರದ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ಸಾಧ್ಯತೆ ಹಿನ್ನೆಲೆಯಲ್ಲಿ ಮಹಿಷ ದಸರಾ ಹಾಗೂ ಚಲೋ ಚಾಮುಂಡಿಬೆಟ್ಟ ಜಾಥಾ ನಡೆಸಲು ಅನುಮತಿ ನಿರಾಕರಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅ.13ರಂದು ಮಹಿಷ ದಸರಾಗೆ ಅನುಮತಿ ನೀಡುವಂತೆ ಮಹಿಷ ದಸರಾ ಆಚರಣಾ ಸಮಿತಿಯ ಅಧ್ಯಕ್ಷ ಪುರುಷೋತ್ತಮ್ ಅನುಮತಿ ಕೋರಿದ್ದರು. ಅಂದು ಬೆಳಿಗ್ಗೆ 9.30 ಗಂಟೆಗೆ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಚಾಮುಂಡಿಬೆಟ್ಟದ ತಾವರೆಕಟ್ಟೆಯಿಂದ ಟೌನ್‌ಹಾಲ್ ತನಕ ಮೆರವಣಿಗೆಯಲ್ಲಿ ತೆರಳಿ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು. ತರುವಾಯ ಅಲ್ಲೇ ವೇದಿಕೆ ಕಾರ್ಯಕ್ರಮ ನಡೆಸಲು ಅನುಮತಿ ನೀಡುವಂತೆ ಮನವಿ ಮಾಡಿದ್ದರು. ಹಾಗೆಯೇ ಅ.13 ರಂದು ಚಲೋ ಚಾಮುಂಡಿಬೆಟ್ಟ ನಡೆಸಲು ಬಿಜೆಪಿಯ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಅನುಮತಿ ಕೇಳಿದ್ದರು. ಅಂದು ಬೆಳಿಗ್ಗೆ 8 ಗಂಟೆಗೆ ಚಾಮುಂಡಿ ಬೆಟ್ಟದ ಮೆಟ್ಟಿಲು ಹಾಗೂ ವಾಹನಗಳ ಮೂಲಕ ಬೆಟ್ಟಕ್ಕೆ ತೆರಳಿ ಚಲೋ ಚಾಮುಂಡಿ ಬೆಟ್ಟ ನಡೆಸಲು ಅನುಮತಿ ನೀಡುವಂತೆ ಮನವಿ ಮಾಡಿದ್ದರು. ಆದರೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುವ ಸಾಧ್ಯತೆಯ ಕಾರಣ ಮಹಿಷ ದಸರಾ ಹಾಗೂ ಚಲೋ ಚಾಮುಂಡಿಬೆಟ್ಟ ಜಾಥಾಗೆ ಅನುಮತಿ ನಿರಾಕರಿಸಲಾಗಿದೆ ಎಂದು ರಮೇಶ್ ಬಾನೋತ್ ಸ್ಪಷ್ಟಪಡಿಸಿದ್ದಾರೆ.

ಇಂದು ಬೆಳಗ್ಗೆ ಮೈಸೂರು ಅರಮನೆ ಮಂಡಳಿಯಲ್ಲಿ ನಡೆದ ಪ್ರತಿಕಾಗೋಷ್ಠಿಯಲ್ಲೂ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಈ ವಿಷಯ ಪ್ರಸ್ತಾಪಿಸಿ, ಎಚ್ಚರಿಕೆ ನೀಡಿದ್ದರು. ಚಲೋ ಚಾಮುಂಡಿಬೆಟ್ಟ ಕಾರ್ಯಕ್ರಮಕ್ಕೆ ಅನುಮತಿ ನೀಡದಿದ್ದರೆ ಅದನ್ನು ಸಾಕಾರಗೊಳಿಸಲು ನಾವು ಸಂಘರ್ಷಕ್ಕೂ ಸಿದ್ಧ ಎಂದು ಸಂಸದ ಪ್ರತಾಪ್ ಸಿಂಹ ನೀಡಿರುವ ಎಚ್ಚರಿಕೆಗೆ ಪ್ರತಿಕ್ರಿಯೆ ನೀಡಿದ ಪೊಲೀಸ್ ಆಯುಕ್ತರು, ಮೈಸೂರಿನ ಇಮೇಜ್ ಹಾಗೂ ದಸರಾ ವೈಭವಕ್ಕೆ ಧಕ್ಕೆ ಆಗದಂತೆ ನಿರ್ಧಾರ ಮಾಡುತ್ತೇವೆ. ಆದರೆ ಯಾರೇ ಆದರೂ ಕಾನೂನು ವಿರೋಧಿ ನಿಲುವು ತಳೆದರೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದರು.

ಮಹಿಷ ದಸರಾಗೆ ಅವಕಾಶ ಕೊಟ್ಟರೆ ದಸರಾ ಉದ್ಘಾಟನೆ ವೇದಿಕೆಯಲ್ಲೇ ಪ್ರತಿಭಟನೆ

ಮೈಸೂರು, ಅ.10 (ಬಿಎಲ್‌ಯು) ಚಾಮುಂಡಿಬೆಟ್ಟದಲ್ಲಿ ಅ.13ರಂದು ಪೊಲೀಸರ



ಕಣ್ತಪ್ಪಿಸಿ ಮಹಿಷ ದಸರಾ ಮಾಡಿದರೆ, ದಸರಾ ಉದ್ಘಾಟನೆಗೊಳ್ಳುವ ವೇದಿಕೆಯಲ್ಲೇ ಪ್ರತಿಭಟನೆ ನಡೆಸುತ್ತೇನೆ ಎಂದು ಸಂಸದ ಪ್ರತಾಪ್‌ಸಿಂಹ ಎಚ್ಚರಿಕೆ ನೀಡಿದ್ದಾರೆ.

ಮಹಿಷ ದಸರಾ ಆಚರಣೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಇದರಂತೆ ಮಹಿಷ ದಸರಾ ಆಚರಣೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು. ಪೊಲೀಸರು ನುಡಿದಂತೆ ಮಹಿಷ ದಸರಾ ಆಚರಣೆಗೆ ಅ.13ರಂದು ಅವಕಾಶ ನೀಡದಿದ್ದರೆ ಅಂದು ಸಂಜೆ ಪೊಲೀಸ್ ಇಲಾಖೆ ಹಾಗೂ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ ಎಂದರು. ಒಂದು ವೇಳೆ ಪೊಲೀಸರ ಕಣ್ತಪ್ಪಿಸಿ ಮಹಿಷ ದಸರಾ ಆಚರಿಸಿದರೆ, ಬೆಟ್ಟದಲ್ಲಿ ಅನಾಚಾರ ಮಾಡಲು ಅವಕಾಶ ಮಾಡಿಕೊಟ್ಟರೆ ನಮ್ಮ ಹೋರಾಟ ತೀವ್ರವಾಗಿರುತ್ತದೆ. ಆಗ ನಾವಂತೂ ಸುಮ್ಮನಿರುವುದಿಲ್ಲ. ತೀವ್ರ ಹೋರಾಟವಾಗಿ ದಸರಾ ಉದ್ಘಾಟನೆಗೊಳ್ಳುವ ವೇದಿಕೆಯಲ್ಲೇ ನಾನು ಪ್ರತಿಭಟನೆ ನಡೆಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ರೈತರ ಸಾಲ ಮನ್ನಾ ಮಾಡಿದಂತೆ ಸಂಚಾರ ನಿಯಮ ಉಲ್ಲಂಘನೆ ದಂಡವನ್ನೂ ಮನ್ನಾ ಮಾಡುವಂತೆ ಆಗ್ರಹಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯರ ಮೈಸೂರು ಮನೆ ಮೇಲೆ

ಕಲ್ಲು ತೂರಾಟ; ಕಿಟಕಿ ಗಾಜು ಪುಡಿ

ಸರಸ್ವತಿಪುರಂ ಪೊಲೀಸರಿಂದ ಆರೋಪಿ ಹೂಟಗಳ್ಳಿ ಸತ್ಯಮೂರ್ತಿ ಬಂಧನ; ತನ್ನ ಹಿಡಿಯಲು ಬಂದ ಪೊಲೀಸರ ಮೇಲೂ ಕಲ್ಲು ತೂರಿ ಗಾಯಗೊಳಿಸಿದ



ಆರೋಪಿ ಸತ್ಯಮೂರ್ತಿ



ಮೈಸೂರು, ಅ.10(ಆರ್‌ಕೆ)– ಮೈಸೂರಿನ ತೊಣಚಿಕೊಪ್ಪಲಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ಮೇಲೆ ಕಲ್ಲು ತೂರಾಟ ನಡೆಸಿ, ಕಿಟಕಿ ಗಾಜುಗಳನ್ನು ಪುಡಿ ಪುಡಿ ಮಾಡಿದ ಆರೋಪಿಯನ್ನು ಪೊಲೀಸರು ಬೆನ್ನತ್ತಿ ಬಂಧಿಸಿದ್ದಾರೆ.

ಈ ಘಟನೆ ಮಂಗಳವಾರ ಬೆಳಗ್ಗೆ ಸಂಭವಿಸಿದೆ. ಮೈಸೂರು ತಾಲೂಕು ಹೂಟಗಳ್ಳಿ ಗ್ರಾಮದ ಲೇಟ್ ಮಾದೇಗೌಡರ ಮಗ ಸತ್ಯಮೂರ್ತಿ(48) ಮುಖ್ಯಮಂತ್ರಿ ಮನೆ ಮೇಲೆ ಕಲ್ಲು ತೂರಿದ್ದಲ್ಲದೇ, ಹಿಡಿಯಲು ಬೆನ್ನತ್ತಿ ಹೋದ ಪೊಲೀಸರ ಮೇಲೂ ಕಲ್ಲು ತೂರಿ ಗಾಯಗೊಳಿಸಿ ಈಗ ಜೈಲು ಸೇರಿದ್ದಾನೆ. ಇಂದು ಬೆಳಗ್ಗೆ ▶ 8ನೇ ಪುಟಕ್ಕೆ

ಮತಗಟ್ಟೆಯಲ್ಲಿ ವಿವಿ ಪ್ಯಾಟ್ ಧ್ವಂಸಗೊಳಿಸಲೆತ್ನಿಸಿದ್ದ!

ಕಳೆದ ವಿಧಾನಸಭಾ ಚುನಾವಣೆಯ ವೇಳೆ ಹೂಟಗಳ್ಳಿ ಮತಗಟ್ಟೆಯೊಂದರಲ್ಲಿ ಅಧಿಕಾರಿಗಳೆದುರೇ ಇವಿಎಂ ಹಾಗೂ ವಿವಿ ಪ್ಯಾಟ್ ಅನ್ನು ಧ್ವಂಸಗೊಳಿಸಲೆತ್ನಿಸಿದ್ದು ಇದೇ ಸತ್ಯಮೂರ್ತಿ. ಆಗಲೂ ಪ್ರಕರಣ ದಾಖಲಿಸಿ ಆತನನ್ನು ಬಂಧಿಸಲಾಗಿತ್ತು. ಈ ಚುನಾವಣಾ ವ್ಯವಸ್ಥೆಯಿಂದ ಬೇಸತ್ತು ಹೀಗೆ ತಾನು ತನ್ನ ಅಸಮಾಧಾನ ಹೊರ ಹಾಕಿದ್ದಾಗಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. 19 ವರ್ಷದ ಪುತ್ರ, ಪತ್ನಿ ಹಾಗೂ ತಾಯಿಯೊಂದಿಗೆ ಹೂಟಗಳ್ಳಿಯಲ್ಲಿ ವಾಸವಾಗಿರುವ ಸತ್ಯಮೂರ್ತಿ, ಈ ಹಿಂದೆ ಅಗ್ರಹಾರದ ಪ್ರಿಂಟಿಂಗ್ ಪ್ರೆಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಕೊರೊನಾ ಸಂದರ್ಭ ಪ್ರೆಸ್ ಬಂದ್ ಆದ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಕೆಲಸವಿಲ್ಲದೇ, ಸಾಮಾಜಿಕ ವ್ಯವಸ್ಥೆ ವಿರುದ್ಧ ಸಿಡಿದೆದ್ದು ಅಲ್ಲಲ್ಲಿ ಅಸಮಾಧಾನ ಹೊರ ಹಾಕುತ್ತಿದ್ದ ಎನ್ನಲಾಗಿದೆ. ಸಿಎಂ ಮನೆ ಬಳಿ ದಿನದ 24 ಗಂಟೆಯೂ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆಯಾದರೂ ಪೊಲೀಸರ ಕಣ್ತಪ್ಪಿಸಿ ಬ್ಯಾರಿಕೇಡ್ ಬಳಿ ನಿಂತು ಕ್ಷಣಾರ್ಧದಲ್ಲಿ ಕಲ್ಲುಗಳನ್ನು ತೂರಿ ಕಿಟಕಿ ಗಾಜು ಒಡೆದು ಹಾಕಿ ಸತ್ಯಮೂರ್ತಿ ಪರಾರಿಯಾಗಿದ್ದ. ಈ ಘಟನೆ ನಂತರ ಸ್ಥಳದಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಿ ಭಾರೀ ಭದ್ರತೆಯೊಂದಿಗೆ ಕಟ್ಟೆಚ್ಚರ ವಹಿಸಲಾಗಿದ್ದು, ಹೆಚ್ಚುವರಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ತಕ್ಷಣವೇ ಪುಡಿಪುಡಿಯಾಗಿದ್ದ ಸಿಎಂ ಮನೆಯ ಕಿಟಕಿ ಗಾಜನ್ನು ಬದಲಿಸಲಾಗಿದೆ.

ಅವಕಾಶ ಕಲ್ಪಿಸಿದರೆ ಮಹಿಷ ದಸರಾ ತಡೆಗೆ

ಕೊನೆ ಕ್ಷಣದಲ್ಲೂ ಸನ್ನದ್ಧರಾಗಿರಬೇಕು

ಬಿಜೆಪಿ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಚಲೋ ಚಾಮುಂಡಿಬೆಟ್ಟ ಹೋರಾಟ ಸಂಬಂಧ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು.

ಮೈಸೂರು,ಅ.10(ಪಿಎಂ)– ನಮ್ಮ 'ಚಲೋ ಚಾಮುಂಡಿಬೆಟ್ಟ' ಹೋರಾಟ ಮತ್ತು 'ಮಹಿಷ ದಸರಾ' ಆಚರಣೆ ಎರಡಕ್ಕೂ ಪೊಲೀಸ್ ಆಯುಕ್ತರು ಅನುಮತಿ ನಿರಾಕರಿಸಿರುವುದನ್ನು ಬಿಜೆಪಿ ಸ್ವಾಗತಿಸಲಿದೆ. ಒಂದು ವೇಳೆ ಮಹಿಷ ದಸರಾಗೆ ಅವಕಾಶ ನೀಡಿದರೆ ಅದನ್ನು ತಡೆಯಲು ಕೊನೆ ಕ್ಷಣದಲ್ಲೂ ನಾವು ಸನ್ನದ್ಧರಾಗಿಬೇಕು ಎಂದು ಬಿಜೆಪಿ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು. ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಮಹಿಷ ದಸರಾ ವಿರೋಧಿಸಿ ನಡೆಸಲು ಉದ್ದೇಶಿಸಿರುವ 'ಚಲೋ ಚಾಮುಂಡಿಬೆಟ್ಟ' ಹೋರಾಟ ಸಂಬಂಧ ಮಂಗಳವಾರ ಹಮ್ಮಿಕೊಂಡಿದ್ದ ಬಿಜೆಪಿ ಪ್ರಮುಖ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮಹಿಷಾ ದಸರಾ ಆಚರಣೆ ಹೆಸರಿನಲ್ಲಿ ಬೆಟ್ಟದಲ್ಲಿ ಮಹಿಷನ ಪ್ರತಿಮೆಗೆ ಪೂಜೆ ಸಲ್ಲಿಸುವುದನ್ನು ತಡೆಯುವುದು ನಮ್ಮ ಉದ್ದೇಶವಾಗಿತ್ತು. ಇದೀಗ ಅದಕ್ಕೆ ತಡೆಯೊಡ್ಡಿರುವ ಹಿನ್ನೆಲೆಯಲ್ಲಿ ನಮ್ಮ ಹೋರಾಟವನ್ನು ಸದ್ಯಕ್ಕೆ ತಡೆ ಹಿಡಿಯಲಾಗುವುದು ಎಂದರು. ಆದರೆ ಯಾವುದೇ ಕಾರಣಕ್ಕೂ ನಾವು ಮೈಮರೆಯುವುದು ಬೇಡ. ಅ.13ರವರೆಗೂ ಎಚ್ಚರದಿಂದ ಇರಬೇಕು. ಒಂದು ವೇಳೆ ವ್ಯತ್ಯಾಸವಾದರೆ, ನಮ್ಮ ನಂಬಿಕೆಗೆ ಧಕ್ಕೆಯಾಗಲಿದೆ. ▶ 8ನೇ ಪುಟಕ್ಕೆ

ಪೊಲೀಸರು ಅನುಮತಿ ನಿರಾಕರಿಸಿದ್ದರೂ

ಮಹಿಷ ದಸರಾ ಮಾಡಿಯೇ ತೀರುತ್ತೇವೆ

ಮಹಿಷ ದಸರಾ ಅನುಷ್ಠಾನ ಸಮಿತಿ ಪಟ್ಟು



ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಪ್ರೊ.ನಂಜರಾಜ ಅರಸ್, ಪ್ರೊ.ಕೆ.ಎಸ್.ಭಗವಾನ್, ಲೇಖಕ ಸಿದ್ದಸ್ವಾಮಿ ಇನ್ನಿತರರಿದ್ದಾರೆ.

ಮೈಸೂರು, ಅ.10(ಎಸ್‌ಪಿಎನ್)– ಮೈಸೂರು ನಗರ ಪೊಲೀಸ್ ಆಯುಕ್ತರು ಅನುಮತಿ ನಿರಾಕರಿಸಿದ್ದರೂ 'ಮಹಿಷ ದಸರಾ' ಆಚರಣೆ ಮಾಡುತ್ತೇವೆ. ಆಚರಣೆ ರೂಪುರೇಷೆಯನ್ನೂ ನಾಳೆ(ಅ.11) ನಿರ್ಧರಿಸುತ್ತೇವೆ ಎಂದು ಮಹಿಷಾ ದಸರಾ ಅನುಷ್ಠಾನ ಸಮಿತಿಯ ಸದಸ್ಯ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು. ಮೈಸೂರು ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಪ್ರತಾಪ ಸಿಂಹ ಅವರಿಗೆ ಮೈಸೂರಿನ ಮಹಿಷಾಸುರನ ಇತಿಹಾಸ ಗೊತ್ತಿಲ್ಲ. ಮಹಿಷಾ ದಸರಾ ಅನುಷ್ಠಾನ ಸಮಿತಿಯಿಂದ ಮೈಸೂರು ದಸರಾ ಅಥವಾ ಚಾಮುಂಡೇಶ್ವರಿ ದೇವಿಗೆ ಅಪಮಾನ ಆಗುವ ರೀತಿಯಲ್ಲಿ ನಾವು ನಡೆದುಕೊಂಡಿಲ್ಲ. ಶಾಂತಿಯುತ ಆಚರಣೆಗೆ ಅನುಮತಿ ನೀಡುವಂತೆ ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದ್ದೆವು. ಆದರೂ ಕಾನೂನು ಸುವ್ಯವಸ್ಥೆ ನೆಪವೊಡ್ಡಿ ಅನುಮತಿ ನಿರಾಕರಣೆ ಮಾಡಿರುವುದು ಮೈಸೂರಿನ ನಾಗರಿಕರಿಗೆ ಮಾಡಿದ ಅಪಮಾನ ಎಂದು ಕಿಡಿಕಾರಿದರು. ▶ 8ನೇ ಪುಟಕ್ಕೆ

ಡಾ.ಪದ್ಮಾಮೂರ್ತಿ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಗೆ ಆಯ್ಕೆ

ಮೈಸೂರು, ಅ.10(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದಲ್ಲಿ ರಾಜ್ಯ ಸರ್ಕಾರದಿಂದ ಕೊಡ ಮಾಡುವ 'ರಾಜ್ಯ ಸಂಗೀತ ವಿದ್ವಾನ್' ಗೌರವ ಪ್ರಶಸ್ತಿಗೆ ಬೆಂಗಳೂರಿನ ಡಾ.ಪದ್ಮಾ ಮೂರ್ತಿ ಅವರು ಆಯ್ಕೆಯಾಗಿದ್ದಾರೆ.

ಪ್ರಸಿದ್ಧ ಕ್ಲಾರಿಯೋನೆಟ್ ವಾದಕರಾದ ಡಾ.ಪಂಡಿತ್ ನರಸಿಂಹಲು ವಡವಾಟಿ ಅವರ ಅಧ್ಯಕ್ಷತೆಯ ಆಯ್ಕೆ ಸಮಿತಿ 2023–24ನೇ ಸಾಲಿನ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸಾಧನೆ ಮೆರೆದಿರುವ 91 ವರ್ಷದ ಡಾ.ಪದ್ಮಾ ಮೂರ್ತಿ ಅವರನ್ನು ಆಯ್ಕೆ ಮಾಡಿದ್ದು, ಇವರಿಗೆ ನವರಾತ್ರಿ ಆರಂಭದ ದಿನವಾದ ಅ.15ರಂದು ಅರಮನೆ ಅಂಗಳದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಧಾನ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಪ್ರಶಸ್ತಿಯು 5 ಲಕ್ಷ ರೂ. ನಗದು, ಸರಸ್ವತಿ ವಿಗ್ರಹ ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರ ಮಗಳು: ಡಾ.ಪದ್ಮಾಮೂರ್ತಿ ಅವರು ಮೈಸೂರಿನ ಮಗಳು. ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣ ತಜ್ಞರಾಗಿದ್ದ ಟಿ.ಎಸ್.ರಾಜಗೋಪಾಲ ಅಯ್ಯಂಗಾರ್ ಹಾಗೂ ಜಯಲಕ್ಷ್ಮಿ ದಂಪತಿ ಪುತ್ರಿಯಾಗಿ 1932ರ ಜುಲೈ 24ರಂದು ಜನಿಸಿದ ಇವರು, ಮೈಸೂರು ವಾಸುದೇವಾಚಾರ್ಯರು, ಟಿ.ಚೌಡಯ್ಯ, ಟಿ.ಪುಟ್ಟಸ್ವಾಮಯ್ಯ, ಶೆಲ್ವಪಿಳ್ಳೆ ಅಯ್ಯಂಗಾರ್, ತಿಟ್ಟೆ ಕೃಷ್ಣ ಅಯ್ಯಂಗಾರ್,



ರಾಳಪಲ್ಲಿ ಅನಂತಕೃಷ್ಣಶರ್ಮ ಮುಂತಾದವರಿಂದ ಸಂಗೀತ ಗಾಯನ ಮತ್ತು ಹೆಚ್.ಎಸ್.ಕೃಷ್ಣಮೂರ್ತಿ, ಆರ್.ಎಸ್. ಕೇಶವಮೂರ್ತಿ ಅವರಿಂದ ವೀಣಾವಾದನ ಕಲಿತರು. ಇವರ ಪತಿ ಟಿ.ಎಸ್.ಮೂರ್ತಿ ಅವರು ಪಿಟೀಲು ವಾದಕರು. ಸೈಕಾಲಜಿ ಆಫ್ ಮ್ಯೂಸಿಕ್ ಮಹಾಪ್ರಬಂಧ ಮಂಡಿಸಿ ಬೆಂಗಳೂರು ವಿವಿಯಲ್ಲಿ ಡಾಕ್ಟರೇಟ್ ಪದವಿ ಪಡೆದ ▶ 8ನೇ ಪುಟಕ್ಕೆ

ದಸರಾ ಆಚರಣೆಗೆ ಭರದ ಸಿದ್ಧತೆ: ಪ್ರಾಯೋಜಕತ್ವಕ್ಕೆ ಅಧಿಕ ಆದ್ಯತೆ



- ಅದ್ದೂರಿಯಲ್ಲದ ಸರಳ, ಸಾಂಪ್ರದಾಯಿಕ ದಸರಾ ಆಚರಣೆ
- ಅಕ್ಟೋಬರ್ 15 ರಂದು ಡಾ.ಹಂಸಲೇಖಾರಿಂದ ಉದ್ಘಾಟನೆ
- ದಸರಾ ಆಚರಣೆಗೆ ಸರ್ಕಾರದಿಂದ 30 ಕೋಟಿ ಅನುದಾನ
- ಪ್ರಾಯೋಜಕತ್ವದಿಂದ 4 ಕೋಟಿ ಸಂಗ್ರಹಿಸುವ ಗುರಿ

ಮೈಸೂರು, ಅ.10(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಆರಂಭಕ್ಕೆ ಇನ್ನು ಕೇವಲ ನಾಲ್ಕೇ ದಿನ ಬಾಕಿ ಇರುವ ಹಿನ್ನೆಲೆಯಲ್ಲಿ ದಸರಾ ಜವಾಬ್ದಾರಿ ಹೊಣೆ ಹೊತ್ತಿರುವ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಣಾಧಿಕಾರಿ ಗಾಯತ್ರಿ ಅವರು ಇಂದು ದಸರಾ ಸಿದ್ಧತೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಬರಗಾಲದ ಹಿನ್ನೆಲೆ ಅದ್ದೂರಿಯಲ್ಲದ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಣೆ ಮಾಡಲಾಗುವುದು ಎಂದು ಇದೇ ವೇಳೆ ಸ್ಪಷ್ಟಪಡಿಸಿದರು. ಮೈಸೂರು ಅರಮನೆ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಡಾ.ಕೆ.ವಿ.ರಾಜೇಂದ್ರ, ದಸರಾ ಆಚರಣೆಗೆ ಮೈಸೂರು ಅರಮನೆ ಮಂಡಳಿ 5 ಕೋಟಿ, ಮುಡಾ 10 ಕೋಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 15 ಕೋಟಿ ನೀಡಿವೆ. ಪ್ರಾಯೋಜಕತ್ವದಲ್ಲಿ ಸುಮಾರು 3 ರಿಂದ 4 ಕೋಟಿ ರೂ. ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದರು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅ.15ರಂದು ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಡಾ.ಹಂಸಲೇಖ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಅಗ್ರ ಪೂಜೆ ಸಲ್ಲಿಸುವರು. ತರುವಾಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಅಂದು ಬೆಳಗ್ಗೆ 10.15 ರಿಂದ 10.36 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿದೇವಿ ಉತ್ಸವ ಮೂರ್ತಿಗೆ ಡಾ.ಹಂಸಲೇಖ ಪುಷ್ಪಾರ್ಚನೆ ಮಾಡುವ ಮೂಲಕ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವವನ್ನು ವಿಧ್ಯುಕ್ತವಾಗಿ ಉದ್ಘಾಟನೆ ಮಾಡುವರು ಎಂದು ಡಾ.ರಾಜೇಂದ್ರ ತಿಳಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರ ▶ 6ನೇ ಪುಟಕ್ಕೆ

ಮೈಸೂರು ದಸರಾ ಅಂಗವಾಗಿ ಅ.22, 23ರಂದು ಏರ್ ಶೋ





ಮೈಸೂರು, ಅ.10(ಬಿಎಲ್‌ಯು)–ಮೈಸೂರು ದಸರಾ ಅಂಗವಾಗಿ ಅ.22 ಮತ್ತು 23ರಂದು ಏರ್ ಶೋ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮಾಹಿತಿ ನೀಡಿದರು. ಮೈಸೂರಿನ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಅ.22 ರಂದು ರಿಹರ್ಸಲ್ ನಡೆಯಲಿದೆ. ಮಾರನೆ ದಿನವಾದ ಅ.23 ರಂದು ಸಂಜೆ 4 ರಿಂದ 5 ಗಂಟೆ ತನಕ ಪೂರ್ಣ ಪ್ರಮಾಣದ ಏರ್ ಶೋ ನಡೆಯಲಿದೆ. ಐದು ವರ್ಷಗಳ ನಂತರ ಏರ್ ಶೋ ನಡೆಯುತ್ತಿದ್ದು, ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಅ.23ರಂದು ಸಂಜೆ 7 ಗಂಟೆಗೆ ಬನ್ನಿಮಂಟಪದಲ್ಲಿ ಪಂಜಿನ ಕವಾಯತು ರಿಹರ್ಸಲ್ ನಡೆಯಲಿದೆ. ಏರ್ ಶೋ ವೀಕ್ಷಣೆ ಮಾಡಿದ ಬಳಿಕ ಜನರು ▶ 6ನೇ ಪುಟಕ್ಕೆ

ಜಂಬೂ ಸವಾರಿಯಲ್ಲಿ ಅಭಿಮನ್ಯು ಜೊತೆ ಸಾಗುವ ಸಿಬ್ಬಂದಿಗೆ ದರ್ಬಾರ್ ಡ್ರೆಸ್ ಮೆರಗು





ಮೈಸೂರು, ಅ.10(ಬಿಎಲ್‌ಯು)–ವಿಶ್ವ ಪ್ರಸಿದ್ಧ ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗುವ ಅಭಿಮನ್ಯು ಸುತ್ತಮುತ್ತ ಇರುವ ಸಿಬ್ಬಂದಿಗೆ ದರ್ಬಾರ್ ಪೋಷಾಕು ನಿಗದಿಪಡಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದರು. ಅಭಿಮನ್ಯು ಚಿನ್ನದ ಅಂಬಾರಿ ಹೊತ್ತು ಸಾಗುವಾಗ ಆ ದೃಶ್ಯವನ್ನು ಮತ್ತಷ್ಟು ವೈಭವಗೊಳಿಸಲು ಈ ವ್ಯವಸ್ಥೆ ಮಾಡಲಾಗಿದೆ. ಅಭಿಮನ್ಯು ಜೊತೆ ಸಾಗುವ ಸಿಬ್ಬಂದಿ ಸಾಂಪ್ರದಾಯಿಕ ದರ್ಬಾರ್ ಡ್ರೆಸ್ ತೊಟ್ಟು ಸಾಗಲಿದ್ದಾರೆ ಎಂದರು. ದಸರಾ ಆರಂಭದಿಂದ ಕೊನೆ ತನಕ ಮೈಸೂರು ನಗರದಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುವುದು. ಯಾವ ರೀತಿಯ ಭದ್ರತಾ ▶ 6ನೇ ಪುಟಕ್ಕೆ

ಅ.18ರಿಂದ ಯುವ ದಸರಾ

ಸಾಧು ಕೋಕಿಲಾ, ಸಂಚಿತ್ ಹೆಗಡೆ ಸಂಗೀತದ ಮೋಡಿ, ಅಲೋಕ್ ತಂಡದಿಂದ ಆಲ್ ಓಕೆ ರ‍್ಯಾಪ್





ಮೈಸೂರು, ಅ.10(ಬಿಎಲ್‌ಯು)–ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಯುವ ದಸರಾ ಅ. 18 ರಿಂದ 21ರ ತನಕ ನಾಲ್ಕು ದಿನಗಳ ಕಾಲ ನಡೆಯಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅಕ್ಟೋಬರ್ 18 ರಂದು ಸಂಜೆ 7 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಯುವ ದಸರಾಗೆ ಚಾಲನೆ ನೀಡಲಿದ್ದಾರೆ. ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ತರುವಾಯ ಹಾಸ್ಯನಟ ಸಾಧುಕೋಕಿಲಾ ಮತ್ತು ತಂಡದಿಂದ ಸ್ಯಾಂಡಲ್‌ವುಡ್ ನೈಟ್ಸ್ ನಡೆಯಲಿದೆ ▶ 6ನೇ ಪುಟಕ್ಕೆ

ಪುಷ್ಪದಲ್ಲಿ ರೂಪುಗೊಳ್ಳಲಿದೆ ಚಂದ್ರಯಾನ–3 ಕಲಾಕೃತಿ





ಮೈಸೂರು, ಅ.10(ಬಿಎಲ್‌ಯು) ಈ ಬಾರಿಯ ಮೈಸೂರು ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಎರಡು ಲಕ್ಷ ಗುಲಾಬಿ ಹೂವುಗಳಿಂದ ಚಂದ್ರಯಾನ ಪರಿಕಲ್ಪನೆಯ ಕಲಾಕೃತಿ ರೂಪಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯತ್ರಿ ತಿಳಿಸಿದರು.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಚಂದ್ರಯಾನ ಪರಿಕಲ್ಪನೆಯ ಕಲಾಕೃತಿ ಸೇರಿದಂತೆ ವಿಶಿಷ್ಟ ರೀತಿಯ ಹಲವು ಪುಷ್ಪದ ಕಲಾಕೃತಿಯನ್ನು ಅನಾವರಣ ಮಾಡಲಾಗುವುದು ಎಂದರು. ಚಂದಿರನ ದಕ್ಷಿಣ ಧ್ರುವಕ್ಕೆ ಮೊದಲು ಕಾಲಿಡುವ ಮೂಲಕ ಭಾರತದ ಇಸ್ರೋ ವಿಶ್ವದಲ್ಲೇ ಹೊಸ ಮೈಲಿಗಲ್ಲು ಸಾಧಿಸಿದೆ. ಈ ಹಿನ್ನೆಲೆ ಯಲ್ಲಿ ಇಸ್ರೋ ವಿಜ್ಞಾನಿಗಳಿಗೆ ಕೃತಜ್ಞತೆ ಸಲ್ಲಿಸಿ, ಚಂದ್ರಯಾನ–3 ಮಹತ್ವ ಸಾರಲು ಚಂದ್ರಯಾನ ▶ 6ನೇ ಪುಟಕ್ಕೆ

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 100.72 ಅಡಿ	ಇಂದಿನ ಮಟ್ಟ 2,276.35 ಅಡಿ	ಇಂದಿನ ಮಟ್ಟ 2,856.35 ಅಡಿ
ಹಿಂದಿನ ವರ್ಷದ ಮಟ್ಟ 123.80 ಅಡಿ	ಹಿಂದಿನ ವರ್ಷದ ಮಟ್ಟ 2,281.97 ಅಡಿ	ಹಿಂದಿನ ವರ್ಷದ ಮಟ್ಟ 2,853.38 ಅಡಿ
ನಿನ್ನೆಯ ಮಟ್ಟ 100.92ಅಡಿ	ನಿನ್ನೆಯ ಮಟ್ಟ 2,276.52 ಅಡಿ	ನಿನ್ನೆಯ ಮಟ್ಟ 2,856.35 ಅಡಿ
ಇಂದಿನ ಒಳಹರಿವು 4,479 ಕ್ಯೂಸೆಕ್	ಇಂದಿನ ಒಳಹರಿವು 1,008ಕ್ಯೂಸೆಕ್	ಇಂದಿನ ಒಳಹರಿವು 2,202 ಕ್ಯೂಸೆಕ್
ಇಂದಿನ ಹೊರಹರಿವು 6,169 ಕ್ಯೂಸೆಕ್	ಇಂದಿನ ಹೊರಹರಿವು 2,000 ಕ್ಯೂಸೆಕ್	ಇಂದಿನ ಹೊರಹರಿವು 1,150 ಕ್ಯೂಸೆಕ್

ಪ್ರವಾಸಿಗರಿಗೆ ಭಾರಿ ಭಾರದ ಲಗೇಜ್‌ನಿಂದ ಮುಕ್ತಿ!

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಡಿಜಿಟಲ್ ಸ್ಮಾರ್ಟ್ ಲಗೇಜ್ ಲಾಕರ್ ವ್ಯವಸ್ಥೆ, ಕೈಗೆಟುಕುವ ದರ; ಭಾರಿ ಸುರಕ್ಷತೆ ಕೂಡ



ಮೈಸೂರು, ಅ.10(ಜಿಎ)–ದಸರಾ ಮಹೋತ್ಸವ ಮತ್ತು ಸಾಂಸ್ಕೃತಿಕ ನಗರಿಯನ್ನು ಕಣ್ತುಂಬಿಕೊಳ್ಳಲು ಬರುವವರು ಲಗೇಜು ಭಾರದಿಂದ ಪಾರಾಗುವುದರ ಬಗ್ಗೆ ಚಿಂತಿಸಬೇಕಿಲ್ಲ. ನೈರುತ್ಯ ರೈಲ್ವೆ ಮೈಸೂರು ವಿಭಾಗವು 'ಡಿಜಿಟಲ್ ಸ್ಮಾರ್ಟ್ ಲಗೇಜ್ ಲಾಕರ್' ಸೌಲಭ್ಯವನ್ನು ಒದಗಿಸಿದೆ.

ಮೈಸೂರಿನ ವಿವಿಧ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರು ಭಾರಿ ಪ್ರಮಾಣದ ಲಗೇಜುಗಳನ್ನು ಹೊತ್ತುಕೊಂಡು ಸುತ್ತುವ ಬದಲು ಇದೀಗ ಮೈಸೂರು ಕೇಂದ್ರ ರೈಲು ನಿಲ್ದಾಣದ ಒಂದನೇ ಪ್ಲಾಟ್‌ಫಾರ್ಮ್‌ನಲ್ಲಿ ಡಿಜಿಟಲ್ ಸ್ಮಾರ್ಟ್ ಲಗೇಜ್ ಲಾಕರ್' ಪಡೆಯಬಹುದು. ಅದೂ ಕಡಿಮೆ ದರದಲ್ಲಿ ಮೊಬೈಲ್ ಮೂಲಕವೇ ಲಾಕರ್ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ.

ಈ ಲಾಕರ್ ಸ್ವಯಂ ಸೇವೆಯಾಗಿದ್ದು, 'ಐಒಟಿ' (Internet of Things,)ತಂತ್ರಜ್ಞಾನ ಆಧರಿತ ಭದ್ರತಾ ಸೌಲಭ್ಯವನ್ನು ಹೊಂದಿದೆ. ಮೊಬೈಲ್ ಒಟಿಪಿ ಮೂಲಕ ಸೇವೆಯನ್ನು ಪ್ರಯಾಣಿಕರು ಪಡೆಯಬಹುದು. ಇದು ಕಡಿಮೆ ದರದಲ್ಲಿ ಸುಲಭವಾಗಿ ಸಿಗುವ ಸೇವೆಯಾಗಿದ್ದು, ಗಂಟೆ ಆಧರಿತವಾಗಿ ದರವನ್ನು ನಿರ್ಧರಿಸಲಾಗಿದೆ. ಡಿಜಿಟಲ್ ಪಾವತಿಯನ್ನು ಮಾಡಬಹುದು. ಸೇಫ್ ಕ್ಲೋಕ್ಸ್ (Safe Cloaks) ಸೇವೆಯನ್ನು 'ಕ್ಲೋಕ್‌ಟೆಕ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್' ನೀಡುತ್ತಿದೆ. ಮೊದಲು ಈ ಸೇವೆಯನ್ನು ಬೆಂಗಳೂರಿನ ರೈಲ್ವೇ ನಿಲ್ದಾಣದಲ್ಲಿ ನೀಡಲಾಗಿತ್ತು. ಅದನ್ನು ಗಮನಿಸಿ ಮೈಸೂರು ರೈಲ್ವೆ ಡಿಆರ್‌ಎಂ ಮೈಸೂರಿನಲ್ಲಿಯೂ ಅಳವಡಿಸಿದ್ದಾರೆ. ಇದಕ್ಕೆ ಈಗ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಲಾಕರ್‌ಗಳನ್ನು ವಿಸ್ತರಿಸುವ ಚಿಂತನೆ ಇದೆ ಎನ್ನಲಾಗುತ್ತಿದೆ.

ಪ್ರತಿ ಲಾಕರ್‌ನಲ್ಲಿ ನಾಲ್ಕು ಬ್ಯಾಗ್‌ಗಳನ್ನು ಇಡಬಹುದಾಗಿದ್ದು, ಮಧ್ಯಮ ಗಾತ್ರದ ಲಾಕರ್ 6 ಗಂಟೆಗೆ 40, 24 ಗಂಟೆಗೆ 80 ರೂ. ಚಾರ್ಜ್ ಇದೆ. ದೊಡ್ಡ ಲಾಕರ್‌ಗೆ 60 ರೂ. (6 ಗಂಟೆ) ಹಾಗೂ 120 ರೂ. (24 ಗಂಟೆ), ಅತಿ ದೊಡ್ಡ ಲಾಕರ್‌ಗೆ 120 ರೂ. (6 ಗಂಟೆ) ಹಾಗೂ 240 ರೂ. (24 ಗಂಟೆ) ದರವಿದೆ.

ಮಧ್ಯಮ ಗಾತ್ರದ ಲಾಕರ್‌ಗಳು 5, ದೊಡ್ಡ ಗಾತ್ರದ 6 ಹಾಗೂ ಅತಿದೊಡ್ಡ ಗಾತ್ರದ ಲಾಕರ್‌ಗಳು 4 ಇವೆ. ಒಂದು ಲಾಕರ್ ವ್ಯವಸ್ಥೆಯಲ್ಲಿ 14 ಲಾಕರ್‌ಗಳು ಇರುತ್ತವೆ. ಕ್ಯೂಆರ್ ಕೋಡ್ ವ್ಯವಸ್ಥೆಯಿದ್ದು, ಸ್ಕ್ಯಾನ್ ಮಾಡಿ ಹಣ ಪಾವತಿಸಬಹುದು. ಇದರಿಂದ ಪ್ರತಿ ಲಗೇಜಿಗೆ ಹಣ ಪಾವತಿಸುವ ಅವಶ್ಯಕತೆ ಇರುವುದಿಲ್ಲ. ಬೀಗಗಳ ತರುವ ಅಗತ್ಯವಿಲ್ಲ. ಹಾನಿಯ ಬಗ್ಗೆ ಚಿಂತಿಸಬೇಕಿಲ್ಲ, ಕಳುವಾದರೆ 5 ಸಾವಿರ ರೂ. ವಿಮಾ ಸೌಲಭ್ಯವನ್ನು ನೀಡಲಾಗುತ್ತದೆ. ಇಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ, ಆಪ್ ಸಿಗಲಿದ್ದು, ಅಲ್ಲಿ ಟಿಕೆಟ್ ಪಿಎನ್‌ಆರ್ ಸಂಖ್ಯೆಯನ್ನು ನಮೂದಿಸಿದರೆ ಲಾಕರ್ ಸೇವೆ ಲಭ್ಯವಾಗಲಿದೆ. ಹೆಚ್ಚಿನ ಮಾಹಿತಿಗೆ ಅದರಲ್ಲಿ ಸಹಾಯವಾಣಿ ಮೊ: 95358 83452, 80508 15929 ವ್ಯವಸ್ಥೆಯನ್ನು ನೀಡಲಾಗಿದೆ.

ಗಣಿ ಗುತ್ತಿಗೆ ಸಮಸ್ಯೆಗಳ ನಿವಾರಣೆಗೆ ಏಕಗವಾಕ್ಷಿ ವ್ಯವಸ್ಥೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ



ಬೆಂಗಳೂರು, ಅ.10(ಕೆಎಂಶಿ)– ಅರಣ್ಯ ಇಲಾಖೆಯ ಗಣಿ ಗುತ್ತಿಗೆ ಸಮಸ್ಯೆಗಳನ್ನು ಬಗೆಹರಿಸಲು ಏಕಗವಾಕ್ಷಿ ಮಾದರಿ ವ್ಯವಸ್ಥೆ ರೂಪಿಸಿ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಅರಣ್ಯ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳೊಂದಿಗೆ ಮಂಗಳವಾರ ಪರಿಶೀಲನಾ ಸಭೆ ನಡೆಸಿದ ಅವರು, ರಾಜ್ಯದಲ್ಲಿ ಗಣಿ ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ಅರಣ್ಯ ಇಲಾಖೆ ತೀರುವಳಿ ಮತ್ತಿತರ ಅನುಮತಿ ಪತ್ರಗಳನ್ನು ನೀಡಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಗಣಿ ಮತ್ತು ಭೂ ವಿಜ್ಞಾನ, ಕಂದಾಯ ಹಾಗೂ ಅರಣ್ಯ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಅರಣ್ಯ ಇಲಾಖೆ ತೀರುವಳಿ ಪಡೆಯಲು ಬಹಳಷ್ಟು ಪ್ರಕರಣಗಳು ಬಾಕಿ ಇರುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಇದಕ್ಕೆ ಗಣಿ ಗುತ್ತಿಗೆ ಪಡೆದ ಸಂಸ್ಥೆಗಳು ಅರಣ್ಯೀಕರಣಕ್ಕೆ ಪರ್ಯಾಯ ಭೂಮಿ ನೀಡಿಲ್ಲ. ಆನೆಗಳು ಮತ್ತಿತರ ವನ್ಯಜೀವಿಗಳ ಉಪಟಳದಿಂದಾಗಿ ಕೃಷಿ ಭೂಮಿ ಮಾರಲು ಸಿದ್ಧರಿರುವ ರೈತರು ಹಾಸನ ಮತ್ತು ರಾಜ್ಯದ ಇತರ ಕೆಲವು ಭಾಗಗಳಲ್ಲಿದ್ದಾರೆ. ಇಂತಹ ರೈತರಿಗೆ ಈ ಸಂಸ್ಥೆಗಳು ಸೂಕ್ತ ಬೆಲೆ ನೀಡಿ ಜಮೀನು ಖರೀದಿಸಬಹುದು ಎಂದು ಅಧಿಕಾರಿಗಳಿಂದ ಅಭಿಪ್ರಾಯ ವ್ಯಕ್ತವಾಯಿತು. ಭಾರತ ಸರ್ಕಾರ ಸ್ವಾಮ್ಯದ ಕೆಐಓಸಿಎಲ್ ಕುದುರೆಮುಖದ ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಡುವ ಬಗ್ಗೆ ಚರ್ಚಿಸಿ ಬಗೆಹರಿಸಲು ಸೂಚಿಸಲಾಯಿತು.

ಅನಗತ್ಯವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಅರಣ್ಯ ಇಲಾಖೆ ತೊಂದರೆ ನೀಡಬಾರದು. ಅನಗತ್ಯ ವಿಳಂಬ ಮಾಡಬಾರದು. ಅರಣ್ಯ ಇಲಾಖೆಯ 25 ಮಿಲಿಯನ್ ಟನ್ ಅದಿರನ್ನು ಹರಾಜು ಮಾಡುವ ಸಂಬಂಧ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯ ಪಡೆದು ಮುಂದುವರೆಯುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

2023– 24ನೇ ಸಾಲಿನಲ್ಲಿ ಮುಖ್ಯ ಖನಿಜ ಹಾಗೂ ಉಪ ಖನಿಜಗಳಿಗೆ ಸಂಬಂಧಿಸಿದಂತೆ ಸೆಪ್ಟೆಂಬರ್ ಅಂತ್ಯದವರೆಗೆ 3276 ಕೋಟಿ ರೂ.ಗಳ ರಾಜಧನ ಸಂಗ್ರಹಣೆಯಾಗಿದೆ ಎಂಬ ಮಾಹಿತಿಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರಕ್ಕೆ ಸಲ್ಲಿಕೆ ಯಾಗಬೇಕಾದ ರಾಜಧನ ಅನಗತ್ಯವಾಗಿ ಸೋರಿಕೆಯಾಗದಂತೆ ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಜಾಗೃತ ದಳ ಕಾಲಕಾಲಕ್ಕೆ ಪರಿಶೀಲಿಸುವಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ಇದೇ ವೇಳೆ 'ಸಿ' ವರ್ಗದ ಅದಿರಿನ ಬ್ಲಾಕ್‌ಗಳಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಅರಣ್ಯ ಅನುಮತಿಗಳನ್ನು ವರ್ಗಾಯಿಸುವ ಬಗ್ಗೆ ಕಾನೂನು ಅಭಿಪ್ರಾಯ ಪಡೆಯುವುದು, ಈಗಾಗಲೇ ಗಣಿಗಾರಿಕೆ ನಡೆಸಿದ ಅರಣ್ಯ ಪ್ರದೇಶದಲ್ಲಿ ಮತ್ತು ಅರಣ್ಯೇತರ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವ ಕುರಿತು ಚರ್ಚೆ ನಡೆಸಲಾಯಿತು.

ತಮಿಳ್ನಾಡಿಗೆ ನೀರು ಹರಿಸುತ್ತಿರುವುದರ ವಿರುದ್ಧ ಮೈಸೂರಲ್ಲಿ ಧರಣಿ ಮುಂದುವರಿಕೆ



ಮೈಸೂರು,ಅ.10(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವುದನ್ನು ವಿರೋಧಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಟೌನ್‌ಹಾಲ್ ಮುಂಭಾಗ 9ನೇ ದಿನವೂ ಪ್ರತಿಭಟನಾ ಧರಣಿ ಮುಂದುವರೆದಿದ್ದು, ಸವಿತಾ ಸಮಾಜ ಹಾಗೂ ಕರ್ನಾಟಕ ಕನ್ನಡ ಸೇನೆ ಬೆಂಬಲ ನೀಡಿವೆ.

ತಮಿಳುನಾಡು ಕಾವೇರಿ ಕಣಿವೆಯ ವಸ್ತುಸ್ಥಿತಿ ತಿಳಿದಿದ್ದರೂ ನಮಗೆ ನೀರು ಬಿಡಿ ಎಂದು ಹಠ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ರಾಜ್ಯದಲ್ಲಿ ಸೂಕ್ತ ಮಳೆಯಾಗದೆ ಬರಗಾಲ ಆವರಿಸಿದ್ದರೂ ಸರ್ಕಾರ ರೈತರ ನೆರವಿಗೆ ಧಾವಿಸದೆ ನಿರ್ಲಕ್ಷ್ಯವಹಿಸಿದೆ. ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ರಾಜ್ಯವನ್ನು ಬಲಿ ಕೊಡಲಾಗುತ್ತಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಮಳೆಯಾಗದೆ ತೀವ್ರ ಬರಗಾಲ ಆವರಿಸಿದ್ದರೂ ನೀರನ್ನು ತಮಿಳುನಾಡಿಗೆ ಬಿಡುತ್ತಿರುವುದು ರಾಜ್ಯ ಸರ್ಕಾರದ ನಾಚಿಕೆಗೇಡಿನ ಪರಮಾವಧಿ. ಇಂತಹ ಸರ್ಕಾರಗಳು ಕನ್ನಡಿಗರ, ರೈತರ ಹಿತ ರಕ್ಷಣೆ ಮಾಡದೆ ತಮಿಳುನಾಡಿನ ಜನರ ಉದ್ಧಾರಕ್ಕಾಗಿ ನೀರು ಬಿಡುತ್ತಿರುವುದು ಖಂಡನೀಯ. ಇನ್ನಾದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಬೇಕು. ಕೇಂದ್ರ ಸರ್ಕಾರ ಈ ಕೂಡಲೇ ಮಧ್ಯಸ್ಥಿಕೆ ವಹಿಸಿ ನಮಗೆ ಶಾಶ್ವತ ಪರಿಹಾರ ನೀಡಬೇಕು. ನೀರಿದ್ದಾಗ ಮಾತ್ರ ನೀರು ಬಿಡುವ ಸೂತ್ರ ರಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಗೌರವ ಕಾರ್ಯದರ್ಶಿ ಮೆಲ್ಲಹಳ್ಳಿ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್‌ಗೌಡ, ಮಹದೇವಸ್ವಾಮಿ, ಬಾಲಕೃಷ್ಣ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸವಿತಾ ಸಮಾಜದ ರಮೇಶ್, ಶ್ರೀನಿವಾಸ್, ಕುಮಾರ್, ನಾಗೇಂದ್ರ, ಕರ್ನಾಟಕ ಕನ್ನಡ ಸೇನೆಯ ಶೈಲಜಾ, ಯಶೋಧ, ಸುಷ್ಮಾ, ಮಲ್ಲೇಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಮಿತಿ ಮೀರಿದ ಅರವಳಿಕೆ ಚುಚ್ಚುಮದ್ದು ಪರಿಣಾಮ ಯುವಕ ಸಾವು ಆರೋಪ

ಆಸ್ಪತ್ರೆ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಅ.10(ಎಂಟಿವೈ)– ಎಡಗೈ ಮೂಳೆ ಮುರಿದು ಸಣ್ಣ ಶಸ್ತ್ರಚಿಕಿತ್ಸೆಗೆ ದಾಖಲಾದ ಯುವಕನಿಗೆ ಮೈಸೂರಿನ ಎ.ಆರ್.ಆಸ್ಪತ್ರೆಯ ವೈದ್ಯರು ತರಾತುರಿಯಲ್ಲಿ ಮಿತಿ ಮೀರಿದ ಅರವಳಿಕೆ ಮದ್ದು ನೀಡಿ ಸಾವಿಗೆ ಕಾರಣರಾಗಿದ್ದಾರೆ ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆಯ ಮುಖ್ಯಸ್ಥ ಹರಿಹರ ಆನಂದಸ್ವಾಮಿ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಟುಂಬಕ್ಕೆ ಆಧಾರಸ್ತಂಭದಂತೆ ಇದ್ದ ಪಿರಿಯಾಪಟ್ಟಣ ತಾಲೂಕಿನ ನಾಗನಹಳ್ಳಿ ಗ್ರಾಮದ 25 ವರ್ಷದ ಯುವಕ ಎನ್.ಸಿ. ಸ್ವಾಗತ್‌ಗೆ ಎ.ಆರ್.ಆಸ್ಪತ್ರೆಯಲ್ಲಿ ಮಿತಿ ಮೀರಿ ಅರವಳಿಕೆ ಚುಚ್ಚುಮದ್ದು ನೀಡಿದ್ದಾರೆ. ಆ ಬಳಿಕ ಆತ ಕೋಮಾಕ್ಕೆ ಜಾರಿದ ಕಾರಣ ಕಾವೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಾರನೇ ದಿನ ಆತ ಮೃತಪಟ್ಟಿದ್ದಾನೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆ ವೈದ್ಯರ ವಿರುದ್ಧ ಕ್ರಮ ಕೈಗೊಂಡು ನೊಂದ ಕುಟುಂಬಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕು. ಇಲ್ಲದಿದ್ದರೆ, ಉಗ್ರ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಸಿದರಲ್ಲದೆ, ಆಸ್ಪತ್ರೆ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೃತನ ಕುಟುಂಬದವರಾದ ನಾಗರತ್ನ ಎನ್.ಎಸ್. ಚಂದ್ರಯ್ಯ, ವೇದಿಕೆಯ ಡಿ. ಕುಮಾರ್, ಟಿ.ಈರಯ್ಯ, ಸೀಗೂರು ವಿಜಯಕುಮಾರ್, ಎಚ್.ಡಿ. ರಮೇಶ್, ಜಯಸ್ವಾಮಿ ಇನ್ನಿತರರು ಇದ್ದರು.

ಆರ್.ಕೃಷ್ಣರಿಗೆ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ಆಗ್ರಹ

ಮೈಸೂರು, ಅ.10(ಎಂಟಿವೈ)– ಅಖಿಲ ಕರ್ನಾಟಕ ಅರುಧತಿಯಾರ್ ಮಹಾಸಭಾ ರಾಜ್ಯಾಧ್ಯಕ್ಷ ಆರ್.ಕೃಷ್ಣ ಅವರನ್ನು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಥವಾ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನಿಯೋಜಿಸುವಂತೆ ಮಹಾಸಭಾ ಜಿಲ್ಲಾಧ್ಯಕ್ಷ ಕೆ.ಸುರೇಶ್ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ಕಟ್ಟ ಕಡೇ ಸಮುದಾಯವೇ ಪೌರಕಾರ್ಮಿಕ, ಸಫಾಯಿ ಕರ್ಮಚಾರಿಗಳಾಗಿದ್ದಾರೆ. ಈ ಸಮುದಾಯಕ್ಕೆ ಒಳಮೀಸಲಾತಿ ನೀಡುವ ನಿಟ್ಟಿನಲ್ಲಿ ಆರ್.ಕೃಷ್ಣ ಹೋರಾಟ ಮಾಡಿದ್ದಾರೆ. ಪೌರಕಾರ್ಮಿಕರಿಗೆ ವಿದೇಶ ಪ್ರವಾಸ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಲ್ಯಾಪ್‌ಟಾಪ್, ಸಾಲಿಗ್ರಾಮದಲ್ಲಿ ಪೌರಕಾರ್ಮಿಕ ಕುಟುಂಬಗಳಿಗೆ ಹಕ್ಕುಪತ್ರ ಸೌಲಭ್ಯ ದೊರಕಿಸಿ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಫಾಯಿ ಕರ್ಮಚಾರಿಗಳಿಗೆ ನ್ಯಾಯ, ಸೌಲಭ್ಯ ದೊರಕಿಸಿಕೊಡಲು ಸೂಕ್ತ ಸ್ಥಾನಮಾನ ನೀಡಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಸಂಘಟನೆ ಪದಾಧಿಕಾರಿಗಳಾದ ಹೆಚ್.ಧರ್ಮರಾಜು, ಶ್ರೀನಿವಾಸ್, ಎನ್.ವೆಂಕಟೇಶ್, ಮಹೇಶ್, ರಂಗಸ್ವಾಮಿ, ವರದ ಇದ್ದರು.

ಮುಸ್ಲಿಂರಿಗೆ ಶೇ.8 ಮೀಸಲಾತಿಗೆ ಆಗ್ರಹಿಸಿ ನಾಳೆ ಎಸ್‌ಡಿಪಿಐ ಧರಣಿ

ಮೈಸೂರು, ಅ.10(ಎಂಟಿವೈ)– ರಾಜ್ಯ ಸರ್ಕಾರ ಕಾಂತರಾಜು ಆಯೋಗದ ಜಾತಿ ಜನಗಣತಿ ವರದಿ ಅಂಗೀಕರಿಸಿ, ಮುಸ್ಲಿಂ ಸಮುದಾಯದ ಮೀಸಲಾತಿ ಪ್ರಮಾಣವನ್ನು ಶೇ.8ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ಅ.12 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ ಒಂದರವರೆಗೆ ನಗರದ ಎನ್.ಆರ್.ಮೊಹಲ್ಲಾದ ಡಾ. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಅಮ್ಜದ್ ಖಾನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರ ಕಾಂತರಾಜು ಆಯೋಗ ಸಿದ್ಧಪಡಿಸಿರುವ ಜಾತಿ ಗಣತಿಯ ವರದಿಯನ್ನು ಅಂಗೀಕರಿಸಬೇಕು. ಅಲ್ಲದೆ ವರದಿಯಲ್ಲಿ ಉಲ್ಲೇಖಿಸಿರುವಂತೆ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವಂತೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅ.9ರಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಈ ಅಭಿಯಾನದ ಅಂಗವಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪೋಸ್ಟರ್ ಅಭಿಯಾನ, ಧರಣಿ, ಪ್ರತಿಭಟನೆ ನಡೆಸಲಾಗುತ್ತಿದೆ. ಅದರಂತೆ ಮೈಸೂರಲ್ಲೂ ಧರಣಿ ಹಮ್ಮಿಕೊಳ್ಳಲಾಗಿದ್ದು, ಪ್ರಗತಿಪರರು, ಅವಕಾಶವಂಚಿತರು, ಇನ್ನಿತರ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಎಸ್.ಸ್ವಾಮಿ, ಮೊಹಮ್ಮದ್ ಶಫಿವುಲ್ಲಾ, ಮನ್ಸೂರ್ ಅಹಮದ್ ಇದ್ದರು.

ಜೆಆರ್‌ಎಫ್ ಮಾದರಿಯಲ್ಲಿ ಫೆಲೋಶಿಪ್ ನೀಡಲು ಅರ್ಜಿ ಆಹ್ವಾನ

ಮೈಸೂರು,ಅ.10–ಕರ್ನಾಟಕ ರಾಜ್ಯದ ಶಾಸನಬದ್ಧ ಅಂಗೀಕೃತವಾದ ವಿಶ್ವವಿದ್ಯಾನಿಲಯಗಳಲ್ಲಿ ಪೂರ್ಣಕಾಲಿಕವಾಗಿ ಪದವಿಯಲ್ಲಿ 2023–24ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಮೂರು ವರ್ಷ ಮತ್ತು ಎಂಫಿಲ್ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ 2 ವರ್ಷಗಳ ಅವಧಿಗೆ ಒಂದು ಕೋರ್ಸಿಗೆ ಒಂದು ಬಾರಿ ಮಾತ್ರ ಜೆಆರ್‌ಎಫ್ ಮಾದರಿಯಲ್ಲಿ ಪಿಎಚ್.ಡಿ ವಿದ್ಯಾರ್ಥಿಗಳಿಗೆ ನಿರ್ವಹಣಾ ವೆಚ್ಚವನ್ನು ಫೆಲೋಶಿಪ್ ಮೂಲಕ ನೀಡಲಾಗುವುದು. ಆಸಕ್ತರು ಆನ್‌ಲೈನ್ ಜಾಲತಾಣ ವಿಳಾಸ ಸೇವಾ ಸಿಂಧು ಲಾಗಿನ್ ಅಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಅ.31ರವರೆಗೆ ವಿಸ್ತರಿಸಲಾಗಿರುತ್ತದೆ. ಎಲ್ಲಾ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಹಾಗೂ ಆನ್ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಜಿಲ್ಲಾ ಕಚೇರಿಗೆ ತಪ್ಪದೆ ಸಲ್ಲಿಸಬೇಕು ಎಂದು ಇಲಾಖೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.


ನಾಳೆ ಉಚಿತ ತಪಾಸಣಾ, ವಿಶೇಷ ಚಿಕಿತ್ಸಾ ಶಿಬಿರ

ಮೈಸೂರು, ಅ.10– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವತಿಯಿಂದ "World Arthritis Day" ಅಂಗವಾಗಿ 2023ರ ಅ.12 ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಉಚಿತ ತಪಾಸಣಾ ಮತ್ತು ವಿಶೇಷ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ.ಆರ್.ಸಿ.ಮೈತ್ರೇಯಿ 8618570803, ಡಾ.ಎಂ.ಡಿ.ಸಂಜಯ್‌ಕುಮಾರ್ 9986083244, ಡಾ.ಭೀಮಾರೆಡ್ಡಿ 9740564173, ಡಾ. ಸಂಗೀತ 8722240385 ಇವರನ್ನು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಸಂಪರ್ಕಿಸಬಹುದು ಎಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.31ರವರೆಗೆ ಧ್ವನಿ–ಬೆಳಕು ಕಾರ್ಯಕ್ರಮ ರದ್ದು

ಮೈಸೂರು,ಅ.10–ದಸರಾ ಮಹೋತ್ಸವದ ಪೂರ್ವಭಾವಿ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಹಾಗೂ ಅರಮನೆ ಆವರಣದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಹಿನ್ನೆಲೆಯಲ್ಲಿ ಅ.9ರಿಂದ ಅ.31ರವರೆಗೆ ಅರಮನೆ ಆವರಣದಲ್ಲಿ ನಡೆಯುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ.

ಬೌದ್ಧ ಭಿಕ್ಕು ವೀರ್ಯಶೀಲ ಭಂತೇಜಿ ನಿಧನ



ಮೈಸೂರು,ಅ.10–ತಾಲೂಕಿನ ಕಡಕೊಳ ಸಮೀಪದ ಬ್ಯಾತಹಳ್ಳಿಯಲ್ಲಿರುವ ರಾಜಗೃಹ ಬುದ್ಧ ವಿಹಾರದ ಸಂಸ್ಥಾಪಕರು, ಬೌದ್ಧಭಿಕ್ಕುಗಳಾದ ವೀರ್ಯಶೀಲ ಭಂತೇಜಿಯವರು ಮಂಗಳವಾರ ಬೆಳಗ್ಗೆ ನಿಧನರಾದರು.

ಬುದ್ಧವಿಹಾರದಲ್ಲಿ ಬೆಳಗ್ಗೆ 11.30ಕ್ಕೆ ಭಿಕ್ಕು ಸಂಘದಿಂದ ಪ್ರಾರ್ಥನೆಯನ್ನು ಸಲ್ಲಿಸಿ, ನಂತರ ಮಧ್ಯಾಹ್ನ 1.45ಕ್ಕೆ ಮೈಸೂರಿನ ಅಶೋಕ ವೃತ್ತದಲ್ಲಿರುವ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು. ನಂತರ ಅವರ ಪಾರ್ಥಿವ ಶರೀರವನ್ನು ಸ್ವಗ್ರಾಮ ಮದ್ದೂರು ತಾಲೂಕಿನ ಹೆಮ್ಮನಹಳ್ಳಿಗೆ ಕೊಂಡೊಯ್ದು ಅವರ ಅಂತ್ಯಸಂಸ್ಕಾರವನ್ನು ಸಂಜೆ 4 ಗಂಟೆಯಲ್ಲಿ ಬೌದ್ಧರ ವಿಧಿವಿಧಾನದಂತೆ ನೆರವೇರಿಸಲಾಯಿತು.

ಕೃತಿಗಳು: ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಭಾಷಣಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ರಾಜ್ಯಾದ್ಯಂತ ನಡೆದ ಬೌದ್ಧಧಮ್ಮದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಬುದ್ಧ ಮತ್ತು ಬಾಬಾ ಸಾಹೇಬರ ಚಿಂತನೆಗಳನ್ನು ಹಂಚಿಕೊಂಡಿದ್ದರು. ಗಾಂಧಿ ಮತ್ತು ಅಸ್ಪೃಶ್ಯರ ಬಂಧ ವಿಮೋಚನೆ ಕೃತಿಯನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದರು. ಪತೀತ ಪಾವನ ಮೈತ್ರೇಯ ಭೀಮ ಉವಾಚ, ಅಂಬೇಡ್ಕರ್ ಜೀವನ ಮತ್ತು ಧ್ಯೇಯ ಸೇರಿದಂತೆ ಅನೇಕ ಕೃತಿಗಳನ್ನು ಬರೆದಿದ್ದರು.

ಸನಾತನ ಬೇಡ, ಸಮಾನತೆ ಧರ್ಮ ಒಪ್ಪಿ ಮುನ್ನಡೆಯೋಣ

ಉಪನ್ಯಾಸ ಸಂವಾದ ಕಾರ್ಯಕ್ರಮದಲ್ಲಿ ಚಿಂತಕ ಜಿ.ರಾಮಕೃಷ್ಣ ಅಭಿಪ್ರಾಯ



ಮೈಸೂರು, ಅ.10(ಜಿಎ)–ಸನಾತನ ಬೇಡ, ಸಮಾನತೆಯ ಧರ್ಮವನ್ನು ಒಪ್ಪಿ ಮುನ್ನಡೆಯೋಣ. ಅದರಿಂದ ಎಲ್ಲರಿಗೂ ಒಳಿತಾಗಲಿದೆ ಎಂದು ಚಿಂತಕ ಜಿ.ರಾಮಕೃಷ್ಣ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಅಂಗಳ ಸಾಹಿತ್ಯ ಬಳಗವು ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ 'ಭಾರತದಲ್ಲಿ ಮಾನವತೆ ವಿಕಾಸಕ್ಕೆ ಇರುವ ಸವಾಲುಗಳು' ಕುರಿತು ಮಂಗಳವಾರ ಆಯೋಜಿಸಿದ್ದ ಉಪನ್ಯಾಸ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ದೊರೆತ ಬಳಿಕವೂ ನಾವು ಬೌದಿಕವಾಗಿ ಕುಗ್ಗಿದ್ದೇವೆ ಎಂಬುದಕ್ಕೆ ಇಂದಿನ ರಾಷ್ಟ್ರೀಯವಾದಿಗಳ ವಾದವೇ ಉದಾಹರಣೆ. ಸನಾತನ ಧರ್ಮವೆಂದರೆ ಶಾಶ್ವತ ಎಂಬ ಅರ್ಥವಿದೆ. ಅದರ ವಿರುದ್ಧ ಮಾತನಾಡಿದಾಗ, ಅದನ್ನೇ ಹೇಳಿ ಆರ್ಭಟಿಸುವುದು, ಅವರ ವಿರುದ್ಧ ಕೇಸ್ ದಾಖಲಿಸುವುದು ಶೋಭೆಯಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದೂ ಶಾಶ್ವತವಲ್ಲ, ಬದಲಾವಣೆ ಜಗದ ನಿಯಮ ಎಂಬ ಸತ್ಯ ಅರಿಯಬೇಕಿದೆ ಎಂದರು.

1947ರಲ್ಲಿ ಕೋಮುವಾದವೆಂದು ಗುರುತಿಸಲ್ಪಟ್ಟ ವಿಚಾರಗಳು ಇಂದು ರಾಷ್ಟ್ರೀಯವಾದವೆಂದು ಪ್ರಸ್ತುತಿಗೊಳ್ಳುತ್ತಿದೆ. ಮಹಿಳೆ ಹಾಗೂ ದಲಿತರ ದೃಷ್ಟಿಕೋನದಿಂದ ಸನಾತನ ಧರ್ಮವನ್ನು ನೋಡದಿದ್ದರೆ ಅದರ ಅಪಾಯದ ಅರಿವಾಗುವುದಿಲ್ಲ ಎಂದು ಪ್ರತಿಪಾದಿಸಿದರು.

ಉಪನಿಷತ್ತಿನ ಕಾಲದಿಂದ 10ನೇ ಶತಮಾನದವರೆಗೆ ಅಸ್ಪೃಶ್ಯತೆ ವಿರೋಧಿಸಿ ಯಾವುದೇ ಗ್ರಂಥ ಬರಹಗಳು ಬರಲಿಲ್ಲ. ಎಲ್ಲರೂ ಸಮಾನರೆಂದು ಒಪ್ಪಿಕೊಳ್ಳುವ ಕಾರ್ಯ ನಡೆಯಲಿಲ್ಲ. ಸನಾತನ ಧರ್ಮವು ಶ್ರೇಣೀಕೃತ ವ್ಯವಸ್ಥೆಯನ್ನು ಬೆಂಬಲಿಸಿತೇ ಹೊರತು ವ್ಯಕ್ತಿತ್ವ ನಿರ್ಮಾಣದ ಕೆಲಸ ಮಾಡಲಿಲ್ಲ. ದಲಿತರು ಸಾವಿರಾರು ವರ್ಷದಿಂದ ನೋವು ಸಹಿಸಿಕೊಂಡು ಬಂದಿದ್ದಾರೆ. ಈಗ ಕೇವಲ ಯಾರೋ ಆಡಿದ ಮಾತಿಗೆ ಉದ್ವೇಗಗೊಳ್ಳುವುದು ಯಾಕೆ ಎಂದು ಪ್ರಶ್ನಿಸಿದ ಅವರು, ಜಾತಿ ವ್ಯವಸ್ಥೆ ಶಾಶ್ವತವಾಗಿ ಇರಬೇಕು ಎಂದು ಇಚ್ಛಿಸುವವರು ಸನಾತನ ಧರ್ಮದ ವಿರುದ್ಧ ಮಾತನಾಡಿದಾಗ ರೋಷಗೊಳ್ಳುತ್ತಾರೆ. ಬದಲಾವಣೆ ಬೇಕು ಎನ್ನುವವರನ್ನೂ ಗೌರವಿಸಿ ಎಂದರು.

ಕಷ್ಟ ಬಂದಾಗ ದೇವರು ಬಂದು ಸರಿ ಮಾಡುತ್ತಾನೆ ಎಂದು ಪುರಾಣದಲ್ಲಿ ಉಲ್ಲೇಖವಿದೆ. ದೇವರು ಸರಿ ಮಾಡಿದ ಸಮಾಜದಲ್ಲಿ ತಪ್ಪುಗಳಿರಲು ಸಾಧ್ಯವಿಲ್ಲ. ಹಾಗಿದ್ದರೂ ಕೆಲವರು ಬದಲಾವಣೆಯನ್ನು ತಪ್ಪು ಎಂದು ಭಾವಿಸುತ್ತಾರೆ. ರಾಜನಿಂದ ಸಾಮ್ರಾಜ್ಯ ಸುಧಾರಣೆ ಎಂಬ ತತ್ವದಲ್ಲಿ ಹುರುಳಿಲ್ಲ. ಜನರು ಪ್ರಜ್ಞಾಪೂರ್ವಕವಾಗಿ ಮಧ್ಯಪ್ರವೇಶಿಸಿದ ಪ್ರಕರಣಗಳಲ್ಲಿ ಬದಲಾವಣೆ ಆಗಿದೆ ಎಂಬುದನ್ನು ಮರೆಯಬಾರದು ಎಂದರು. ಕಾರ್ಯಕ್ರಮದಲ್ಲಿ ಲೇಖಕ ನಾ.ದಿವಾಕರ, ಹೋರಾಟಗಾರ್ತಿ ಈ.ರತಿರಾವ್, ಸಂಶೋಧಕರ ಸಂಘದ ಅಧ್ಯಕ್ಷ ಸಿ.ಮಹೇಶ್, ಅಂಗಳ ಸಾಹಿತ್ಯ ಬಳಗದ ಸಂಜಯ್ ಕುಮಾರ್, ಪತ್ರಕರ್ತ ಜಿ.ಮೋಹನ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪರಂಜ್ಯೋತಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.10.2023 ಬುಧವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ


■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯಿಡ್ ವೈದ್ಯಕೀಯ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.

■ **ರಂಗಾಯಣ, ಮೈಸೂರು:** ಬಿ.ವಿ.ಕಾರಂತ ಕಾಲೇಜು ರಂಗೋತ್ಸವ–2023, ಹುಣಸೂರಿನ ಟ್ಯಾಲೆಂಟ್ ಎಜುಕೇಷನ್ ಟ್ರಸ್ಟ್ ವಿದ್ಯಾರ್ಥಿಗಳಿಂದ ಹುಲಿಯ ನೆರಳು, ರಚನೆ : ಚಂದ್ರಶೇಖರ ಕಂಬಾರ, ನಿರ್ದೇಶನ: ಎಂ. ಅರ್ಜುನ್, ಸ್ಥಳ: ಭೂಮಿಗೀತೆ, ಸಂಜೆ 5.30ರಿಂದ

■ **ಚಿನ್ಮಯ ಮಿಷನ್:** ಗೀತಾ ಜ್ಞಾನ ಯಜ್ಞ, ಧರ್ಮಸಂಸ್ಥಾನ ಯೋಗ (ಭಗವದ್ಗೀತೆಯ 5ನೇ ಅಧ್ಯಾಯ), ಸ್ವಾಮಿ ದತ್ತಪಾದಾನಂದ ಅವರಿಂದ ಸ್ಥಳ: ಚಿನ್ಮಯ ಮಿಷನ್, ವಿದ್ಯಾರಣ್ಯಪುರಂ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ– ಡಿ. ಶ್ರೀಹರಿ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಟಿ.ಎಸ್. ಗೋಪಾಲ್, 7.15 ಭಾವಗೀತೆಗಳು, ವಿಕಾಸ್ ಕೆ ವಸಿಷ್ಠ, ಬಿ.ಜೆ. ಭರತ್, 9.00 ವೃತ್ತಿ ಮಾಗದರ್ಶನ–ಸೈಬರಿ ಸೆಕ್ಯುರಿಟಿ ಕ್ಷೇತ್ರದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ರಾಮಕೃಷ್ಣ ಹೆಗಡೆ ಅವರೊಂದಿಗೆ ಮಾತುಕತೆ ಭಾಗವಹಿಸುವವರು ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಸಂಗೀತ–ಸಮೀರ್ ರಾವ್–ಬಾನ್ಸುರಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ರಾಜೇಶ್ವರೀ ಪಂಡಿತ್, ಅಂಬಯ್ಯನುಲಿ, 1.20 ಭಾವಗೀತೆಗಳು –ಶಾಂತಲಾ ವಟ್ಟಂ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಪಿ. ರಮಾ–ಹಾಡುಗಾರಿಕೆ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು–ಆಪ್ತ ಸಮಾಲೋಚಕಿ ಸರಳಾ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ– ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50ಕೃಷಿರಂಗ–ಕಿಸಾನ್‌ವಾಣಿ–ಸಾವಯವ ಕೃಷಿಕರ ಯಶೋಗಾಥೆಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಡಾ.ಕೆ. ರಾಜು ಹಾಗೂ ಪಿ.ರಮೇಶ್, 9.30 ಉಸ್ತಾದ್ ಬಡೇ ಗುಲಾಂ ಅಲಿಖಾನ್–ಹಾಡುಗಾರಿಕೆ, 10.00 ಜನಪದ ಸಂಗೀತ–ದೊಡ್ಡರಾಚಪ್ಪ ಮತ್ತು ಸಂಗಡಿಗರು, 10.30 ಸವಿನೆನಪು

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಶ್ರೀ ಕಪಿಲಾಚಾರ್ಯ ಹಲಗಲಿ ಅವರಿಂದ ಭಗವದ್ಗೀತೆ 12ನೇ ಅಧ್ಯಯನ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಶ್ರೀ ಉತ್ತರಾದಿ ಮಠ ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಭಗವದ್ಗೀತಾ ಅಭಿಯಾನ, ಪಂ. ಶ್ರೀ ಕಪಿಲಾಚಾರ್ಯ ಗಲಗಲಿ ಅವರಿಂದ ಪ್ರವಚನ, ಸ್ಥಳ: ರೋಗಮೋಚನೆ ಶ್ರೀ ಧನ್ವಂತರಿ ಸನ್ನಿದಾನ, ಶ್ರೀ ಉತ್ತರಾಧಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಮಿತ್ರ


ಬುಧವಾರ 11 ಅಕ್ಟೋಬರ್ 2023



ಸೇವೆಗೆ ಅವಕಾಶ ನೀಡಿ

ವರಿಷ್ಠರಾದ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿ ಹಾಗೂ ಪ್ರಧಾನಮಂತ್ರಿಯಾಗಿ ಶಿಕ್ಷಣ ಕ್ಷೇತ್ರ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಹಾಗೆಯೇ ಹೆಚ್.ಡಿ.ಕುಮಾರಸ್ವಾಮಿ ಅವರು 2006ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದರು. ಎಲ್ಲಾ ವರ್ಗದವರೂ ಮೆಚ್ಚುವಂತಹ ಮಾದರಿ ಆಡಳಿತ ನೀಡಿದರು. ಆಗ ನಿಜಕ್ಕೂ ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟವಾಗಿತ್ತು. ಅವರ ಆಡಳಿತ ವೈಖರಿ ದೇಶಕ್ಕೆ ಮಾದರಿಯಾಗಿತ್ತು. ಗ್ರಾಮ ವಾಸ್ತವ್ಯ ಆರಂಭಿಸುವ ಮೂಲಕ ರಾಜ್ಯ ರಾಜಕೀಯದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದರು. ದಿಟ್ಟತನದಿಂದ ಲಾಟರಿ, ಸಾರಾಯಿ ನಿಷೇಧ ಮಾಡಿದರು. ಹೆಚ್‌ಐವಿ ಬಾಧಿತರ ಮನೆಯಲ್ಲಿ ವಾಸ್ತವ್ಯ ಹೂಡಿ ಅಂತಹವರಲ್ಲಿ ಆತ್ಮಸ್ಥೈರ್ಯ ತುಂಬಿದರು. ಕೇವಲ 20 ತಿಂಗಳಲ್ಲಿ 1054 ಪ್ರೌಢಶಾಲೆ, 496 ಪದವಿ ಪೂರ್ವ ಕಾಲೇಜು, 181 ಪ್ರಥಮ ದರ್ಜೆ ಕಾಲೇಜು, 26 ಪಾಲಿಟೆಕ್ನಿಕ್, 14 ಐಟಿಐ, 13 ಇಂಜಿನಿಯರಿಂಗ್ ಕಾಲೇಜು, 6 ವೈದ್ಯಕೀಯ ಕಾಲೇಜು ಸ್ಥಾಪಿಸಿ ಇತಿಹಾಸ ಸೃಷ್ಟಿಸಿದರು. ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಹೆಚ್.ಡಿ. ರೇವಣ್ಣ ಅವರು ಶಾಲಾ ಕಾಲೇಜಿಗೆ ಸೂರು ಕಲ್ಪಿಸುವಲ್ಲಿ ಪವಾಡಸದೃಶ ಕಾರ್ಯವನ್ನೇ ಮಾಡಿದರು. ಕುಮಾರಸ್ವಾಮಿ ಅವರ ಆಡಳಿತ ನಾನೂ ಸೇರಿದಂತೆ ಹಲವರನ್ನು ಪ್ರಭಾವಿಸಿತು. ಸಹಜವಾಗಿ ನನಗೂ ಶಿಕ್ಷಣ ಕ್ಷೇತ್ರದ ಬಗ್ಗೆ ಅಪಾರ ಒಲವಿದೆ. ಶಿಕ್ಷಕರ ಕ್ಷೇತ್ರದ ಹಿಂದಿನ ಚುನಾವಣೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ್ದೇನೆ. ಶಿಕ್ಷಕ ವರ್ಗದ ಸಮಸ್ಯೆಗಳು ಹಾಗೂ ಅವರ ನ್ಯಾಯಯುತ ಬೇಡಿಕಗಳ ಬಗ್ಗೆ ಅರಿವಿದೆ. ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ಸೇವೆ ಸಲ್ಲಿಸುವ ಹಂಬಲವಿದೆ. ಹಾಗಾಗಿ ಮುಂಬರುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಅವಕಾಶ ಮಾಡಿಕೊಟ್ಟರೆ ಪಕ್ಷ ಹಾಗೂ ಮತದಾರರ ಆಶಯದಂತೆ ಶ್ರದ್ಧಾಪೂರ್ವಕವಾಗಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತೇನೆ. ಈ ನಿಟ್ಟಿನಲ್ಲಿ ಒಮ್ಮೆ ಅವಕಾಶ ನೀಡಿ, ಹರಸುವಂತೆ ನಾಯಕರಲ್ಲಿ ವಿನಮ್ರವಾಗಿ ಮನವಿ ಮಾಡಿಕೊಳ್ಳುತ್ತೇನೆ.

–ಕೆ.ವಿವೇಕಾನಂದ









ನಮ್ಮ ನಾಯಕರ ಗಮನಕ್ಕೆ ತರಲಾಗುವುದು

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಹಲವು ಬಾರಿ ನಾವೇ ಗೆದ್ದಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರಾದ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ವರಿಷ್ಠರಾದ ಹೆಚ್.ಡಿ. ದೇವೇಗೌಡರು ಹಾಗೂ ಕುಮಾರಣ್ಣನವರನ್ನು ಭೇಟಿಯಾಗಿ ಮುಂಬರುವ ಚುನಾವಣೆಯಲ್ಲಿ ಈ ಕ್ಷೇತ್ರವನ್ನು ನಮಗೆ ಬಿಟ್ಟುಕೊಡಬೇಕೆಂದು ಬಿಜೆಪಿಗೆ ಒತ್ತಾಯಿಸುವಂತೆ ಮನವಿ ಮಾಡಿದ್ದೇವೆ. ಶ್ರೀಕಂಠೇಗೌಡರು ಈ ಹಿಂದೆ ಅವರು ದಕ್ಷಿಣ ಪದವೀಧರರ ಕ್ಷೇತ್ರ ಪ್ರತಿನಿಧಿಸಿದ್ದರು. ಕಳೆದ ಚುನಾವಣೆಯಲ್ಲಿ ಹೆಚ್.ಕೆ.ರಾಮು ಅವರಿಗೆ ಅವಕಾಶ ಮಾಡಿಕೊಟ್ಟರು. ಹಾಗಾಗಿ ಅವರು ಆ ಕ್ಷೇತ್ರದ ಮೇಲೆ ಗಮನಹರಿಸಬಹುದು. ಹಾಗಾಗಿ ಕೆ.ವಿವೇಕಾನಂದ ಶಿಕ್ಷಕರ ಕ್ಷೇತ್ರದ ಆಕಾಂಕ್ಷಿಯಾಗಿದ್ದಾರೆ. ಈ ವಿಚಾರವನ್ನು ನನ್ನ ಗಮನಕ್ಕೂ ತಂದಿದ್ದಾರೆ. ಈ ಸಂಬಂಧ ನಾಯಕರು, ಈ ಭಾಗದ ಎಲ್ಲಾ ಶಾಸಕರು, ಮಾಜಿ ಶಾಸಕರು, ಮುಖಂಡರು ಹಾಗೂ ಕಾರ್ಯಕರ್ತರ ಅಭಿಪ್ರಾಯ ಪಡೆದು, ನಿರ್ಧರಿಸಲಿದ್ದಾರೆ. –ಸಾ.ರಾ.ಮಹೇಶ್, ಮಾಜಿ ಸಚಿವರು


ಶಿಕ್ಷಕರ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿಯಾಗಬಲ್ಲ ಜೆಡಿಎಸ್‌ನ ಕೆ.ವಿವೇಕಾನಂದ



ರಾಜಕಾರಣ, ಬರೀ ಹಣ ಮತ್ತು ಹೆಸರು ಗಳಿಕೆಯ ಮಾರ್ಗವಲ್ಲ. ಅದಕ್ಕೂ ಮಿಗಿಲಾಗಿ ಇದು ಜನಸೇವೆಗಿರುವ ಅತ್ಯಂತ ಪ್ರಬಲ ವೇದಿಕೆ. ಬದ್ಧತೆಯಿಂದ ಜವಾಬ್ದಾರಿ ನಿರ್ವಹಿಸುವ ಮೂಲಕ ಲಭಿಸುವ ಆತ್ಮತೃಪ್ತಿ ಸಕಲ ಸಂಪತ್ತನ್ನೂ ಮೀರಿಸುವಂತದ್ದು.

ಇದು ಮೈಸೂರಿನ ಯಶಸ್ವಿ ಉದ್ಯಮಿ, ಕರ್ನಾಟಕ ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ (ಕರ್ನಾಟಕ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್) ಮಾಜಿ ಅಧ್ಯಕ್ಷ, ಜೆಡಿಎಸ್ ಮುಖಂಡ ಕೆ.ವಿವೇಕಾನಂದ ಅವರ ಸೇವಾಪರ ಚಿಂತನೆ.

ಗ್ರಾಮೀಣ ಹಾಗೂ ಬಡ ರೈತಾಪಿ ಕುಟುಂಬದ ವಿವೇಕಾನಂದನವರು ಉದ್ಯೋಗ ಹರಸಿ ಮೈಸೂರಿಗೆ ಬಂದವರು ಈಗ ಹತ್ತಾರು ಮಂದಿಗೆ ಉದ್ಯೋಗ ನೀಡುವ ಉದ್ಯಮಿಯಾಗಿ ಬೆಳೆದಿದ್ದಾರೆ. ಕಷ್ಟದ ಕಹಿ ಅರಿತಿರುವ ಇವರು ನೊಂದವರಿಗೆ ನೆರವಾಗಿದ್ದಾರೆ. ಸಾಧ್ಯವಾದ ಮಟ್ಟಿಗೆ ಸಮಾಜ ಸೇವೆಯಲ್ಲೂ ಸಕ್ರಿಯರಾಗಿದ್ದಾರೆ. ತಮ್ಮ ಜೀವನಾನುಭವದ ಆಧಾರದಲ್ಲಿ ಯುವ ಉದ್ಯಮಿಗಳು, ಸಂಘ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿಯೂ ಮಾದರಿಯಾಗಿದ್ದಾರೆ. ಬಾಲ್ಯದಿಂದಲೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕಟ್ಟಾ ಅಭಿಮಾನಿಯಾಗಿದ್ದ ಇವರು ಜೆಡಿಎಸ್‌ನಲ್ಲಿ ದುಡಿದಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿಯವರು ಸೇರಿದಂತೆ ಹಲವು ನಾಯಕರ ಅತ್ಯಾಪ್ತರಾಗಿ ಗುರುತಿಸಿಕೊಂಡಿದ್ದಾರೆ. ಚುನಾವಣೆಗಳ ಸಂದರ್ಭದಲ್ಲಿ ಪಕ್ಷದ ಗೆಲುವಿಗೆ ಅವಿರತವಾಗಿ ಶ್ರಮಿಸಿದ್ದಾರೆ. ಯಶಸ್ವಿ ಉದ್ಯಮಿಯಾಗಿರುವ ಇವರಿಗೆ ರಾಜಕೀಯದಿಂದ ಹಣ, ಕೀರ್ತಿ ಗಳಿಸುವ ಅವಶ್ಯಕತೆ ಇಲ್ಲ. ಆದರೆ ತಮ್ಮದೇ ಆದ ಪರಿಕಲ್ಪನೆಯೊಂದಿಗೆ ರಾಜಕೀಯದ ಮೂಲಕ ಮತ್ತಷ್ಟು ಸೇವೆ ಮಾಡುವ ತುಡಿತ, ಆಶಯ ಇವರಲ್ಲಿ ಗಾಢವಾಗಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಈ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿರುವ ವಿವೇಕಾನಂದರು ಈಗಾಗಲೇ ಸಂಘಟನಾತ್ಮಕ ಪ್ರಕ್ರಿಯೆ ಆರಂಭಿಸಿದ್ದಾರೆ.



ದೇವೇಗೌಡರ ಪ್ರೇರಣೆ

ಚಿಕ್ಕಂದಿನಿಂದಲೂ ಹೆಚ್.ಡಿ.ದೇವೇಗೌಡರ ಬಗ್ಗೆ ಅಪಾರ ಗೌರವ. ರೈತಾಪಿ ಕುಟುಂಬದಲ್ಲಿ ಹುಟ್ಟಿ ರಾಜಕೀಯ ಕ್ಷೇತ್ರದಲ್ಲಿ ಮೈಲಿಗಲ್ಲು ಸ್ಥಾಪಿಸಿದ ದೇವೇಗೌಡರ ರೋಚಕ ಬದುಕು, ವಿವೇಕಾನಂದರಿಗೆ ಪ್ರೇರಣೆಯಾಯಿತು. ಉದ್ಯಮಿಯಾಗಿ ಯಶಸ್ವಿ ಹೆಜ್ಜೆ ಇಡುವ ವೇಳೆಗೆ ರಾಜಕೀಯದ ಒಲವು ಇಮ್ಮಡಿಯಾಯಿತು. ಅದಾಗಲೇ ಜೆಡಿಎಸ್ ಕಾರ್ಯಕರ್ತರಾಗಿದ್ದ ಇವರು, ಪಕ್ಷ ಸಂಘಟನೆಯಲ್ಲಿ ಮತ್ತಷ್ಟು ಸಕ್ರಿಯರಾದರು. ವರಿಷ್ಠರಾದ ಹೆಚ್.ಡಿ.ದೇವೇಗೌಡರು, ಹೆಚ್.ಡಿ. ಕುಮಾರಸ್ವಾಮಿಯವರು, ಹೆಚ್.ಡಿ.ರೇವಣ್ಣನವರು, ಜಿ.ಟಿ.ದೇವೇಗೌಡರು, ಸಾ.ರಾ.ಮಹೇಶ್ ರವರು ಸೇರಿದಂತೆ ಎಲ್ಲಾ ನಾಯಕರಿಗೂ ಆಪ್ತರಾದರು. ಜೆಡಿಎಸ್ ಮೈಸೂರು ನಗರ ಸಂಘಟನಾ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುವ ಮೂಲಕ ಪಕ್ಷವನ್ನು ಮತ್ತಷ್ಟು ಬಲಗೊಳಿಸಲು ಶ್ರಮಿಸಿದರು.

ವಿವೇಕಾನಂದರ ಹಿನ್ನೆಲೆ

ಮಂಡ್ಯ ಜಿಲ್ಲೆ ಮದ್ದೂರು ತಾಲೂಕು, ಕೊಪ್ಪ ಹೋಬಳಿ ಅವ್ವೇರಹಳ್ಳಿ ಗ್ರಾಮದ ಕರೀಗೌಡ ಹಾಗೂ ಚಿಕ್ಕತಾಯಮ್ಮ ದಂಪತಿಯ 6 ನೇ ಪುತ್ರ ವಿವೇಕಾನಂದ. ಸ್ವಗ್ರಾಮ ಹಾಗೂ ಕೊಪ್ಪದಲ್ಲಿ ವ್ಯಾಸಂಗ ಮಾಡಿದ ಇವರು, ಉದ್ಯೋಗ ಅರಸಿ 1994ರಲ್ಲಿ ಮೈಸೂರಿಗೆ ಬಂದರು. ಉದ್ಯೋಗ ಹಿಡಿಯುವ ಅನಿವಾರ್ಯ ಪರಿಸ್ಥಿತಿಯಲ್ಲಿದ್ದ ಅವರು ವಿಕ್ರಾಂತ್ ಕಾರ್ಖಾನೆಯ ಬದಲಿ ನೌಕರರಾಗಿ ಸೇರಿದರು.

ಯಶಸ್ವಿ ಉದ್ಯಮಿಯಾದ ನೌಕರ

ಸುಮಾರು ಹತ್ತು ವರ್ಷಗಳ ಕಾಲ ವಿಕ್ರಾಂತ್ ನೌಕರರಾಗಿದ್ದ ಅವರಲ್ಲಿ ಸ್ವಂತ ಉದ್ಯಮದ ಆಸೆ ಚಿಗುರೊಡೆಯಿತು. ಆಸೆಯೊಂದಿಗೆ ಶ್ರದ್ಧೆ, ಛಲವಿದ್ದರೆ ಸಾಧನೆ ಸಾಧ್ಯ. ವಿವೇಕಾನಂದರಲ್ಲಿ ನಿಖರ ಗುರಿ ಹಾಗೂ ಅದನ್ನು ಸಾಧಿಸುವ ಛಲವಿತ್ತು. ಆ ನಿಟ್ಟಿನಲ್ಲಿ ಹಗಲಿರುಳು ದುಡಿಯಬೇಕೆಂಬ ತುಡಿತವಿತ್ತು. ಹಾಗಾಗಿ ರಿಯಲ್ ಎಸ್ಟೇಟ್ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಬದ್ಧತೆಯಿಂದ ಕೆಲಸ ಮಾಡಿದರು. ಬದುಕಿನಲ್ಲಿ ಏನಾದರೂ ಸಾಧಿಸಬೇಕೆಂಬ ಅವರ ತುಡಿತಕ್ಕೆ ಬಡತನ ಅಡ್ಡಿಯಾಗಲಿಲ್ಲ. ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಅವಿರತವಾಗಿ ಶ್ರಮಿಸಿದರು. ಹಂತ ಹಂತವಾಗಿ ಮೇಲೆ ಬಂದು ಈಗ ಯಶಸ್ವಿ ಉದ್ಯಮಿಯಾಗಿದ್ದಾರೆ. ಹತ್ತಾರು ಜನರಿಗೆ ಉದ್ಯೋಗದಾತರಾಗಿದ್ದು, ವಿಜಯನಗರ 2ನೇ ಹಂತದಲ್ಲಿ ನೆಲೆಸಿದ್ದಾರೆ.

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷರಾಗಿ ಸೇವೆ


ಹೆಚ್.ಡಿ.ಕುಮಾರಸ್ವಾಮಿ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ವಿವೇಕಾನಂದ ಅವರು ಕರ್ನಾಟಕ ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷರಾಗಿ ಅಲ್ಪ ಕಾಲವಿದ್ದರೂ ಗಮನಾರ್ಹ ಕಾರ್ಯ ನಿರ್ವಹಿಸಿದರು. ಹಲವು ವರ್ಷಗಳಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ಇವರಿಗೆ ಇನ್ನಷ್ಟು ಉನ್ನತ ಸ್ಥಾನಗಳು ಲಭಿಸುವ ಸಾಧ್ಯತೆ ಇತ್ತಾದರೂ ಸಾಂದರ್ಭಿಕ ರಾಜಕೀಯ ಕಾರಣಗಳಿಂದ ಅವಕಾಶ ಕೈತಪ್ಪಿದವು. ಆದರೆ ಅಧಿಕಾರ, ಸ್ಥಾನಮಾನಕ್ಕಿಂತ ಪಕ್ಷ ಬಲಪಡಿಸುವಲ್ಲಿ ಆಸಕ್ತಿ ವಹಿಸಿದರು. ಪಕ್ಷಕ್ಕೆ ನಿಷ್ಠೆಯಿಂದ ದುಡಿದರೆ ಒಂದಲ್ಲ ಒಂದು ದಿನ ಪ್ರತಿಫಲ ದೊರಕುತ್ತದೆ ಎಂದು ಆ ನಿಟ್ಟಿನಲ್ಲಿ ಗಮನಹರಿಸಿದರು.

ಹೊಸ ಮುಖ ಬಯಸಿದ್ದಾರೆ

ಹಿಂದಿನಿಂದಲೂ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರು ಜೆಡಿಎಸ್ ಬೆಂಬಲಿಸಿಕೊಂಡು ಬಂದಿದ್ದಾರೆ. ಇದು ಪಕ್ಷದ ಮೇಲಿರುವ ಅವರ ನಂಬಿಕೆಗೆ ಸಾಕ್ಷಿ. ಈ ಬಾರಿಯೂ ಜೆಡಿಎಸ್ ಮೇಲೆ ಮತದಾರರಲ್ಲಿ ಅಪಾರ ಒಲವಿದೆ. ಪ್ರಬುದ್ಧ ಶಿಕ್ಷಕರು ಸೂಕ್ತ ತೀರ್ಮಾನ ಮಾಡುತ್ತಾರೆ. ಹಾಗೆಯೇ ಈ ಬಾರಿ ಹೊಸಬರಿಗೆ ಅವಕಾಶ ನೀಡಬೇಕು ಎಂಬ ಭಾವನೆಯನ್ನು ಹಲವರು ವ್ಯಕ್ತಪಡಿಸಿದ್ದಾರೆ. ರಾಜಕೀಯ ಹರಿಯುವ ನೀರಿನಂತೆ. ಹೊಸಬರಿಗೆ ಅವಕಾಶ ಸಿಕ್ಕರೆ ಬದಲಾವಣೆ ಕಾಣಬಹುದು. ಈ ಹಿಂದೆ ಕ್ಷೇತ್ರವನ್ನು ಪ್ರತಿನಿಧಿಸಿದವರು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿರಬಹುದು. ಆದಾಗ್ಯೂ ಹೊಸಬರಿಗೆ ಅವಕಾಶ ನೀಡುವುದರಿಂದ ಪಕ್ಷ ಮತ್ತಷ್ಟು ಬಲಿಷ್ಠವಾಗಲು ಸಾಧ್ಯ. ಈ ನಿಟ್ಟಿನಲ್ಲಿ ಪಕ್ಷದ ವರಿಷ್ಠರು ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಉದ್ಯಮಿ ವಿವೇಕಾನಂದ ಅವರಿಗೆ ರಾಜಕಾರಣದ ಮೂಲಕ ಹಣ, ಹೆಸರು ಸಂಪಾದಿಸುವ ಅವಶ್ಯಕತೆ ಇಲ್ಲ. ರಾಜಕೀಯ ವೇದಿಕೆ ಮೂಲಕ ಮತ್ತಷ್ಟು ಜನಸೇವೆ ಮಾಡುವ ಆಶಯವನ್ನು ವಿವೇಕಾನಂದರು ಹೊಂದಿದ್ದಾರೆ. ಇವರಿಗೆ ಮುಂಬರುವ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಅವಕಾಶ ನೀಡಿದರೆ ಹಳೇ ಮೈಸೂರು ಭಾಗದಲ್ಲಿ ಪಕ್ಷದ ಶಕ್ತಿ ಕಾಯ್ದುಕೊಳ್ಳಲು ಸಹಕಾರಿಯಾಗುತ್ತದೆ ಎಂಬುದು ಹಲವರ ಅಭಿಪ್ರಾಯವಾಗಿದೆ.

ಹಲವು ಚುನಾವಣೆಗಳಲ್ಲಿ ದುಡಿಮೆ

ವಿವೇಕಾನಂದ ಅವರು ಉದ್ಯಮದ ಜೊತೆಗೆ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕ್ಕೂ ಹೆಚ್ಚಿನ ಸಮಯ ಮೀಸಲಿಟ್ಟಿದ್ದಾರೆ. ಹಲವು ಸಂದರ್ಭಗಳಲ್ಲಿ ಜನರ ಕಷ್ಟ–ಸುಖದಲ್ಲಿ ಭಾಗಿಯಾಗಿದ್ದಾರೆ. ಅಲ್ಲದೆ ಕಳೆದ ಲೋಕಸಭಾ ಚುನಾವಣೆ, ವಿಧಾನಸಭೆ ಚುನಾವಣೆ, ದಕ್ಷಿಣ ಪದವೀಧರರ ಕ್ಷೇತ್ರ ಹಾಗೂ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ್ದಾರೆ. ಪಕ್ಷದ ನಾಯಕರ ಸೂಚನೆಯಂತೆ ಪಕ್ಷ ಸಂಘಟನೆ ಜೊತೆ ಜೊತೆಗೆ ಅಭ್ಯರ್ಥಿಗಳ ಪರ ಮತ ಯಾಚಿಸಿದ್ದಾರೆ. ಕಾರ್ಯಕರ್ತರ ಹುರಿದುಂಬಿಸಿ, ಗೆಲುವಿಗೆ ಶ್ರಮಿಸಿದ್ದಾರೆ. ಹೀಗೆ ಹಲವು ಚುನಾವಣೆಗಳಲ್ಲಿ ಕೆಲಸ ಮಾಡಿದ ಅನುಭವವಿರುವ ವಿವೇಕಾನಂದರು ಎಲ್ಲಾ ವರ್ಗದ ಮತದಾರರ ನಾಡಿ ಮಿಡಿತ ಅರಿತಿದ್ದಾರೆ. ಕಷ್ಟ ಕಾರ್ಪಣ್ಯಗಳ ಬಗ್ಗೆ ತಿಳಿದಿದ್ದಾರೆ. ಸೇವಾ ಮನೋಭಾವವಿರುವ ಇವರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಅವಕಾಶ ನೀಡಬೇಕು ಎಂಬುದು ಅವರ ಆಪ್ತವಲಯದ ಆಗ್ರಹವಾಗಿದೆ.



ಶಿಕ್ಷಕ ವರ್ಗದ ಸಮಸ್ಯೆ, ಬೇಡಿಕೆಗಳ ಅರಿವಿದೆ

ಈ ಹಿಂದೆ ಹಲವು ಚುನಾವಣೆಗಳಲ್ಲಿ ವಿವೇಕಾನಂದರು ಸಕ್ರಿಯವಾಗಿ ಕೆಲಸ ಮಾಡಿದ್ದಾರೆ. ಶಿಕ್ಷಣ ಕ್ಷೇತ್ರದ ಬಗ್ಗೆಯೂ ಅವರಲ್ಲಿ ಅಪಾರ ಆಸಕ್ತಿ ಇದೆ. ಶಿಕ್ಷಕರ ಸಮಸ್ಯೆಗಳು ಹಾಗೂ ಅವರ ನ್ಯಾಯಯುತ ಬೇಡಿಕೆಗಳ ಬಗ್ಗೆ ತುಂಬಾ ಅರಿತಿದ್ದಾರೆ. ಅವುಗಳನ್ನು ಪಟ್ಟಿ ಮಾಡಿಕೊಂಡಿದ್ದಾರೆ. ಪ್ರಸ್ತುತ ಪ್ರವಾಸದ ಸಂದರ್ಭದಲ್ಲೂ ಶಿಕ್ಷಕರೊಂದಿಗೆ ಸಮಾಲೋಚನೆ ಅವರ ಕಷ್ಟ ಕಾರ್ಪಣ್ಯಗಳನ್ನು ತಿಳಿದುಕೊಂಡಿದ್ದಾರೆ ಎಂದು ಅವರ ಬೆಂಬಲಿಗರು ಹೆಮ್ಮೆಯಿಂದ ಹೇಳುತ್ತಾರೆ.



ಸಾಮಾಜಿಕ ಸೇವೆಗೆ ಸದಾ ಮುಂದು

ವಿವೇಕಾನಂದ ಅವರು ಸಾಮಾಜಿಕ ಸೇವೆಗೆ ಸದಾ ಮುಂದಿರುತ್ತಾರೆ. ಕೋವಿಡ್ ಸಂದರ್ಭದಲ್ಲಿ ಸಾವಿರಾರು ಬಡ ಕುಟುಂಬಗಳಿಗೆ ಫುಡ್‌ಕಿಟ್ ವಿತರಿಸಿದ್ದರು. ಅಲ್ಲದೆ ತಮ್ಮ ಹುಟ್ಟುಹಬ್ಬದಂದು ಪೌರಬಂಧುಗಳು ಸೇರಿದಂತೆ ನೂರಾರು ಬಡಜನರಿಗೆ ಊಟ, ವಸ್ತ್ರ ನೀಡುವ ಪದ್ಧತಿ ರೂಢಿಸಿಕೊಂಡು ಬಂದಿದ್ದಾರೆ. ಪಕ್ಷದ ನಾಯಕರಾದ ಹೆಚ್.ಡಿ. ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದಲ್ಲೂ ಅವರ ಅಭಿಮಾನಿಗಳೊಂದಿಗೆ ಹಲವು ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸ್ವಗ್ರಾಮ ಅವ್ವೇರಹಳ್ಳಿಯಲ್ಲಿ ದೇವಾಲಯ ನಿರ್ಮಾಣಕ್ಕೆ ದೊಡ್ಡ ಮೊತ್ತದ ವಂತಿಗೆ ನೀಡುವುದರ ಜೊತೆಗೆ ಸ್ನೇಹಿತರಿಂದ ಸುಮಾರು 25 ಲಕ್ಷ ರೂ. ದೇಣಿಗೆ ಸಂಗ್ರಹಿಸಿ ನೀಡಿದ್ದಾರೆ. ದೇವಾಲಯ ನಿರ್ಮಾಣಕ್ಕೆ **ಆರ್ಥಿಕ ಸಹಾಯ ಕಲ್ಪಿಸಿದ** ಊರ ಮಗನಿಗೆ ಗ್ರಾಮಸ್ಥರೆಲ್ಲಾ ಸೇರಿ ಆತ್ಮೀಯವಾಗಿ ಅಭಿನಂದಿಸಿ, ಆಶೀರ್ವದಿಸಿದ್ದಾರೆ. ಈ ರೀತಿಯ ಧಾರ್ಮಿಕ ಸೇವೆಯ ಜೊತೆಗೆ ಯುವ ಉದ್ಯಮಿಗಳಿಗೆ ಹಾಗೂ ಹಲವು ಸಂಘ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಅವರ ಹಾಗೂ ಅವುಗಳ ಶ್ರೇಯೋಭಿವೃದ್ಧಿಗೆ ನೆರವಾಗಿದ್ದಾರೆ. ಇದಕ್ಕಾಗಿ ಅವರನ್ನು ಹಲವು ಸಂಘ ಸಂಸ್ಥೆಗಳು ಗೌರವಿಸಿವೆ.



ನಕ್ಕರೆ ಅದೇ ಸ್ವರ್ಗ

ಮೆಡಿಕಲ್ ಸ್ಟೋರ್ ಮಾಲೀಕ: "ಏನಮ್ಮಾ ಅಷ್ಟೊತ್ತಿನಿಂದಲೂ ಚೀಟಿ ಹಿಡಿದು ನಿಂತಿದ್ದೀಯಲ್ಲಾ ಏನು ಬೇಕು?"
ಆಕೆ : "ಡಾಕ್ಟರ್‌ರಾಗಿರುವ ನನ್ನ ಭಾವಿ ಪತಿ ಬರೆದಿರೋ ಪತ್ರ ಓದಿಕೊಡ್ತೀರಾ?!"

ಮೈಸೂರು ಮಿತ್ರ
ಬುಧವಾರ, 11 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ತ್ಯಾಗ ಬುದ್ಧಿಯುಳ್ಳವರು ಕೆಡುವುದಿಲ್ಲ
ಕೆಡುವ ಮಂದಿಗೆ ತ್ಯಾಗಬುದ್ಧಿಯಿರುವುದಿಲ್ಲ –ನುಡಿಮುತ್ತು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗುಬ್ಬಿ ಮೇಲೆ ಬ್ರಹ್ಮಾಸ್ತ್ರವೇ, ತಬ್ಬಲಿ ಮ್ಯಾಲೆ ಹಾರಾಟವೇ?

ನಿಮ್ಮ ಪತ್ರಗಳು

ಪೌರಕಾರ್ಮಿಕರೇ ನಿಮ್ಮ ಆರೋಗ್ಯದ ಕಡೆ ಗಮನವಿರಲಿ

ಮಾನ್ಯರೆ,

ಪೌರಕಾರ್ಮಿಕರು ವಾರಿಯರ್ಸ್. ನಗರವನ್ನು ಕಸಮುಕ್ತವನ್ನಾಗಿ ಮಾಡುವ ದಿಸೆಯಲ್ಲಿ ಪೌರಕಾರ್ಮಿಕರ ಶ್ರಮ ನಿರ್ಣಾಯಕ, ಪೌರಕಾರ್ಮಿಕರು ನಗರದ ಸ್ವಚ್ಛತೆಯ ಜತೆಗೆ ತಮ್ಮ ಆರೋಗ್ಯದ ಬಗ್ಗೆ ಜಾಗೃತಿ ವಹಿಸಬೇಕು ಹಾಗೂ ಸಂಬಂಧಪಟ್ಟ ಇಲಾಖೆ ಅವರಿಗೆ ಅಗತ್ಯವಾದ ಮಾಹಿತಿಗಳನ್ನು ನೀಡಬೇಕು. ಪೌರಕಾರ್ಮಿಕರು ಆರೋಗ್ಯವಾಗಿದ್ದರೆ ಮಾತ್ರ ನಗರವನ್ನು ಸ್ವಚ್ಛವಾಗಿಡಲು ಸಾಧ್ಯ. ಪೌರಕಾರ್ಮಿಕರು ಪ್ರತಿ ಮನೆ, ರಸ್ತೆಗೂ ಹೋಗಿ ಕಸವನ್ನು ಸಂಗ್ರಹಿಸಿ ಸ್ವಚ್ಛತೆ ಮಾಡುತ್ತಾರೆ. ಆದ್ದರಿಂದ ಪೌರಕಾರ್ಮಿಕರು ನಿಯಮಿತವಾಗಿ ಕೈಗಳನ್ನು ಸ್ಯಾನಿಟೈಸರ್‌ನಿಂದ ಸ್ವಚ್ಛಗೊಳಿಸಿಕೊಳ್ಳಬೇಕು, ಸ್ವಚ್ಛ ಮಾಡುವಾಗ ಮುಂಜಾಗ್ರತಾ ಸಲಕರಣೆಗಳನ್ನು ಉಪಯೋಗಿಸಬೇಕು ಮತ್ತು ಮಾಸ್ಕ್ ಧರಿಸಿ ತಮ್ಮ ಕೆಲಸ ಮಾಡಬೇಕು. ಕಸ ವಿಂಗಡಣೆ ಬಗ್ಗೆ ನಗರವಾಸಿಗಳಿಗೆ ಜಾಗೃತಿ ಮೂಡಿಸಬೇಕು. ಪೌರಕಾರ್ಮಿಕರು ಹೆಚ್ಚು ಜವಾಬ್ದಾರಿಯುತವಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸಬೇಕು. ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರಿಗೆ ಸಹಕರಿಸುತ್ತಿದೆ. ಅದರಂತೆಯೇ ಸಾರ್ವಜನಿಕರು ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ನೀಡುವ ಮೂಲಕ ಸಹಕರಿಸಬೇಕು. ಸ್ವಚ್ಛತೆಯ ಕಾರ್ಯ ಮನೆಯಿಂದಲೇ ಆರಂಭಿಸಬೇಕು. ಪೌರಕಾರ್ಮಿಕರಿಗೆ ನಿಮ್ಮಂತೆ ಕುಟುಂಬ, ಮಕ್ಕಳು ಇದ್ದಾರೆ. ನಗರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರ ಶ್ರಮಕ್ಕೆ ಧನ್ಯವಾದಗಳು, ಸಾರ್ವಜನಿಕರು ಸ್ವಚ್ಛ ಹಾಗೂ ಸುಂದರ ಮೈಸೂರಿನ ನಿರ್ಮಾಣಕ್ಕೆ ಕೈಜೋಡಿಸಬೇಕು, ಕಸ ವಿಲೇವಾರಿ ಬಗ್ಗೆ ಅಕ್ಕಪಕ್ಕದ ಮನೆಯವರಿಗೆ ಮಾಹಿತಿ ನೀಡಬೇಕು.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು,

ಧಾರ್ಮಿಕ ಸಂಘರ್ಷಕ್ಕೆ ಕಡಿವಾಣ ಬೀಳಬೇಕಿದೆ

ಮಾನ್ಯರೆ.

ಶಿವಮೊಗ್ಗ ಜಿಲ್ಲೆಯ ರಾಗಿಗುಡ್ಡದಲ್ಲಿ ಕಳೆದ ಈದ್ ಮಿಲಾದ್ ಹಬ್ಬದ ಮೆರವಣಿಗೆಯಲ್ಲಿ ನಡೆದ ಗಲಭೆಯು ಖಂಡನೀಯವಾಗಿದೆ. ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವೆಡೆ ಈ ರೀತಿಯ ಸಂಘರ್ಷದ ಪ್ರಕರಣಗಳು ಮತ್ತೊಮ್ಮೆ ಮರುಕಳಿಸದಂತೆ ಸರ್ಕಾರ ಕಡಿವಾಣ ಹಾಕಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕಿದೆ.

ಪ್ರತಿಯೊಂದು ಧರ್ಮವೂ ಮನುಷ್ಯನ ಉದ್ಧಾರಕ್ಕಾಗಿಯೇ ಹುಟ್ಟಿಕೊಂಡಿದೆ. ಹೀಗಿರುವಾಗ ಮನುಷ್ಯ ಮನುಷ್ಯರ ನಡುವೆ ಸಂಘರ್ಷ ಸೃಷ್ಟಿಸುವ ಧರ್ಮವು ಧರ್ಮವೇ ಅಲ್ಲ ಅನಿಸುತ್ತದೆ. ಶಾಂತಿ, ಅಹಿಂಸೆಯು ಎಲ್ಲಾ ಧರ್ಮಗಳ ಮೂಲ ಮಂತ್ರ. ಆದರೆ ಇದನ್ನು ಆಯಾ ಧರ್ಮದ ಕೆಲ ಅನುಯಾಯಿಗಳು ತಪ್ಪಾಗಿ ಅರ್ಥೈಸಿಕೊಳ್ಳುತ್ತಿರುವುದರಿಂದ ಗೊಂದಲ, ಗಲಭೆ ಹಾಗೂ ಧರ್ಮ ಸಂಘರ್ಷಗಳು ಅಲ್ಲಲ್ಲಿ ಸೃಷ್ಟಿಯಾಗುತ್ತಿವೆ. ಇದು ತಪ್ಪಬೇಕು. ಏಕೆಂದರೆ ಮನುಷ್ಯ ಮನುಷ್ಯರ ನಡುವಿನ ಸಂಬಂಧ ಹದಗೆಡುತ್ತಿರುವ ಈ ಹೊತ್ತಿನಲ್ಲಿ ಯಾವುದೇ ಧರ್ಮಗಳು ಮಾನವೀಯತೆ ಬೆಳೆಸುವುದರೊಂದಿಗೆ ಸಮಾಜದಲ್ಲಿ ಶಾಂತಿ ನೆಮ್ಮದಿಗೆ ಆದ್ಯತೆ ನೀಡಬೇಕೇ ವಿನಃ ಈ ರೀತಿಯ ದಳ್ಳುರಿಗೆ ಅವಕಾಶ ನೀಡಬಾರದು. ಇದರಿಂದ ಸಾರ್ವಜನಿಕ ಆಸ್ತಿಪಾಸ್ತಿಗೂ ಧಕ್ಕೆ ಹಾಗೂ ಜನರ ಪ್ರಾಣಹಾನಿಗೂ ಕುತ್ತು ಎಂಬುದನ್ನು ಎಲ್ಲರೂ ಅರಿಯಬೇಕಿದೆ. ಇಷ್ಟಲ್ಲದೇ ಈ ರೀತಿಯ ಸಂಘರ್ಷದ ಪ್ರಕರಣಗಳು ನಡೆದ ಕಡೆ ಜಾತ್ಯತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳು ಒಗ್ಗಟ್ಟಾಗಿ ಧಾರ್ಮಿಕ ಮುಖಂಡರ ಸಭೆ ಕರೆದು ಸಮಸ್ಯೆಗಳು ಮರುಕಳಿಸದಂತೆ ಸಂಧಾನ ಸಭೆಗಳನ್ನು ನಡೆಸಬೇಕೇ ವಿನಹ, ಇದಕ್ಕೆ ತುಪ್ಪ ಸುರಿಯುವಂತೆ ಪರಸ್ಪರ ದೋಷಾರೋಪ ಮಾಡಿಕೊಂಡು ಹೊತ್ತಿ ಉರಿಯುತ್ತಿರುವ ಮನೆಯಲ್ಲಿ ಚಳಿ ಕಾಯಿಸಿಕೊಳ್ಳುವ ಪ್ರವೃತ್ತಿಯನ್ನು ಎಲ್ಲಾ ರಾಜಕೀಯ ಪಕ್ಷಗಳು ಬಿಡಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲಾ ಧರ್ಮಗಳು ಶಾಂತಿ ನೆಮ್ಮದಿಗೆ ಆದ್ಯತೆ ನೀಡಬೇಕು ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಬಿಗ್‌ಬಾಸ್‌ನಲ್ಲಿ ಭೇದ–ಭಾವ ಸರಿಯೇ?

ಮಾನ್ಯರೆ,

ಬಿಗ್ ಬಾಸ್ ಸ್ಪರ್ಧೆಯ ಪ್ರಾರಂಭದಲ್ಲೇ ಅವರವರಲ್ಲಿಯೇ ಭೇದ–ಭಾವ ಕಲ್ಪಿಸುವ ರೀತಿಯಲ್ಲಿ "ಸಮರ್ಥರು–ಅಸಮರ್ಥರು" ಎನ್ನುವ ಕಾನ್ಸೆಪ್ಟ್ ಮೇಲೆ ಸ್ಪರ್ಧಿಗಳನ್ನು ವಿಂಗಡಿಸಿದ್ದಾರೆ. ಅವರು ಆಟವಾಡಿಸುವ ಕ್ರಮ ಹೇಗಾದರೂ ಇರಲಿ. ಆದರೆ, "ಅಸಮರ್ಥರು" ಎಂದು ಕರೆಸಿಕೊಳ್ಳುವ ಸ್ಪರ್ಧಿಗಳಿಗೆ 'ಕೇಸರಿ' ವರ್ಣದ ಉಡುಪುಗಳನ್ನು ನೀಡಿರುವುದಾದರೂ ಏಕೆ? ನಮ್ಮ ಭಾರತೀಯ ಪರಂಪರೆಯಲ್ಲಿ ಕೇಸರಿ ವರ್ಣದ ಉಡುಪಿಗೆ ಅದರದ್ದೇ ಆದ ಮಹತ್ವವಿದೆ. ಸಾತ್ವಿಕ ಅರ್ಥಗಳಿವೆ. ಬಿಗ್ ಬಾಸ್ ಆಯೋಜಕರೇ, ಯಾವುದೇ ಸಂಸ್ಕೃತಿಗೆ, ಧಾರ್ಮಿಕತೆಗೆ, ಧಾರ್ಮಿಕ ಭಾವನೆಗಳಿಗೆ, ಧರ್ಮ ಸೂಕ್ಷ್ಮತೆಗಳಿಗೆ ಧಕ್ಕೆ ಬರದಂತೆ ದಯಮಾಡಿ ನಡೆದುಕೊಳ್ಳಿ. ಬಿಗ್‌ಬಾಸ್ ಆಯೋಜಕರು ಈ ಕೂಡಲೇ ಈ ವಿಚಾರದ ಬಗ್ಗೆ ಗಮನಹರಿಸುವುದು ಒಳಿತು.

–ವಿದುಷಿ ರಾಜಲಕ್ಷ್ಮೀ, ಸಂಗೀತ ಕಲಾವಿದರು, ಮೈಸೂರು

ಸರ್ಕಾರದ ಬ್ಯಾರಿಕೇಡ್‌ಗಳು ಮನೆಯಲ್ಲಿ ಗಿಡ ಸಂರಕ್ಷಣೆಗಾಗಿಯೇ?



ಮಾನ್ಯರೆ,

ರಸ್ತೆಯಲ್ಲಿ ಅಪಾಯದ ಸಂಭವಗಳಿದ್ದರೆ, ಗಲಭೆಗಳು ಹೆಚ್ಚಾದರೆ, ಟ್ರಾಫಿಕ್ ಸಮಸ್ಯೆ ಹೆಚ್ಚಾದರೆ, ರಸ್ತೆಗಳ ಮಾರ್ಗ ಬದಲಾವಣೆ ಮಾಡುವುದಕ್ಕಾಗಿ, ಪ್ರತಿಭಟನೆ ಸಂದರ್ಭಗಳಲ್ಲಿ, ಸರ್ಕಾರಿ ಕಚೇರಿಗಳ ಭದ್ರತೆಗಾಗಿ ಹಾಗೂ ಇನ್ನಿತರ ಅಪಾಯಕಾರಿ ಸನ್ನಿವೇಶಗಳಲ್ಲಿ ಬಳಸುವುದಕ್ಕಾಗಿ ಸರ್ಕಾರದಿಂದ ಪೊಲೀಸ್ ಇಲಾಖೆಗೆ ಬ್ಯಾರಿಕೇಡ್‌ಗಳನ್ನು ನೀಡಿರುವುದು ಸರಿಯಷ್ಟೆ. ಆದರೆ ಮೈಸೂರಿನಲ್ಲಿ ದಸರಾ ಹಬ್ಬದ ಸಮಯದಲ್ಲಿ ಈ ಬ್ಯಾರಿಕೇಡ್‌ಗಳು ಹೆಚ್ಚು ಬೇಕಾಗುತ್ತವೆ. ಈ ನಡುವೆ ಮೈಸೂರಿನ ಮಾಜಿ ಮೇಯರ್‌ರವರೊಬ್ಬರು ತಮ್ಮ ಅಧಿಕಾರಾವಧಿ ಮುಗಿದಿದ್ದರೂ ಸಹ ಸರ್ಕಾರದ ಈ ಬ್ಯಾರಿಕೇಡ್‌ಗಳನ್ನು ಹಿಂತಿರುಗಿಸದೆ ಕುವೆಂಪುನಗರ ಶಾಂತಿಸಾಗರ ಕಾಂಪ್ಲೆಕ್ಸ್ ಹಿಂಭಾಗದಲ್ಲಿರುವ ಅಗ್ನಿಹಂಸ ರಸ್ತೆಯ ತಮ್ಮ ಮನೆಯಲ್ಲಿ ಗಿಡಗಳ ಸಂರಕ್ಷಣೆಗಾಗಿ ಬಳಕೆ ಮಾಡುತ್ತಿದ್ದಾರೆ. ದಸರಾ ಸಮಯದಲ್ಲಿ ಬ್ಯಾರಿಕೇಡ್‌ಗಳ ಅವಶ್ಯಕತೆ ಹೆಚ್ಚಾಗಿರುವುದರಿಂದ ಕುವೆಂಪುನಗರದ ಪೊಲೀಸ್ ಠಾಣೆ ಅಧಿಕಾರಿಗಳು ವಿಷಯ ತಿಳಿಸಿ ಬ್ಯಾರಿಕೇಡ್‌ಗಳನ್ನು ಹಿಂಪಡೆದು ಸಾರ್ವಜನಿಕರ ಅನುಕೂಲಕ್ಕೆ ಬಳಸಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಗವದ್ಗೀತೆಯಲ್ಲಿ ಜೀವನ ಮೌಲ್ಯಗಳು

ಮಾನವನ ಬದುಕಿಗೆ ಅರ್ಥವನ್ನು ನೀಡುವ ಸತ್ಯ, ಅಹಿಂಸೆ, ಔದಾರ್ಯ, ಧೈರ್ಯ ಮುಂತಾದ ಪರಿಕಲ್ಪನೆಗಳನ್ನು 'ಜೀವನ ಮೌಲ್ಯಗಳು' ಎಂದುಕೊಳ್ಳಬಹುದು. ರಾಮಾಯಣ, ಮಹಾಭಾರತ ಇತ್ಯಾದಿ ದೊಡ್ಡ ಗ್ರಂಥಗಳು ಅಂತಹ ಮೌಲ್ಯಗಳನ್ನು ತಮ್ಮ ಪಾತ್ರಗಳಿಂದ ಪ್ರತಿನಿಧಿಸುತ್ತವೆ ಎನ್ನಬಹುದು. ರಾಮಾಯಣದಲ್ಲಿ ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗೂ, ಸೀತೆಯು ಪಾತಿವ್ರತ್ಯಕ್ಕೂ, ಲಕ್ಷ್ಮಣನು ಭ್ರಾತೃ ಪ್ರೇಮಕ್ಕೂ, ಹನುಮಂತನು ರಾಮಭಕ್ತಿಗೂ ಜಗತ್ಪ್ರಸಿದ್ಧ ಉದಾಹರಣೆಗಳಾಗಿದ್ದಾರೆ. ಮಹಾಭಾರತದಲ್ಲಿ ಯುಧಿಷ್ಠಿರನು ಸತ್ಯವಚನಕ್ಕೂ, ಅರ್ಜುನನು ವಿದ್ಯಾ–ಶ್ರದ್ಧೆಗೂ, ಕರ್ಣನು ದಾನದಲ್ಲಿ ಔದಾರ್ಯಕ್ಕೂ ಹೆಸರಾಗಿದ್ದಾರೆ. ಅಂತಹ ಗ್ರಂಥಗಳಲ್ಲಿ ಕಥೆಯನ್ನೂ, ಸನ್ನಿವೇಶಗಳನ್ನೂ ಅವಲಂಬಿಸಿ ಈ ಮೌಲ್ಯಗಳನ್ನು ಚಿತ್ರಿಸಬಹುದು. ಭಗವದ್ಗೀತೆಯು ಉಪದೇಶಾತ್ಮಕವಾದ ಗ್ರಂಥವಾಗಿದ್ದು, ಅದರಲ್ಲಿ ಕಥಾಂಶವು ಸ್ವಲ್ಪವೇ ಇದೆ. ಕೃಷ್ಣ ಸಾರಥ್ಯದಲ್ಲಿ ಅರ್ಜುನನು ಯುದ್ಧಭೂಮಿಗೆ ಬರುವುದು, ಕೌರವ ಸೈನ್ಯವನ್ನು ನೋಡಿ ಭ್ರಾತೃ–ಗುರು–ಮಿತ್ರ ಹತ್ಯೆಯನ್ನು ಮಾಡಬೇಕಲ್ಲಾ ಎಂದು ವಿಷಾದಪಟ್ಟು ಶಸ್ತ್ರ ಸಂನ್ಯಾಸವನ್ನು ಮಾಡಲು ಉದ್ಯುಕ್ತನಾಗುವುದು, ಅದನ್ನು ತಪ್ಪಿಸಿ ಅರ್ಜುನನು ಮತ್ತೆ ಕರ್ತವ್ಯದಲ್ಲಿ ತೊಡಗುವಂತೆ ಮಾಡಲು ಶ್ರೀಕೃಷ್ಣನು ಉಪದೇಶ ಮಾಡುವುದು, ಅದನ್ನು ದೃಢಪಡಿಸಲು ವಿಶ್ವರೂಪವನ್ನು ತೋರಿಸುವುದು, ಅರ್ಜುನನ ಮನಃಪರಿವರ್ತನೆ, ಅವನು ಮತ್ತೆ ಶಸ್ತ್ರವನ್ನು ಧರಿಸಿ ಕರ್ತವ್ಯ ನಿರ್ವಹಣೆಗಾಗಿ ಧನುರ್ಧಾರಿಯಾಗುವುದು – ಇಷ್ಟೇ ಇಲ್ಲಿ ಕತೆ. ಆದ್ದರಿಂದ ಇಲ್ಲಿ ಜೀವನ ಮೌಲ್ಯಗಳನ್ನು ಶ್ರೀಕೃಷ್ಣನ ಉಪದೇಶಗಳಲ್ಲಿ ಕಾಣಬೇಕು. ಆ ಉಪದೇಶಗಳು ನಾನಾ ಯೋಗಗಳೆಂದು ಪ್ರಸಿದ್ಧವಾಗಿವೆ. ಅವುಗಳ ಕಡೆಗೆ ಒಮ್ಮೆ ದೃಷ್ಟಿಯನ್ನು ಹಾಯಿಸೋಣ:

(1) **ಜ್ಞಾನಯೋಗ:** ಜ್ಞಾನವೆಂದರೆ ಅರಿವು. ಯಾವ ವಸ್ತು ಹೇಗಿದೆಯೋ ಹಾಗೆ ಅದನ್ನು ಅರಿತುಕೊಳ್ಳುವುದು ಜ್ಞಾನ. ಹಗ್ಗವನ್ನು ಹಾವೆಂದು ತಪ್ಪಾಗಿ ತಿಳಿದರೆ ಅದು ಮಿಥ್ಯಾ. ಏನನ್ನೂ ತಿಳಿಯದೆ ಬೆಪ್ಪಾಗಿ ನಿಂತರೆ ಅದು ಅಜ್ಞಾನ. ಅಜ್ಞಾನವನ್ನೂ, ಮಿಥ್ಯಾ ಜ್ಞಾನವನ್ನೂ ತೊಲಗಿಸಲು ಜ್ಞಾನವೇ ಸಾಧನ. ಮಿಥ್ಯಾಜ್ಞಾನವಿದ್ದರೆ ಅದು ಭಯ, ಆತಂಕ, ಆಸೆ ಮುಂತಾದ ಅನಿಷ್ಟಗಳನ್ನು ತರಬಹುದು. ಅಜ್ಞಾನ ಇದ್ದರೆ ಕರ್ತವ್ಯವನ್ನು ಮಾಡಲಾಗದ ನಿರಾಶೆಯ ಸ್ಥಿತಿ ಉಂಟಾಗಬಹುದು. ಅವುಗಳನ್ನು ಎಂದರೆ ಅಜ್ಞಾನ ಮಿಥ್ಯಾ ಜ್ಞಾನಗಳನ್ನು ತೊಲಗಿಸಲು ಇರುವ ಏಕಮಾತ್ರ ಅಸ್ತ್ರ ಜ್ಞಾನ. ಕತ್ತಲೆಯನ್ನು ಬೆಳಕು ಮಾತ್ರ ಹೊರದೂಡುವುದು. ಆದ್ದರಿಂದಲೇ ಭಗವಾನ್ ಶ್ರೀಕೃಷ್ಣನು ಜ್ಞಾನಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿದ್ದಾನೆ.

ನಹಿ ಜ್ಞಾನೇನ ಸದೃಶಂ
ಪವಿತ್ರ ಮಿಹ ವಿದ್ಯತೇ ।
ತತ್ ಸ್ವಯಂ ಯೋಗ ಸಂಸಿದ್ಧಃ
ಕಾಲೇನಾತ್ಮನಿ ವಿಂದತಿ ॥

(ಜ್ಞಾನಕ್ಕೆ ಸಮಾನವಾದ ಪವಿತ್ರ ವಸ್ತು ಈ ಜಗತ್ತಿನಲ್ಲಿ ಇಲ್ಲ. ಆ ಜ್ಞಾನವನ್ನು ಯೋಗಸಿದ್ಧನು ಸರಿಯಾದ ಕಾಲದಲ್ಲಿ ಪಡೆಯುವನು.)

ಎಲ್ಲ ಕಷ್ಟಗಳಿಗೆ ಕಾರಣ ನಮ್ಮ ಅಜ್ಞಾನ. ಅದನ್ನು ನಿವಾರಿಸುವ ಏಕಮಾತ್ರ ಸಾಧನ ಜ್ಞಾನ. ಜ್ಞಾನವು ಬೆಂಕಿಗೆ ಸಮಾನ. ಅದು ಪ್ರಾಚೀನ ಕರ್ಮಗಳನ್ನೆಲ್ಲ ಸುಟ್ಟು ಹಾಕುವುದೆಂದು ಭಗವದ್ಗೀತೆ ಖಚಿತವಾಗಿ ಹೇಳುತ್ತದೆ.

ಯಥೈಧಾಂಸಿ ಸಮಿದ್ಧೋಗ್ನಿಃ
ಭಸ್ಮಸಾತ್ ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ
ಭಸ್ಮಸಾತ್ ಕುರುತೇ ತಥಾ॥

(ಉರಿಯುವ ಬೆಂಕಿಯು ಸೌದೆಯನ್ನು ಬೂದಿ ಮಾಡುವಂತೆ ಜ್ಞಾನಾಗ್ನಿಯು ಎಲ್ಲ ಪ್ರಾಚೀನ ಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ.)

ಜ್ಞಾನವನ್ನು ಹೇಗೆ ಪಡೆದುಕೊಳ್ಳಬೇಕೆಂಬುದನ್ನೂ ಭಗವದ್ಗೀತೆ ಸ್ಪಷ್ಟವಾಗಿ ತಿಳಿಸುತ್ತದೆ.

ತದ್ವಿದ್ಧಿ ಪ್ರಣಿಪಾತೇನ
ಪರಿಪ್ರಶ್ನೇನ ಸೇವಯಾ।
ಉಪದೇಕ್ಷ್ಯಂತಿ ತೇ ಜ್ಞಾನಂ
ಜ್ಞಾನಿನಸ್ತತ್ತ್ವ ದರ್ಶಿನಃ ॥

(ಗುರುಗಳಿಗೆ ನಮಸ್ಕರಿಸುವುದರಿಂದ, ಹಲವು ವಿಧವಾಗಿ ಪ್ರಶ್ನಿಸುವುದರಿಂದ ಮತ್ತು ಸೇವೆಯಿಂದ ಆ ಜ್ಞಾನವನ್ನು ಪಡೆದುಕೋ.)

ಈ ರೀತಿಯಾಗಿ ಜ್ಞಾನವೆಂಬ ಗುಣವನ್ನು ವರ್ಣಿಸುವ ಭಗವದ್ಗೀತೆ ಜ್ಞಾನಯೋಗವನ್ನು ಪ್ರತಿಪಾದಿಸಿದೆ. ಈ ಜ್ಞಾನಯೋಗವನ್ನೇ ಬುದ್ಧಿಯೋಗ ಎಂದೂ ಭಗವದ್ಗೀತೆಯಲ್ಲಿ ಕರೆದಿದ್ದಾರೆ.

ಆದರೆ ಎಲ್ಲರೂ ಜ್ಞಾನವನ್ನು ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಆವಶ್ಯಕವಾದ ಬುದ್ಧಿಯ ಪರಿಪಾಕ ಎಲ್ಲರಲ್ಲೂ ಇರುವುದಿಲ್ಲ. ಜ್ಞಾನಯೋಗಕ್ಕೆ ಬೇಕಾದ ಯೋಗ್ಯತೆಯನ್ನು ಪಡೆದುಕೊಳ್ಳಲು ಕರ್ಮಯೋಗವನ್ನು ಉಪದೇಶಿಸಲಾಗಿದೆ.

ಜ್ಞಾನಯೋಗೇನ ಸಾಂಖ್ಯಾನಾಂ
ಕರ್ಮ ಯೋಗೇನ ಯೋಗಿನಾಮ್।

ಸಾಂಖ್ಯರಿಗೆ, ಎಂದರೆ ಬುದ್ಧಿಪ್ರಧಾನರಿಗೆ ಜ್ಞಾನಯೋಗ, ಕಾರ್ಯಗಳಲ್ಲಿ ತೊಡಗಿರುವ ಯೋಗಿಗಳಿಗೆ ಕರ್ಮಯೋಗ. ಕರ್ಮವನ್ನು ಮಾಡದ ಜೀವಿಗಳಿಲ್ಲ. ಆ ಕರ್ಮವನ್ನು ಕರ್ಮಯೋಗವನ್ನಾಗಿ ಮಾರ್ಪಡಿಸಿಕೊಂಡರೆ ಎಲ್ಲರೂ ಉದ್ಧಾರವನ್ನು ಕಾಣಬಹುದು. ಆ ಮಾರ್ಪಾಟು ಹೇಗೆ ಬರುತ್ತದೆ? ಮಾಡುವ ಕೆಲಸದ ಫಲವನ್ನು ಭಗವಂತನಿಗೆ ಅರ್ಪಿಸಿದರೆ ಆ ಕೆಲಸವೇ ಕರ್ಮಯೋಗವಾಗಿ ಸಿದ್ಧಿಯನ್ನು ತಂದುಕೊಡುತ್ತದೆ.

ಮದರ್ಥಮಪಿ ಕರ್ಮಾಣಿ
ಕುರ್ವನ್ ಸಿದ್ಧಿಮವಾಪ್ಸ್ಯಸಿ ।

ಎಂದು ಭಗವಂತನು ಘೋಷಿಸಿದ್ದಾನೆ. ಕರ್ಮಯೋಗವನ್ನು ಆಚರಿಸಿದವರಲ್ಲಿ ಪ್ರಮುಖನು ಜನಕ ಮಹಾರಾಜನೆಂದು ಶ್ರೀಕೃಷ್ಣನು ಹೇಳಿದ್ದಾನೆ.

ಕರ್ಮಣೈವ ಹಿ
ಸಂಸಿದ್ಧಿಮಾಸ್ಥಿತಾಃ ಜನಕಾದಯಃ ।

ಎಂಬುದು ಭಗವಂತನ ಮಾತು. ರಾಜ್ಯಭಾರದಲ್ಲಿ ತೊಡಗಿದ್ದ ಜನಕನು ದೊಡ್ಡ ಕರ್ಮಯೋಗಿಯಾಗಿರಲು ಸಾಧ್ಯವಾಯಿತು? ಎಂದರೆ,

ಸಕ್ತಾಃ ಕರ್ಮಣ್ಯವಿದ್ವಾಂಸೋ
ಯಥಾ ಕುರ್ವಂತಿ ಭಾರತ ।
ಕುರ್ಯಾದ್ ವಿದ್ವಾಂಸ್ತಥಾಸಕ್ತಃ
ಚಿಕೀರ್ಷುರ್ಲೋಕಸಂಗ್ರಹಮ್॥

ಅಜ್ಞಾನಿಗಳು ಎಲ್ಲ ಕೆಲಸಗಳನ್ನು ಸ್ವಾರ್ಥಾಸಕ್ತರಾಗಿ ಮಾಡುತ್ತಾರೆ. ಆದರೆ ಜ್ಞಾನಿಯು ಆ ಕೆಲಸಗಳನ್ನು ಸ್ವಾರ್ಥದ ಲೇಪವಿಲ್ಲದೆ ಭಗವದರ್ಪಣ ಬುದ್ಧಿಯಿಂದ ಮಾಡುತ್ತಾನೆ. ಲೋಕಸಂಗ್ರಹಕ್ಕಾಗಿ ಅವನು ಕರ್ತವ್ಯವನ್ನು ನಿರ್ವಹಿಸುತ್ತಾನೆ. ತನಗಾಗಿ ಯಾವ ಪ್ರಯೋಜನವನ್ನೂ ಅಪೇಕ್ಷಿಸದೆ, ಲೋಕಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಡುವ ಉದ್ದೇಶದಿಂದ ಮಾಡುವ ಕಾರ್ಯ ಲೋಕಸಂಗ್ರಹ. ಶ್ರೀ ಕೃಷ್ಣನು ಈ ಲೋಕದಿಂದ ಪಡೆದುಕೊಳ್ಳಬೇಕಾದುದು ಏನೂ ಇರಲಿಲ್ಲ. ಆದರೂ ಸರ್ವ ಕಾರ್ಯಗಳನ್ನೂ ಅವನು ಮಾಡಿದ್ದು ಕೇವಲ ಲೋಕಸಂಗ್ರಹಕ್ಕಾಗಿ. ಅದನ್ನು ಹೇಳಿದ್ದಾನೆ.

ನ ಮೇ ಪಾರ್ಥಾಸ್ತಿ ಕರ್ತವ್ಯಂ
ತ್ರಿಷು ಲೋಕೇಷು ಕಿಂಚನ ।
ನಾನವಾಪ್ತ ಮವಾಪ್ತವ್ಯಂ ವರ್ತ
ಏವ ಚ ಕರ್ಮಣಿ ॥

(ಪಾರ್ಥನೆ, ಮೂರು ಲೋಕಗಳಲ್ಲಿ ನಾನು ಹೊಸದಾಗಿ ಮಾಡಬೇಕಾದುದು ಏನೂ ಇಲ್ಲ. ನಾನು ಪಡೆಯದೆ ಇದ್ದುದು ಅಥವಾ ಪಡೆದುಕೊಳ್ಳಬೇಕಾಗಿರುವುದು ಏನೂ ಇಲ್ಲ. ಆದರೂ ನಾನು ಕಾರ್ಯಗಳಲ್ಲಿ (ಲೋಕ ಸಂಗ್ರಹಕ್ಕಾಗಿ) ತೊಡಗಿರುತ್ತೇನೆ. ಕರ್ಮ ಯೋಗವು ಮನಸ್ಸಿನ ಶುದ್ಧಿಯನ್ನು ಉಂಟು ಮಾಡಿ ಜ್ಞಾನ ಯೋಗಕ್ಕೆ ಅರ್ಹತೆಯನ್ನು ತಂದುಕೊಡುತ್ತದೆ.

ಕಾಯೇನ ಮನಸಾ
ವಾಚಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ
ಸಂಗಂ ತ್ಯಕ್ತ್ವಾತ್ಮ ಶುದ್ಧಯೇ ॥

(ಯೋಗಿಗಳು ಶರೀರದಿಂದ, ಮನಸ್ಸಿನಿಂದ, ಮಾತಿನಿಂದ, ಕೇವಲ ಇಂದ್ರಿಯಗಳಿಂದ ಸ್ವಾರ್ಥವನ್ನು ತ್ಯಜಿಸಿ ಬುದ್ಧಿ ಶುದ್ಧಿಗಾಗಿ ಕರ್ಮಗಳನ್ನು ಮಾಡುತ್ತಾರೆ.) ಎಂದು ಈ ವಿಷಯವನ್ನು ಭಗವದ್ಗೀತೆ ಸ್ಪಷ್ಟಪಡಿಸಿದೆ.

ಜ್ಞಾನ ಯೋಗವು ಭಕ್ತಿಯಲ್ಲಿ ಪರಿಣಾಮವನ್ನು ಹೊಂದುತ್ತದೆ. ಭಗವಂತನ ಅಪಾರ ಮಹಿಮೆ ಅರಿತಾಗ ಮಾನವನಲ್ಲಿ ಅಹಂಕಾರವು ಅಳಿದು ಹೋಗಿ, ವಿನಯವು ಹುಟ್ಟಿ, ನಮ್ರತೆಯನ್ನು ತಂದು ಭಕ್ತಿಯನ್ನುಂಟು ಮಾಡುತ್ತದೆ. ಭಕ್ತಿ ಪರವಶನಾದ ಭಗವಂತನು ಅನುಗ್ರಹ ಮಾಡಿದರೆ ಮುಕ್ತಿ ತಾನಾಗಿ ಬರುತ್ತದೆ.

ಭಕ್ತ್ಯಾ ಮಾಮಭಿಜಾನಾತಿ
ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ
ಜ್ಞಾತ್ವಾ ವಿಶತೇ ತದನಂತರಮ್॥

(ನನ್ನ ಮಹಿಮೆ ಯಾವುದು, ನನ್ನ ತತ್ತ್ವಸ್ವರೂಪವೇನು ಎಂದು ಭಕ್ತಿಯಿಂದ ಭಕ್ತನು ಅರಿತುಕೊಳ್ಳುತ್ತಾನೆ. ಅಂತಹ ತತ್ತ್ವಜ್ಞಾನವನ್ನು ಪಡೆದ ಮೇಲೆ ಆ ಭಕ್ತನು ನನ್ನಲ್ಲಿ ಲೀನವಾಗುತ್ತಾನೆ.) ಭಕ್ತಿಯೋಗ ನಮ್ಮ ಕಾಲಕ್ಕೆ ಅತ್ಯಂತ ಅಪೇಕ್ಷಿತ. ಇದನ್ನು ಯಾವ ಭೇದವೂ ಇಲ್ಲದೆ ಎಲ್ಲರೂ ಅನುಸರಿಸಬಹುದು. ವಿಶ್ವರೂಪವನ್ನು ಅರ್ಜುನನಿಗೆ ತೋರಿಸಿದ ಶ್ರೀಕೃಷ್ಣನು ಹೇಳುತ್ತಾನೆ –

ನಾಹಂ ವೇದೈರ್ನ ತಪಸಾ ನ
ದಾನೇನ ನ ಚೇಜ್ಯಯಾ ।
ಶಕ್ಯ ಏವಂ ವಿಧೋ ದ್ರಷ್ಟುಂ
ದೃಷ್ಟವಾನಸಿ ಮಾಂ ಯಥಾ ॥
ಭಕ್ತ್ಯಾ ತ್ವನನ್ಯಯಾ
ಶಕ್ಯಃ ಅಹಮೇವಂವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ
ಕೌಂತೇಯ ಪ್ರವೇಷ್ಟುಂ ಚ ಪರಂತಪ ॥

(ವೇದಾಧ್ಯಯನದಿಂದಾಗಲೀ, ತಪಸ್ಸಿನಿಂದಾಗಲೀ, ದಾನದಿಂದಾಗಲೀ, ಯಜ್ಞದಿಂದಾಗಲೀ ನನ್ನ ವಿಶ್ವರೂಪವನ್ನು ನೀನು ನೋಡಿದಂತೆ ನೋಡಲಾಗುವುದಿಲ್ಲ. ಅನನ್ಯವಾದ ಭಕ್ತಿಯಿಂದ ಮಾತ್ರ ನನ್ನನ್ನು ಹೀಗೆ ಅರಿತುಕೊಳ್ಳಲು, ನೋಡಲು ಮತ್ತು ಪ್ರವೇಶಿಸಲು ಶಕ್ಯವಾಗುವುದು.)

ಹೀಗೆ ಭಗವದ್ಗೀತೆಯಲ್ಲಿ ಜ್ಞಾನ, ಕರ್ಮ, ಭಕ್ತಿ ಎಂಬ ಮೂರು ಮುಖ್ಯ ಜೀವನ ಮೌಲ್ಯಗಳನ್ನು ನಿರೂಪಿಸಲಾಗಿದೆ. ಇತರ ಮೌಲ್ಯಗಳ ಬಗೆಗೆ ಮುಂದೆ ಚಿಂತನೆಯನ್ನು ಮಾಡೋಣ.

ಮೈಸೂರು ಅರಮನೆ ಸೇರಿದಂತೆ 10 ಸ್ಥಳದಲ್ಲಿ ದಸರಾ ಸಾಂಸ್ಕೃತಿಕ ವೈಭವ

● ಸಂಗೀತದ ರಸದೌತಣ ಉಣಬಡಿಸುವ ಖ್ಯಾತ ಕಲಾವಿದರು ● ಭಾವನ ಭರತನಾಟ್ಯ, ಅಜಯ್ ವಾರಿಯರ್ ಸಂಗೀತ, ಡಾ.ಕಿಕ್ಕೇರಿ ಕೃಷ್ಣಮೂರ್ತಿ ಭಾವಗೀತೆ


ಅರ್ಜುನ್ ವಾರಿಯರ್


ಡಾ.ಕಿಕ್ಕೇರಿ ಕೃಷ್ಣಮೂರ್ತಿ


ಡಾ.ಅಪ್ಪಗೆರೆ ತಿಮ್ಮರಾಜು



ಮೈಸೂರು, ಅ.10(ಬಿಎಲ್‌ಯು)– ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ಅಕ್ಟೋಬರ್ 15ರಿಂದ 23ರವರೆಗೆ ಪ್ರಧಾನ ವೇದಿಕೆಂರಾದ ಮೈಸೂರು ಅರಮನೆ ಸೇರಿದಂತೆ ನಗರದ 10 ಸ್ಥಳಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಖ್ಯಾತ ಚಲನಚಿತ್ರ ನಟಿಯೂ ಆದ ಭರತನಾಟ್ಯ ಕಲಾವಿದೆ ಭಾವನ ರಾಮಣ್ಣ ಅವರಿಂದ ನೃತ್ಯ ರೂಪಕ, ಅಜಯ್ ವಾರಿಯರ್ ಅವರಿಂದ ಸಂಗೀತ ಯಾನ, ಡಾ.ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಡಾ.ಅಪ್ಪಗೆರೆ ತಿಮ್ಮರಾಜು ತಂಡದಿಂದ ಭಾವಗೀತೆ ಸೇರಿದಂತೆ ಹಲವು ವಿಶಿಷ್ಟ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯತ್ರಿ ತಿಳಿಸಿದರು.


ಗಾಯತ್ರಿ

ಮೈಸೂರು ಅರಮನೆ, ಜಗನ್ಮೋಹನ ಅರಮನೆ, ಕಲಾಮಂದಿರ, ಗಾನಭಾರತಿ, ನಾದಬ್ರಹ್ಮ ಸಂಗೀತ ಸಭಾ, ಚಿಕ್ಕ ಗಡಿಯಾರ, ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಆವರಣ, ಪುರಭವನ, ಕಿರುರಂಗಮಂದಿರ, ನಟನ ರಂಗಮಂದಿರ, ರಮಾಗೋವಿಂದ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ: ಅ.21ರಂದು ಮೈಸೂರು ಅರಮನೆ ವೇದಿಕೆಯಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಕಾರ್ಯಕ್ರಮದಲ್ಲಿ ಬೆಳಗ್ಗೆ 6ರಿಂದ ಸಂಜೆ 6 ಗಂಟೆ ತನಕ ಹಲವು ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುವುದು.

ಸಂಚಾರಿ ವಾಹನ: ಅ.15ರಿಂದ 23ರವರೆಗೆ ಸಂಚಾರಿ ವಾಹನವು ನಗರದ ಹಲವು ಪ್ರದೇಶಗಳಲ್ಲಿ ಸಂಚರಿಸಿ ಒಂದೊಂದು ಸ್ಥಳದಲ್ಲಿ ಕನಿಷ್ಠ 30 ನಿಮಿಷ ಹಲವು ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಿದೆ.

ನೃತ್ಯರೂಪಕ, ಸಂಗೀತ ಯಾನ: ಅ.15ರಂದು ಚಲನಚಿತ್ರ ನಟಿಯೂ ಆದ ಭರತನಾಟ್ಯ ಕಲಾವಿದೆ ಭಾವನ ರಾಮಣ್ಣ ಅವರಿಂದ ನೃತ್ಯ ರೂಪಕ ಇದ್ದು, ಅಜಯ್ ವಾರಿಯರ್ ಅವರು ಸಂಗೀತ ಯಾನದ ಮೂಲಕ ಕನ್ನಡ ಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ.


ಭಾವನಾ ರಾಮಣ್ಣ

ತಾಳ–ಗಾನ–ಯಾನ, ಭಾರತೀಯ ನೃತ್ಯ ವೈವಿಧ್ಯ: ಅ.16ರಂದು ವಿದ್ವಾನ್ ಡಾ.ದುಂಡಯ್ಯ ಪೂಜೇರ ಅವರಿಂದ ತಾಳ–ಗಾನ –ಯಾನದಲ್ಲಿ ಶಾಸ್ತ್ರೀಯ ವಾದ್ಯ ವೃಂದ ಕಛೇರಿ, ಅಯನಾ ಡ್ಯಾನ್ಸ್ ಕಂಪನಿಯವರು ಭಾರತೀಯ ನೃತ್ಯ ವೈವಿಧ್ಯ ಪ್ರದರ್ಶಿಸಲಿದ್ದಾರೆ.

ವಾದ್ಯ ಸಂಗೀತ–ಸಿತಾರ್ ಜುಗಲ್ ಬಂದಿ: ಉಸ್ತಾದ್ ರಫೀಕ್ ಖಾನ್, ವಿದ್ವಾನ್ ಅಂಕುಶ್ ಎನ್, ನಾಯಕ್ ತಂಡದಿಂದ ವಾದ್ಯ ಸಂಗೀತ–ಸಿತಾರ್ ಜುಗಲ್ ಬಂದಿ ನಡೆಯಲಿದ್ದು, ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯ ಮತ್ತು ವಿದ್ವಾನ್ ರಾಕೇಶ್ ಚೌರಾಸಿಯಾ ತಂಡದಿಂದ ಕರ್ನಾಟಕ–ಹಿಂದೂಸ್ಥಾನಿ ಜುಗಲ್ ಬಂದಿ ವಾದ್ಯ ಸಂಗೀತ ಜರುಗಲಿದೆ.

ಭಾವಗೀತೆ ಹಾಗೂ ಜನಪದ ಗೀತೆಗಳ ಸಂಭ್ರಮ: ಅ.18ರಂದು ಡಾ.ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಡಾ.ಅಪ್ಪಗೆರೆ ತಿಮ್ಮರಾಜು ತಂಡದಿಂದ ಭಾವಗೀತೆ ಹಾಗೂ ಜನಪದ ಗೀತೆಗಳ ಸಂಭ್ರಮ ನಡೆಯಲಿದೆ. ಇದಕ್ಕೂ ಮೊದಲು ಪೊಲೀಸ್ ಬ್ಯಾಂಡ್ ಮತ್ತು ಮಾಸ್ ಬ್ಯಾಂಡ್ ಕಾರ್ಯಕ್ರಮವಿರುತ್ತದೆ.

ನೃತ್ಯ ರೂಪಕ, ಸ್ಯಾಕ್ಸೋಫೋನ್ ಫ್ಯೂಷನ್: ಅ.19ರಂದು ರಾಜೇಶ್ವರಿ ಮತ್ತು ತಂಡದಿಂದ ನೃತ್ಯ ರೂಪಕ ಹಾಗೂ ವಿದ್ವಾನ್ ಮೈಸೂರು ಹರೀಶ್ ಪಾಂಡವ್ ಮತ್ತು ತಂಡದಿಂದ ಸ್ಯಾಕ್ಸೋಫೋನ್ ಫ್ಯೂಷನ್ ಕಾರ್ಯಕ್ರಮ ಜರುಗಲಿದೆ.

ಕಾವ್ಯ–ಕುಂಚ–ಗಾಯನ: ಅ.29ರಂದು ಮುಡಿಗುಂಡ ಮೂರ್ತಿ ಮತ್ತು ತಂಡದಿಂದ ಕಾವ್ಯ–ಕುಂಚ–ಗಾಯನ ಕಾರ್ಯಕ್ರಮ, ಪಶ್ಚಿಮ ಬಂಗಾಳದ ವಿದುಷಿ ಸೋಹಿನಿ ಬೋಸ್ ಬ್ಯಾನರ್ಜಿ ತಂಡದಿಂದ ಒಡಿಸ್ಸಿ–ಕೂಚಿಪುಡಿ–ಭರತನಾಟ್ಯಂ ಪ್ರದರ್ಶನವಿರಲಿದೆ.

ಕರ್ನಾಟಕ ಶಾಸ್ತ್ರೀಯ ವೇಣುವಾದನ: ಅ.21ರಂದು ವಿದ್ವಾನ್ ಡಾ.ಸಿ.ಎ.ಶ್ರೀಧರ್ ಅವರಿಂದ ಕರ್ನಾಟಕ ಶಾಸ್ತ್ರೀಯ ವೇಣುವಾದನ ಹಾಗೂ ವಿದ್ವಾನ್ ರಾಜೇಶ್ ವೈದ್ಯ ಅವರಿಂದ ವೀಣಾ–ಮ್ಯಾಂಡೋಲಿನ್ ಜುಗಲ್ ಬಂದಿ ಫ್ಯೂಷನ್ ಹಾಗೂ ಅವಳಿ ಸಹೋದರಿಯರಾದ ನಿಸರ್ಗ ಮತ್ತು ವಿಸ್ಮಯ ಅವರು ರಂಗಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ.

ಅಂದು ನಾದಬ್ರಹ್ಮ ಡಾ.ಹಂಸಲೇಖ ಅವರು ಸಂಯೋಜಿಸಿರುವ ಜಯಹೇ ನಾಲ್ವಡಿ ಕುರಿತ ಸಂಗೀತ ನೃತ್ಯ ದೃಶ್ಯ ಪ್ರದರ್ಶನ ಪ್ರಸ್ತುತಪಡಿಸಲಾಗುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯುವ ಚೇತನರಲ್ಲಿ ಚಿಮ್ಮಿದ ದೇಶಭಕ್ತಿ... ರಾಷ್ಟ್ರ ಮಂತ್ರ...

ಯೋಧರಿಗೆ ನಮನ... ಅನ್ನದಾತರ ಸ್ಮರಣೆ... ಮೊಳಗಿತು ಪರಿಸರ ಸಂರಕ್ಷಣೆ ಶಪಥ





ಮಂಡ್ಯದ ಸಂತ ಜಾನ್ಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಜೈ ಜವಾನ್ ಜೈಕಿಸಾನ್ ನೃತ್ಯ.



ಲಿಂಗಸಮಾನತೆ ಕುರಿತು ನೃತ್ಯ ಪ್ರದರ್ಶನ ನೀಡಿದ ಮೈಸೂರಿನ ಸೆಂಟ್ ಮೇರಿಸ್ ಗರ್ಲ್ಸ್ ಕಂಪೋಸಿಟ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು.



ಚಾ.ನಗರ ಮರಿಯಾಲ ಶ್ರೀ ಮುರುಘರಾಜೇಂದ್ರಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ನಾಲ್ವಡಿ ಸ್ಮರಣೆ.





ರಾಜೀವ್‌ನಗರ ಪದವಿ ಪೂರ್ವ ಶಿಕ್ಷಣ ಇಲಾಖೆ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ದೇಶಭಕ್ತಿ ನೃತ್ಯ.



ಭಾರತ ಸಂವಿಧಾನ ಉಳಿಸಿ... ಗೌರವಿಸಿ...

ಭಾರತ ಸಂವಿಧಾನ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಮನೋಜ್ಞ ನೃತ್ಯ ಪ್ರದರ್ಶನ ನೀಡಿದ ಮೈಸೂರು ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಭಾರತ ಸಂವಿಧಾನ ಉಳಿಸಿ, ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಸಾರಿದರು. ವಿದ್ಯಾರ್ಥಿಗಳ ಆಕರ್ಷಕ ನೃತ್ಯ ಸಂಯೋಜನೆಗೆ ಎದ್ದು ನಿಂತು ಕರತಾಡನ ನೀಡಿದ ಜನಸ್ತೋಮದ ನಡುವೆ 'ಜೈ ಭೀಮ್' ಘೋಷಣೆ ಮಿಂಚಿನಂತೆ ಆಕಾಶದೆತ್ತರಕ್ಕೆ ಚಿಮ್ಮಿತು.



ಭಾರತ ಸಂವಿಧಾನ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಕುರಿತ ನೃತ್ಯ ಪ್ರದರ್ಶನಕ್ಕೆ ಮೊಬೈಲ್ ಟಾರ್ಚ್‌ಲೈಟ್ ಆನ್ ಮಾಡಿ ಸಂಭ್ರಮಿಸಿದ ದೃಶ್ಯ



ಮಹಿಷ ಮರ್ಧಿನಿ

'ಐಗಿರಿ ನಂದಿನಿ' ವಿಶೇಷ ನೃತ್ಯ ರೂಪಕ ಪ್ರದರ್ಶನ ನೀಡಿದ ಮೈಸೂರಿನ ಕುವೆಂಪುನಗರದ ಮೈತ್ರಿ ಚಾರಿಟೆಬಲ್ ಟ್ರಸ್ಟ್‌ನ ವಿಶೇಷಚೇತನ ಮಕ್ಕಳು ಅಪಾರ ಮೆಚ್ಚುಗೆ ಪಡೆದರು. ಅಲ್ಲದೆ, ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಭಕ್ತಿಯ ಸುಧೆ ಹರಿಸಿದರು. ಹಾಗೆಯೇ ಹುಲಿಗಳ ಸಂರಕ್ಷಣೆ ಕುರಿತು ನೃತ್ಯದ ಮೂಲಕ ಜಾಗೃತಿ ಮೂಡಿಸಿದ ತಿಲಕ್ ನಗರದ ಕಿವುಡು ಮಕ್ಕಳ ಸರ್ಕಾರಿ ಪಾಠಶಾಲೆ ಮಕ್ಕಳು ಶಿಳ್ಳೆ-ಚಪ್ಪಾಳೆ ಗಿಟ್ಟಿಸಿ, ಸೈ ಎನಿಸಿಕೊಂಡರು.

ಮೈಸೂರು,ಅ.10(ಎಂಕೆ)-ಯುವ ಮನಸ್ಸುಗಳಲ್ಲಿ ಹೊಂಬೆಳಕಿನಂತೆ ಹರಡಿದ ವಂದೇ ಮಾತರಂ ರಾಷ್ಟ್ರ ಮಂತ್ರ... ದೇಶಭಕ್ತಿಯನ್ನೊಳಗೊಂಡ ವಿಶೇಷ ನೃತ್ಯಾಭಿನಯದ ಮೂಲಕ ಗಡಿ ಕಾಯುವ ವೀರ ಯೋಧರಿಗೆ ಹೃದಯ ಪೂರ್ವಕ ನಮನಗಳನ್ನು ಸಲ್ಲಿಸಿದ ಕಾಲೇಜು ವಿದ್ಯಾರ್ಥಿಗಳು...!

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮ ಸಾಂಸ್ಕೃತಿಕ ವೇದಿಕೆಯಲ್ಲಿ ಯೋಧರ ಧೈರ್ಯ, ಸ್ಥೈರ್ಯ, ಸಾಹಸ ಹಾಗೂ ಅವರ ತ್ಯಾಗಕ್ಕೆ ಸಲಾಂ ಮಾಡಲಾಯಿತು. ಸೇವಾ ಸಮವಸ್ತ್ರ ತೊಟ್ಟು ಮಿಂಚಿನ ರೀತಿಯಲ್ಲಿ ಹೆಜ್ಜೆ ಹಾಕಿದ ವಿವಿಧ ಕಾಲೇಜು ವಿದ್ಯಾರ್ಥಿಗಳ ಕಲಾತಂಡಗಳು ನೆರೆದಿದ್ದವರು ಹೃದಯದಲ್ಲಿ ದೇಶಪ್ರೇಮವನ್ನು ಇಮ್ಮಡಿಗೊಳಿಸಿದರು.

'ಸಲಾಂ ಸೋಲ್ಜರ್', 'ಧೀರ ಧೀರ ಈ ಸುಲ್ತಾನ್', 'ಮೇರಾ ಭಾರತ್ ಮಹಾನ್', 'ಜನನಿ ಜನ್ಮ ಭೂಮಿ', ಜಯಯೇ ಭಾರತ ಮಾತೇ' ಎಂಬಿತ್ಯಾದಿ ದೇಶಾಭಿಮಾನದ ಹಾಡುಗಳಿಗೆ ಅಮೋಘ ನೃತ್ಯ ಸಂಯೋಜನೆಯೊಂದಿಗೆ ಗಮನ ಸೆಳೆದ ಪಿರಿಯಾಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರಿನ ಡಿ.ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು, ಮಳವಳ್ಳಿಯ ಶಾಂತಿ ಕಲಾ ವಿಜ್ಞಾನ ಕಾಲೇಜು, ಚಿನಕುರಳಿ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪೇಟೆ ಪ್ರಥಮ ದರ್ಜೆ ಕಾಲೇಜು ಹಾಗೂ ಮೈಸೂರು ವಿಶ್ವೇಶ್ವರನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವಿದ್ಯಾರ್ಥಿಗಳು ಅರ್ಥಪೂರ್ಣವಾಗಿ 'ಜೈ ಹಿಂದ್' ಘೋಷಣೆ ಮೊಳಗಿಸಿದರು.



ರಾಮನಗರ ಶಾಂತಿನಿಕೇತನ ಕಾಲೇಜ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳಿಂದ ಪರಿಸರ ಜಾಗೃತಿ ನೃತ್ಯ



ಹಾಗೆಯೇ 'ಫನಾ' ಹಿಂದಿ ಚಿತ್ರದ 'ದೇಶ್ ರಂಗೀಲಾ' ಹಾಡಿಗೆ ವಿಶಿಷ್ಟವಾಗಿ ನೃತ್ಯ ಪ್ರದರ್ಶನ ನೀಡಿದ ಮೈಸೂರು ರಾಜೀವ್‌ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ನೆರೆದಿದ್ದ ಯುವ ಸಮೂಹದಲ್ಲಿ ದೇಶಭಕ್ತಿಯ ರಂಗನ್ನು ಪಸರಿಸಿದರು.

ನಾಡ ಸಂಭ್ರಮ: ಕನ್ನಡ ನಾಡಿನ ಸಾಂಸ್ಕೃತಿಕ ಕಲೆಗಳನ್ನು ಬಿಂಬಿಸುವ ಜಾನಪದ ನೃತ್ಯಗಳ ಮೂಲಕ ಕನ್ನಡ ನಾಡು-ನುಡಿ, ಪರಂಪರೆ ಕುರಿತು ಮಂಡ್ಯದ ಮಾಂಡವ್ಯ ಪ್ರಥಮ ದರ್ಜೆ ಕಾಲೇಜು, ರಾಮನಗರ ಮಾಗಡಿಯ ಶ್ರೀ ಶಾರದಾ ಪ್ರಥಮ ದರ್ಜೆ ಕಾಲೇಜು ಹಾಗೂ ಹುಣಸೂರಿನ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಸಂಸ್ಥೆ ವಿದ್ಯಾರ್ಥಿಗಳು 'ನಮಸ್ತೆ ಕರುನಾಡಿಗೆ', 'ಕುರುನಾಡೆ ಕೈ ಚಾಚಿದೆ ನೋಡೆ', ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬಿತ್ಯಾದಿ ನಾಡ ಪ್ರೇಮದ ಹಾಡುಗಳಿಗೆ ಮನೋಜ್ಞವಾಗಿ ನೃತ್ಯ ಮಾಡುವ ಮೂಲಕ ಎಲ್ಲರನ್ನು ಕುಣಿದು ಕುಪ್ಪಳಿಸಿದರಲ್ಲದೆ, ನಾಡ ಸಂಭ್ರಮಕ್ಕೆ ಮೆರಗು ತಂದರು.

ಅದೇ ರೀತಿ ಹೆಚ್.ಡಿ.ಕೋಟೆ ಸೊಳ್ಳೇಪುರದ ಏಕಲವ್ಯ ಮಾದರಿ ವಸತಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಬುಡಕಟ್ಟು ನಿವಾಸಿಗಳ ಸಾಂಸ್ಕೃತಿಕ ನೃತ್ಯ ಪ್ರದರ್ಶನ ಮೆಚ್ಚುಗೆಗೆ ಪಾತ್ರವಾಯಿತು.

ಹೆಣ್ಣು ಸಬಲೆ: ಸಮ ಸಮಾಜ ನಿರ್ಮಾಣಕ್ಕೆ ಲಿಂಗ ಸಮಾನತೆಯ ಅಗತ್ಯತೆ ಸಾರಿದ ಮೈಸೂರಿನ ಸೆಂಟ್ ಮೇರಿಸ್ ಗರ್ಲ್ಸ್ ಕಂಪೋಸಿಟ್ ಪದವಿ ಪೂರ್ವ ಕಾಲೇಜು ಹಾಗೂ ಕುವೆಂಪುನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಮೇಲೆ ಬೆಳಕು ಚೆಲ್ಲಿದರಲ್ಲದೆ ಹೆಣ್ಣು ಮಕ್ಕಳು ತಮ್ಮ ಜೀವನದಲ್ಲಿ ಎದುರಾಗುವ ಸಂಕಷ್ಟಗಳನ್ನು ಧೈರ್ಯವಾಗಿ ಎದುರಿಸಿ, ಸಾಧಕರಾಗುವಂತೆ ವಿನೂತನ ನೃತ್ಯಾಭಿನಯದ ಮೂಲಕ ಕರೆ ನೀಡಿದರಲ್ಲದೆ ಲಿಂಗ ಸಮಾನತೆಯ ಅರಿವು ಮೂಡಿಸಿದರು.

ಕಾವೇರಿ ನಮ್ಮದು: ಅನ್ನದಾತ ರೈತರ ಸ್ಮರಣೆಯೊಂದಿಗೆ ಅವರ ಮಹತ್ವ ತಿಳಿಸಿದ ಹುಣಸೂರು ಶ್ರೀ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ ಮರಿಯಾಲದ ಶ್ರೀ ಮುರುಘರಾಜೇಂದ್ರ ಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ಹಾಗೂ ಮಂಡ್ಯದ ಸೆಂಟ್ ಜಾನ್ಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ರೈತರಿಗೆ ದೊಡ್ಡ ಸಾಹುಕಾರನಿಲ್ಲ. ಅವರೇ ಮಣ್ಣಿನ ಮಕ್ಕಳು, ಕೊಡುಗೈ ದಾನಿಗಳು ಎಂದು ನಮನ ಸಲ್ಲಿಸಿದರಲ್ಲದೆ ಕನ್ನಡ ನಾಡಿನ ಜೀವನದಿ ಕಾವೇರಿ ನಮ್ಮದು ಎಂಬ ನಾಮಫಲಕಗಳನ್ನು ಪ್ರದರ್ಶಿಸಿದರು.

ಪರಿಸರ ಉಳಿಸಲು ಕರೆ: ಮೈಸೂರು ಕುವೆಂಪುನಗರದ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಪದವಿ ಪೂರ್ವ ಕಾಲೇಜು ಹಾಗೂ ರಾಮನಗರದ ಶಾಂತಿನಿ ಕೇತನ ಕಾಲೇಜ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳು ನೆಮ್ಮದಿಯ ಉಸಿರಾಟಕ್ಕೆ ಪರಿಸರ ಉಳಿಸುವಂತೆ ನೃತ್ಯದ ಮೂಲಕ ಕರೆ ನೀಡಿದರು. ಮರವಿದ್ದರೆ ಮಳೆ, ಇಲ್ಲದಿದ್ದರೆ ಬರ-ಬೆಂಕಿ ಎಂಬುದನ್ನು ಅರ್ಥವತ್ತಾಗಿ ತಿಳಿಸಿದರು. ಹಾಗೆಯೇ ಭಾರತೀನಗರದ ಭಾರತೀ ಕಾಲೇಜು ವಿದ್ಯಾರ್ಥಿಗಳು ಚಂದ್ರಯಾನ-3 ಯಶಸ್ವಿ ಉಡಾವಣೆ ನೃತ್ಯ ರೂಪಕ ಪ್ರದರ್ಶಿಸುವ ಮೂಲಕ ದೇಶದ ವಿಜ್ಞಾನಿಗಳಿಗೆ ಗೌರವ ಸಲ್ಲಿಸಿದರು. ನೃತ್ಯ ಪ್ರದರ್ಶನ ನೀಡಿದ ಕಾಲೇಜು ತಂಡಗಳಿಗೆ ಯುವ ಸಂಭ್ರಮ ಉಪಸಮಿತಿ ಅಧ್ಯಕ್ಷ ಮಹೇಶ್ ಸೋಸಲೆ, ಉಪಾಧ್ಯಕ್ಷ ನಾಗರಾಜ್ ಇತರರು ನೆನಪಿನ ಸ್ಮರಣಿಕೆ ನೀಡಿ ಅಭಿನಂದಿಸಿದರು.

ದಸರಾಗೆ ಕೆಟ್ಟ ಹೆಸರು ತರಲು ಬಿಜೆಪಿ ಚಾಮುಂಡಿಬೆಟ್ಟ ಚಲೋ

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ ಆರೋಪ

ಮೈಸೂರು,ಅ.10(ಆರ್‌ಕೆ)- ಮೈಸೂರು ದಸರಾ ಮಹೋತ್ಸವಕ್ಕೆ ಕೆಟ್ಟಹೆಸರು ತಂದು ರಾಜಕೀಯ ಮಾಡಲು ಬಿಜೆಪಿ ಚಾಮುಂಡಿಬೆಟ್ಟ ಚಲೋ ಮಾಡಲು ಮುಂದಾಗಿದೆ ಎಂದು ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, 2024ರ ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ಗದ್ದಲ ಸೃಷ್ಟಿಸಿ ದಸರಾ ಮಹೋತ್ಸವ ಸಂದರ್ಭ ಸರ್ಕಾರಕ್ಕೆ ಕೆಟ್ಟ ಹೆಸರು ತಂದು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಂಸದ ಪ್ರತಾಪ್ ಸಿಂಹ ಪ್ರಯತ್ನಿಸುತ್ತಿದ್ದಾರೆ ಎಂದರು.

ಮೈಸೂರು ಕ್ಷೇತ್ರಕ್ಕೆ ಪ್ರತಾಪ್ ಸಿಂಹ ಮಾಡಿರುವ ಕೆಲಸ ಶೂನ್ಯ. ಇದೀಗ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಚಾಮುಂಡಿಬೆಟ್ಟ ಚಲೋ ಮಾಡಲು 5000 ಮಂದಿ ಸೇರಿಸುತ್ತೇವೆ ಎನ್ನುತ್ತಿದ್ದಾರೆ. ಅದಕ್ಕಾಗಿ ಕರಾವಳಿ ಜಿಲ್ಲೆ ಹಾಗೂ ಇತರ ಭಾಗಗಳಿಂದ ಮೈಸೂರಿಗೆ 400 ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರು ಬಂದಿದ್ದಾರೆ ಎಂಬ ಮಾಹಿತಿ ಇದೆ. ಅವರನ್ನು ಏಕೆ ಕರೆತಂದಿದ್ದೀರಿ, ಮಹಿಷಾ ಪೂಜೆ ಮಾಡಬೇಡಿ ಎಂದು ಹೇಳಲು ನೀವ್ಯಾರು ಎಂದು ಲಕ್ಷ್ಮಣ ವಾಗ್ದಾಳಿ ನಡೆಸಿದರು.

ದಲಿತರು, ಹಿಂದುಳಿದ ವರ್ಗದವರು ಮಹಿಷಾ ಪೂಜೆ ಮಾಡಿದರೆ ಸಮಸ್ಯೆ ಏನು? ನಿಮ್ಮ ಕುಟುಂಬಕ್ಕೆ, ಬಿಜೆಪಿಗೆ ತೊಂದರೆ ಮಾಡಿದರೆ ಹೇಳಿ, ಸರ್ಕಾರ ಅಂತಹವರ ವಿರುದ್ಧ ಕ್ರಮ ವಹಿಸಲಿದೆ. ನಿಮ್ಮ ಸರ್ಕಾರ ಇದ್ದಾಗ ಚಾಮುಂಡಿಬೆಟ್ಟದಲ್ಲಿರುವ ಮಹಿಷಾಸುರನ ಪ್ರತಿಮೆಯನ್ನು ತೆಗೆಸಬೇಕಿತ್ತು.

ಬೆಟ್ಟಕ್ಕೆ ಬರುವವರು ಮೊದಲು ಮಹಿಷಾಸುರನ ದರ್ಶನ ಮಾಡಿದ ನಂತರ ತಾಯಿ ಚಾಮುಂಡೇಶ್ವರಿ ದರ್ಶನ ಮಾಡುತ್ತಾರೆ. ಹಾಗಾದರೆ ಮಹಿಷಾಸುರನ ಪ್ರತಿಮೆ ಏಕೆ ಉಳಿಸಿದ್ದಾರೆ. ಮಹಿಷನ ಪೂಜೆ ಮಾಡುವುದರಿಂದ ಚಾಮುಂಡೇಶ್ವರಿಗೆ ತೊಂದರೆ ಉಂಟಾಗಿದೆಯೇ ಎಂದು ಪ್ರಶ್ನಿಸಿದರು.

ಶಾಸಕ ಜಿ.ಟಿ.ದೇವೇಗೌಡ ಆತ್ಮಹತ್ಯೆ ಭಾಗ್ಯ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಲಕ್ಷ್ಮಣ, ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ 4,457 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2013-2018 ರವರೆಗೆ ಸಿದ್ದರಾಮಯ್ಯ ಅವಧಿಯಲ್ಲಿ 3500 ಮಂದಿ ಹಾಗೂ 2023ರ ನಂತರ 96 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುಖಾಸುಮ್ಮನೆ ಆಧಾರ ರಹಿತ ಆರೋಪ ಮಾಡಬಾರದು ಎಂದರು.

ದಿನೇಶ್ ನಿಧನ



ಮೈಸೂರು,ಅ.10-ಕೆ.ಆರ್.ನಗರ ಹಳೆಯೂರು ಬಡಾವಣೆ ನಿವಾಸಿ, ರಂಜಿತಾ ಬಾರ್ ಮಾಲೀಕ ದಿನೇಶ್(50) ಮಂಗಳವಾರ ನಿಧನರಾದರು. ಮೃತರು ಪತ್ನಿ ಮಂಜುಳ, ಮೂವರು ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅರಕಲಗೂಡು ತಾಲೂಕು ಹಿನ್ನೆಳ್ಳಿಯಲ್ಲಿ ಬುಧವಾರ ಬೆಳಗ್ಗೆ 12 ಗಂಟೆಗೆ ನಡೆಯಲಿದೆ.

ಹಳೆ ವಾಹನಗಳಿಗೆ ನ.17ರೊಳಗೆ ಹೊಸ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಕಡ್ಡಾಯ

● ಸರ್ಕಾರದ ಕಟ್ಟಾದೇಶ ● ಆದರೆ ಈ ನಂಬರ್ ಪ್ಲೇಟ್ ಪಡೆಯಲು ವಾಹನ ಮಾಲೀಕರ ಹರಸಾಹಸ


ಮೈಸೂರು, ಅ.10(ಎಸ್‌ಪಿಎನ್)- ಅತಿ ಸುರಕ್ಷಿತ ನೋಂದಣಿ ಫಲಕ (ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್- ಎಚ್‌ಎಸ್‌ಆರ್‌ಪಿ) ಅಳವಡಿಕೆಗೆ ಸಾರಿಗೆ ಇಲಾಖೆ ಆದೇಶ ಹೊರಡಿಸಿದ್ದು, 2019ರ ಏ.1ರ ಮೊದಲು ನೋಂದಣಿಯಾಗಿರುವ ವಾಹನಗಳ ಹಳೇ ನಂಬರ್ ಪ್ಲೇಟ್‌ಗಳನ್ನು ನ.17ರ ಒಳಗಾಗಿ ಬದಲಾಯಿಸುವಂತೆ ಸೂಚನೆ ನೀಡಿದೆ.

ಈ ಆದೇಶದಿಂದ ವಾಹನ ಮಾಲೀಕರು ಗೊಂದಲಕ್ಕೆ ಒಳಗಾಗಿದ್ದಾರೆ. ನಗರದಲ್ಲಿ ಎಚ್‌ಎಸ್‌ಆರ್‌ಪಿ ಫಲಕ ಹಾಕಬೇಕಾದ ವಾಹನಗಳ ಸಂಖ್ಯೆ 4ಲಕ್ಷಕ್ಕೂ ಅಧಿಕ. ಈ ಕುರಿತು ಶೋರೂಂ ಅಥವಾ ಡೀಲರ್‌ಗಳ ಬಳಿ ನಂಬರ್ ಪ್ಲೇಟ್ ಬದಲಾವಣೆಗೆ ಅವಕಾಶ ನೀಡಲಾಗಿದ್ದರೂ ಅವರಿಗೂ ಈ ಬಗ್ಗೆ ಸ್ಪಷ್ಟತೆ ಇಲ್ಲ. ವಾಹನ ಮಾಲೀಕರು ವಿಚಾರಿಸಿದರೆ ದಾಖಲೆ ಕೊಡಿ ನೋಂದಣಿ ಮಾಡಿಕೊಳ್ಳಿ, ನಂಬರ್ ಪ್ಲೇಟ್ ಬಂದಾಗ ಫೋನ್ ಮಾಡಿ ತಿಳಿಸುತ್ತೇವೆ ಎಂದು ಶೋರೂಂ ಸಿಬ್ಬಂದಿ, ಮಾಲೀಕರಿಗೆ ಉಡಾಫೆ ಉತ್ತರ ಹೇಳಿ ಕಳುಹಿಸುತ್ತಿದ್ದಾರೆ.

ಈ ರೀತಿಯ ದ್ವಂದ್ವಗಳಿಂದ ವಾಹನ ಮಾಲೀಕರು ಕಂಗಾಲಾಗಿದ್ದು, ನ.17ರ ಗಡುವು ನೀಡಿರುವ ರಾಜ್ಯ ಸರ್ಕಾರ, ಈ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವಲ್ಲಿ ಹಿಂದೆ ಬಿದ್ದಿದೆ. ಇದು ಮಾಲೀಕರ ಅಸಮಾಧಾನಕ್ಕೂ ಕಾರಣವಾಗಿದೆ. ಎಚ್‌ಎಸ್‌ಆರ್‌ಪಿ ಉತ್ಪಾದನಾ ವೆಚ್ಚ ಮತ್ತು ಮಾರಾಟ ಬೆಲೆ ನಡುವೆ ಭಾರಿ ವ್ಯತ್ಯಾಸವಿದ್ದು, ಬಹುತೇಕ ವಾಹನ ಮಾಲೀಕರ ಹಿತಾಸಕ್ತಿ ಕಾಪಾಡುವಲ್ಲಿ ಇಲಾಖೆ ವಿಫಲವಾಗಿದೆ ಎಂಬುದು ವಾಹನ ಮಾಲೀಕರ ಅಳಲು. ದ್ವಿ ಚಕ್ರ ವಾಹನ ಸೇರಿದಂತೆ ಇತರೆ ವಾಹನಗಳಿಗೆ ಎಚ್‌ಎಸ್‌ಆರ್‌ಪಿ (ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್) ಪ್ಲೇಟ್ ಪಡೆಯಲು ಆನ್‌ಲೈನ್ ಮೂಲಕ ಹಣ ಕಟ್ಟಿ ರಶೀದಿ ಪಡೆದರೂ ನಂಬರ್ ಪ್ಲೇಟ್ ಸಿಗದೇ ಹರಸಾಹಸಪಡಬೇಕಾದ ಪರಿಸ್ಥಿತಿ ಉದ್ಭವವಾಗಿದೆ.

ಈ ಕುರಿತು ವಾಹನ ಮಾಲೀಕ ಬಸವರಾಜು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ನ.17ರೊಳಗೆ ಎಚ್‌ಎಸ್‌ಆರ್‌ಪಿ ಪ್ಲೇಟ್ ಪಡೆಯಲು ಕೊನೆಯ ದಿನವಾಗಿದ್ದು, ಈ ಕುರಿತು ಆನ್‌ಲೈನ್ ಮೂಲಕ ಹಣ ಕಟ್ಟಿದರೂ ಹೆಚ್‌ಎಸ್‌ಆರ್‌ಪಿ ಪ್ಲೇಟ್ ಪಡೆಯಲು ಸಾಧ್ಯವಾಗುತ್ತಿಲ್ಲ. ನಮ್ಮ ಮನೆಯ ಎರಡು ವಾಹನಗಳ ನಂಬರ್ ಪ್ಲೇಟ್ ಚೇಂಜ್ ಮಾಡಲು ಆನ್‌ಲೈನ್ ಮೂಲಕ ರೋಸ್ ಮೆರ್ಟಾ ಸೇಫ್ಟಿ ಸಿಸ್ಟಮ್ಸ್ ಪ್ರೈ.ಲಿ ಅಕೌಂಟ್‌ಗೆ 768.47 ರೂ.ಗಳನ್ನು ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ಖಾತೆಯಿಂದ ವರ್ಗಾವಣೆ ಮಾಡಲಾಗಿತ್ತು. ನಂತರ ಇದೇ ಸಂದೇಶವನ್ನು ಇ ಮೇಲ್ ಮೂಲಕ ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ಹೆಚ್‌ಎಸ್‌ಆರ್‌ಪಿ ಪ್ಲೇಟ್ ಪಡೆಯಲು ಆರ್‌ಟಿಓ ಪ್ರಕಟಣೆಯಲ್ಲಿ ತಿಳಿಸಿರುವ ವೆಬ್‌ಸೈಟ್ ಅಡ್ರೆಸ್‌ಗೆ ಪೇಮೆಂಟ್ ಮಾಡಿದರೂ ನಂಬರ್ ಪ್ಲೇಟ್ ಪಡೆಯಲು ಸಾಧ್ಯವಾಗುತ್ತಿಲ್ಲ. ಕಟ್ಟಿದ ಹಣ ವಾಪಸ್ ಮಾಡಿ ಎಂದು ಸಂಬಂಧಪಟ್ಟವರಿಗೆ ಇ ಮೇಲ್ ಸಂದೇಶ ಕಳುಹಿಸಿದಾಗ ನಿಮ್ಮ ಖಾತೆಗೆ ರಿಫಂಡ್ ಮಾಡುತ್ತೇವೆ ಎಂದು ಆ ಕಡೆಯಿಂದ ಸಂದೇಶ ಕಳುಹಿಸಿದ್ದು ಬಿಟ್ಟರೆ ಹಣ ವಾಪಸ್ಸು ಬರುವ ಸೂಚನೆಗಳೇ ಕಾಣುತ್ತಿಲ್ಲ ಎಂದು ವಾಹನ ಮಾಲೀಕ ಬಸವರಾಜು ತಿಳಿಸಿದರು.



ಅಲ್ಲದೆ ಮತ್ತೊಂದು ವಾಹನಕ್ಕೆ ರೋಸ್ ಮೆರ್ಟಾ ಸೇಫ್ಟಿ ಸಿಸ್ಟಮ್ಸ್ ಪ್ರೈ.ಲಿಗೆ 495.89 ರೂಗಳನ್ನು ವರ್ಗಾವಣೆ ಮಾಡಲಾಗಿತ್ತು. ಇಲ್ಲಿಯೂ ಸಮಸ್ಯೆಯಾಗಿದೆ. ಈ ಕುರಿತು ಇ ಮೇಲ್ ಮೂಲಕ ವಿಚಾರಿಸಿದಾಗಲೂ ಯಾವುದೇ ಉತ್ತರ ನೀಡಿಲ್ಲ. ಕೊನೆಗೆ ಕಾರ್ ಶೋ ರೂಂಗೆ ಹೋಗಿ, ಕಸ್ಟಮರ್ ಕೇರ್ ನಂಬರ್ ಪಡೆದು (92052-62323) ಅಲ್ಲಿನ ಪ್ರತಿನಿಧಿ ವಿಚಾರಿಸಿದಾಗ, ಆ ಪ್ರತಿನಿಧಿ ವಾಟ್ಸಪ್ ನಂಬರ್ ಕೊಟ್ಟು (74280-91956) ನೀವು ಯುಪಿಐ ಪೇಮೆಂಟ್ ಮಾಡಿರುವ ಜೆರಾಕ್ಸ್, ರಶೀದಿ, ಆರ್‌ಸಿ ಕಳುಹಿಸಿ ಎಂದಿದ್ದರು. ಅವರು ಹೇಳಿದಂತೆ ಆರ್‌ಸಿ ಮತ್ತು ಇತರೆ ದಾಖಲಾತಿ ಕಳುಹಿಸಿದರೂ ನಮ್ಮ ಸಮಸ್ಯೆ ಬಗೆಹರಿದಿಲ್ಲ. ಇನ್ನಾದರು ರಾಜ್ಯ ಸರ್ಕಾರ ಈ ಸಮಸ್ಯೆಗೆ ಪರಿಹಾರ ನೀಡುವಂತೆ ಮನವಿ ಮಾಡಿದ್ದಾರೆ.

ನಂಬರ್ ಪ್ಲೇಟ್ ತಯಾರಕರು ವಾಹನ ಮಾಲೀಕರಿಗಿರುವ ಮಾಹಿತಿ ಕೊರತೆಯನ್ನೇ ದುರ್ಬಳಕೆ ಮಾಡಿ ಎಚ್‌ಎಸ್‌ಆರ್‌ಪಿ ಕೋಡ್ ಇಲ್ಲದ ನಂಬರ್ ಪ್ಲೇಟ್ ನೀಡುತ್ತಿದ್ದಾರೆಂಬ ಮಾಹಿತಿ ಇದೆ. ಈ ರೀತಿ ಮಾಡಿದರೆ ವಾಹನ ಮಾಲೀಕರಿಗೆ ಮುಂದೆ ಸಮಸ್ಯೆಯಾಗುತ್ತದೆ. ನಕಲಿ ನಂಬರ್ ಪ್ಲೇಟ್ ಬಗ್ಗೆ ಮಾಲೀಕರು ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಸಂಸದ ಪ್ರತಾಪ ಸಿಂಹ ವಿರುದ್ಧ ಕ್ರಮಕ್ಕೆ ದೂರು



ಮೈಸೂರು, ಅ.10- ಮಹಿಷ ದಸರಾ ಸಂಬಂಧ ಸಂಘರ್ಷಕ್ಕೆ ಆಹ್ವಾನಿಸುವಂತೆ ಹೇಳಿಕೆ ನೀಡಿರುವ ಸಂಸದ ಪ್ರತಾಪ್ ಸಿಂಹ ಅವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಬೇಕು ಎಂದು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರಿಗೆ ದೂರು ಸಲ್ಲಿಸಲಾಗಿದೆ. ಮಹಿಷ ದಸರಾ ಆಚರಣೆ ಸಂಬಂಧ ಬಹಿರಂಗವಾಗಿ ಬೆದರಿಕೆ ಹಾಕುವುದರ ಜೊತೆಗೆ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವ ಮೂಲಕ ಸಮಾಜದ ಶಾಂತಿ ಕದಡುತ್ತಿದ್ದಾರೆ. ಯಾವುದೇ ಹಬ್ಬ, ಆಚರಣೆಗಳನ್ನು ಸಂವಿಧಾನದ ಆಶಯದಂತೆ ನಡೆಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಶೋಷಿತ ಸಮುದಾಯದ ದೊರೆ ಮಹಿಷನ ಹೆಸರಿನಲ್ಲಿ ಮೆರವಣಿಗೆ ಮಾಡಿ, ಸ್ಮರಿಸಿಕೊಳ್ಳಲು ಅಡ್ಡಿ ಮಾಡಲಾಗುತ್ತಿದೆ. ಕೆಲವು ವರ್ಷಗಳಿಂದ ಮಹಿಷ ದಸರಾ ಬಗ್ಗೆ ಅಪಸ್ವರ ಎತ್ತುತ್ತಿದ್ದಾರೆ. ಅಸಂಬದ್ಧ ಹೇಳಿಕೆಗಳ ಮೂಲಕ ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ತರುತ್ತಿದ್ದಾರೆ. ಕೂಡಲೇ ಅವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ವಹಿಸಬೇಕು ಎಂದು ದಸಂಸ ಉಪ ವಿಭಾಗೀಯ ಸಂಚಾಲಕ ಪುಟ್ಟಮಾದಯ್ಯ, ಸಂಘಟನಾ ಸಂಚಾಲಕ ಕೆ.ಶಿವ ಕುಮಾರ್ ಹಾಗೂ ಸಂಚಾಲಕ ಪಿ.ರಾಜು ದೂರು ನೀಡಿದ್ದಾರೆ.


ಅಕ್ರಮ ಹಣ ವರ್ಗಾವಣೆ ಪ್ರಕರಣ

ಲಾವಾ MD, ಚೀನಾ ಪ್ರಜೆ ಸೇರಿ ನಾಲ್ವರನ್ನು ಬಂಧಿಸಿದ ಇಡಿ

ನವದೆಹಲಿ: ಚೀನಾದ ಸ್ಮಾರ್ಟ್‌ಫೋನ್ ತಯಾರಕ ವಿವೋ ವಿರುದ್ಧದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ, ಲಾವಾ ಇಂಟರ್‌ನ್ಯಾಶನಲ್ ಮೊಬೈಲ್ ಕಂಪನಿಯ ಎಂಡಿ ಮತ್ತು ಚೀನಾದ ಪ್ರಜೆ ಸೇರಿದಂತೆ ನಾಲ್ವರನ್ನು ಬಂಧಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಲಾವಾ ಇಂಟರ್‌ನ್ಯಾಶನಲ್ ಕಂಪನಿಯ ಎಂಡಿ ಹರಿ ಓಂ ರೈ, ಚೀನಾ ಪ್ರಜೆ ಗುವಾಂಗ್‌ವೆನ್ ಕ್ಯಾಂಗ್, ಚಾರ್ಟರ್ಡ್ ಅಕೌಂಟೆಂಟ್ ನಿತಿನ್ ಗಾರ್ಗ್ ಮತ್ತು ರಾಜನ್ ಮಲಿಕ್ ಅವರನ್ನು ಇಡಿ ಬಂಧಿಸಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಈ ನಾಲ್ವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ದೇಶಿ ಮೊಬೈಲ್ ತಯಾರಿಕಾ ಕಂಪನಿಯಾದ ಲಾವಾ ಇಂಟರ್‌ನ್ಯಾಶನಲ್, ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಶೇ.1-2ರಷ್ಟು ಪಾಲು ಹೊಂದಿರುವುದಾಗಿ ಹೇಳಿಕೊಂಡಿದೆ.

68 ಸಂಘಗಳಿಗೆ 3.53 ಕೋಟಿ ಸಾಲ ಮಂಜೂರು ಪತ್ರ ವಿತರಣೆ

ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಿ: ಸಚಿವ ಎನ್.ಚಲುವರಾಯಸ್ವಾಮಿ



ನಾಗಮಂಗಲ, ಅ.10– ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಮಂಗಳವಾರ ತಾಲೂಕಿನ ಬೆಳ್ಳೂರಿನ ಸರ್ಕಾರಿ ಪ್ರಾಥಮಿಕ ಶಾಲಾವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ 68 ಸ್ವಸಹಾಯ ಸಂಘಗಳಿಗೆ 3.53 ಕೋಟಿ ಬಡ್ಡಿ ರಹಿತ ಸಾಲ ಮಂಜೂರಾತಿ ಪತ್ರಗಳನ್ನು ವಿತರಿಸಿದರು.

ಬಳಿಕ ಮಾತನಾಡಿದ ಸಚಿವ ಎನ್.ಚಲುವರಾಯಸ್ವಾಮಿ, ಮಹಿಳೆಯರಿಗಾಗಿ ಬೆಳ್ಳೂರು ಕ್ರಾಸ್‌ನಲ್ಲಿ ಮೊದಲು ಗಾರ್ಮೆಂಟ್ಸ್ ಪ್ರಾರಂಭಿಸಲಾಗುವುದು. ನಂತರ ಮಂಡ್ಯ, ಹ್ಯಾಂಡ್ ಪೋಸ್ಟ್, ಕೊಪ್ಪದಲ್ಲೂ ಗಾರ್ಮೆಂಟ್ಸ್ ಫ್ಯಾಕ್ಟರಿ ಪ್ರಾರಂಭಿಸಲಾಗುವುದು ಎಂದರು.

ಸರ್ಕಾರ ಮಹಿಳೆಯರು ಸೇರಿದಂತೆ ಎಲ್ಲಾ ಬಡ ಹಾಗೂ ಹಿಂದುಳಿದ ವರ್ಗದವರನ್ನು ಆರ್ಥಿಕವಾಗಿ ಸದೃಢಗೊಳಿಸಲು ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಹಾಗೂ ಅನ್ನಭಾಗ್ಯ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಗೃಹಲಕ್ಷ್ಮೀ ಯೋಜನೆ ಈಗಾಗಲೇ ಜಾರಿಗೆ ಬಂದಿದ್ದು, ಇನ್ನೂ ಅನೇಕ ಮಹಿಳೆಯರು ನೋಂದಣಿ ಮಾಡಿಕೊಂಡಿಲ್ಲ. ಹೀಗಾಗಿ ಅವರ ಮನೆ ಬಾಗಿಲಿಗೆ ಹೋಗಿ ನೋಂದಣಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಮೊದಲು ಡಿಸಿಸಿ ಬ್ಯಾಂಕ್‌ನಿಂದ 2 ರಿಂದ 3 ಕೋಟಿ ಸಾಲ ನೀಡಲಾಗುತ್ತಿತ್ತು. ಇಂದು ವಿವಿಧ ಸಾಲ ಯೋಜನೆಗಳಡಿ 134 ಕೋಟಿ ಸಾಲ ವಿತರಿಸಲಾಗಿದೆ. ಈ ಪೈಕಿ 80 ರಿಂದ ಶೇ.90ರಷ್ಟು ಬಡ್ಡಿ ರಹಿತ ಸಾಲ ನೀಡಲಾಗಿದೆ. 5 ಲಕ್ಷ ಮೇಲ್ಪಟ್ಟು ಸಾಲ ಪಡೆದವರಿಗೆ ಮಾತ್ರ ಬಡ್ಡಿ ವಿಧಿಸಲಾಗುವುದು. ಮಹಿಳಾ ಸಂಘಗಳಿಗೆ 16 ಕೋಟಿ ಸಾಲ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿಸಿ ಮಹಿಳಾ ಸಂಘಗಳಿಗೆ 30 ಕೋಟಿವರೆಗೆ ಸಾಲ ನೀಡಿ ಎಂದರು.

ಸಚಿವ ಎನ್.ಚಲುವರಾಯಸ್ವಾಮಿ ಅವರ ಪತ್ನಿ ಧನಲಕ್ಷ್ಮಿ ಸಚಿವರೊಂದಿಗೆ ಸಾಲ ಮಂಜೂರಾತಿ ಚೆಕ್ ವಿತರಿಸಿದರು. ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ನಿರ್ದೇಶಕರಾದ ದಿನೇಶ್, ನರಸಿಂಹಮೂರ್ತಿ, ಅಶೋಕ್, ಚಂದ್ರಶೇಖರ್, ಡಿಸಿಸಿ ಬ್ಯಾಂಕ್‌ನ ಎಂ.ಡಿ. ವನಜಾಕ್ಷಿ, ಮುಖಂಡರಾದ ಯಾಸೀನ್, ಉಮ್ರಾ ಜಹಾನ್ ಉಪಸ್ಥಿತರಿದ್ದರು.

ಕಾವೇರಿಗಾಗಿ ರೈತ ಹಿತರಕ್ಷಣಾ ಸಮಿತಿ ರಸ್ತೆ ತಡೆ

ಮಂಡ್ಯ, ಅ.10– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸದ ಸರ್ಕಾರದ ಕ್ರಮ ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮುಖಂಡರು ಮಂಗಳವಾರ ನಗರದಲ್ಲಿ ರಸ್ತೆ ತಡೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ನಡೆಯುತ್ತಿರುವ ಧರಣಿ ಸ್ಥಳದಲ್ಲಿ ವಿವಿಧ ಸಂಘಟನೆಗಳ ಜೊತೆಗೂಡಿ ಸಮಿತಿ ಮುಖಂಡರು ಬೆಂಗಳೂರು– ಮೈಸೂರು ಹೆದ್ದಾರಿ ತಡೆದು ಕೇಂದ್ರ– ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಕಾವೇರಿ ಕಣಿವೆ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿತಗೊಂಡಿದ್ದರೂ, ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸಲಾಗುತ್ತಿದೆ. ರೈತರ ಜೊತೆ ಕಣ್ಣಾಮುಚ್ಚಾಲೆ ಆಡುತ್ತಿರುವ ಸರ್ಕಾರ ಮತ್ತೆ ಹೆಚ್ಚಿನ ನೀರನ್ನು ಕೆಆರ್‌ಎಸ್‌ನಿಂದ ಬಿಡುಗಡೆ ಮಾಡಿ ರೈತರಿಗೆ ದ್ರೋಹ ಬಗೆದಿದೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಇಷ್ಟು ದಿನವಾದರೂ ಪ್ರಧಾನಿಗಳು ಕನ್ನಡಿಗರ ಸಮಸ್ಯೆ ಬಗ್ಗೆ ಬಾಯಿ ತೆರೆದಿಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ 2 ರಾಜ್ಯಗಳ ನಡುವೆ ಉದ್ಭವಿಸಿರುವ ಸಮಸ್ಯೆ ಶಮನ ಮಾಡಲು ಮುಂದಾಗಿಲ್ಲ. ತಮಿಳುನಾಡಿಗೆ ಹರಿಸುತ್ತಿರುವ ನೀರು ಸ್ಥಗಿತಗೊಳಿಸಿ ಕುಡಿಯುವ ನೀರು ಸಂರಕ್ಷಣೆ ಮಾಡಿಕೊಳ್ಳಬೇಕು. ಕಾವೇರಿ ಸಂಕಷ್ಟ ನಿವಾರಿಸಲು ರಾಜ್ಯ ಸರ್ಕಾರ ಮುಂದಾಗಬೇಕು. ಪ್ರಧಾನಿ ಮೋದಿ ಮಧ್ಯ ಪ್ರವೇಶಿಸಿ ಪರಿಹಾರ ಸೂತ್ರ ರೂಪಿಸಬೇಕು ಎಂದು ಒತ್ತಾಯಿಸಿದರು. ಸಮಿತಿಯ ಸುನಂದಾ ಜಯರಾಂ, ಅಂಬುಜಮ್ಮ, ಕನ್ನಡಸೇನೆ ಮಂಜುನಾಥ್, ರೈತ ಸಂಘದ ಚಂದ್ರಶೇಖರ್, ದಸಂಸ ಕೃಷ್ಣ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.



ಸಂಘಟನೆಗಳ ಬೆಂಬಲ: ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ನಡೆಯುತ್ತಿರುವ ಧರಣಿಗೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿದವು.

ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟದ ಕಾರ್ಯಕರ್ತರು ಧರಣಿ ಬೆಂಬಲಿಸಿದರು. ಒಕ್ಕೂಟದ ಮುಖಂಡರಾದ ಲಕ್ಷ್ಮಣ್, ಮಹೇಶ್, ರಮೇಶ್, ಕೆ.ಸಿ.ಮಹೇಶ್ ಭಾಗವಹಿಸಿದ್ದರು. ಭಾರತೀಯ ಕಿಸಾನ್ ಸಂಘದ ಪ್ರಾಂತ ಸಂಘಟನೆ ಕಾರ್ಯಕರ್ತರು ಕಾವೇರಿ ಹೋರಾಟ ಬೆಂಬಲಿಸಿದರು. ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣಸ್ವಾಮಿ, ಹಾಡ್ಯ ರಮೇಶ್ ರಾಜು, ಶಿವಕುಮಾರ್ ಭಾಗವಹಿಸಿದ್ದರು. ಕದಂಬ ಸೈನ್ಯ ಕಾರ್ಯಕರ್ತರು ಕಾವೇರಿ ಉದ್ಯಾನವನದ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ಧರಣಿ ಸ್ಥಳಕ್ಕೆ ತೆರಳಿ ಹೋರಾಟ ಬೆಂಬಲಿಸಿದರು. ಸೈನ್ಯದ ರಾಜ್ಯಾಧ್ಯಕ್ಷ ಬೇಕರಿ ರಮೇಶ್, ನಾಗೇಶ್, ಡಾ.ದೇವರಾಜ್, ಎಸ್.ಶಿವಕುಮಾರ್ ಇತರರಿದ್ದರು.

ಭಾರತೀಯ ಮಜ್ದೂರ್ ಸಂಘದ ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ಘಟಕದ ಕಾರ್ಮಿಕರು, ರಾಮನಗರ ಜಿಲ್ಲೆಯ ಮೇಕೆದಾಟು ಹೋರಾಟ ಸಮಿತಿ ಮುಖಂಡರು ಕಾವೇರಿ ಹೋರಾಟ ಬೆಂಬಲಿಸಿದರು. ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖವಾಡ ಧರಿಸಿ ರಿಂಚು, ಕಟ್ಟರ್, ಪೈಪುಗಳನ್ನು ಹಿಡಿದು ಧರಣಿ ನಡೆಸಿ ತಮಿಳುನಾಡಿನ ವಾಟರ್‌ಮನ್‌ಗಳಂತೆ ವರ್ತಿಸಿ ರಾಜ್ಯದ ರೈತರ ಹಿತ ಕಾಪಾಡಲು ಮುಂದಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೌರಕಾರ್ಮಿಕರೊಂದಿಗೆ ಊಟ ಸವಿದ ನರೇಂದ್ರಸ್ವಾಮಿ

ಮಳವಳ್ಳಿ, ಅ.10– ಪಟ್ಟಣದ ರೈತ ಸಮುದಾಯ ಭವನದಲ್ಲಿ ಪುರಸಭೆ ವತಿಯಿಂದ ಮಂಗಳವಾರ ನಡೆದ ಪೌರಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಕಾರ್ಮಿಕರೊಂದಿಗೆ ಕುಳಿತು ಸಹಪಂಕ್ತಿ ಭೋಜನ ಮಾಡಿ ಗಮನ ಸೆಳೆದರು.



ಇದಕ್ಕೂ ಮುನ್ನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕರು, ಪೌರಕಾರ್ಮಿಕರಿಗೆ ಸರ್ಕಾರದಿಂದ ವಿಶೇಷ ಸೌಲಭ್ಯ ಕೊಡಿಸುವುದಾಗಿ ಭರವಸೆ ನೀಡಿದರು.

ಪೌರ ಕಾರ್ಮಿಕರೆಂದು ಕಡೆಗಣಿಸ ಬಾರದು. ಎಲ್ಲರನ್ನು ಸಮಾನವಾಗಿ ಕಾಣಬೇಕು. ನಿಮ್ಮನ್ನು ಅಗತ್ಯ ಕೆಲಸಗಳಿಗೆ ಮಾತ್ರ ಬಳಸಿಕೊಳ್ಳಬೇಕು. ಇಲ್ಲದಿದ್ದರೆ ಕಾನೂನು ರೀತಿ ಕ್ರಮಗೊಳ್ಳಬಹುದು ಎಂದರು. ಇದೇ ವೇಳೆ ಕ್ರೀಡಾ ಚಟುವಟಿಕೆಗಳಲ್ಲಿ ಗೆದ್ದ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜೊತೆಗೆ ಪೌರ ಕಾರ್ಮಿಕರಿಗೆ ಸುರಕ್ಷತಾ ಕಿಟ್ ನೀಡಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯಾಧಿಕಾರಿ ನಾಗರತ್ನ, ಮಾಜಿ ಪುರಸಭಾಧ್ಯಕ್ಷ ದೊಡ್ಡಯ್ಯ, ಪರಿಸರ ಇಂಜಿನಿಯರ್ ನಾಗೇಂದ್ರ, ರಾಜಶೇಖರ, ಕೃಷ್ಣ, ಅಯೂಬ್ ಪಾಷ, ವೆಂಕಟೇಶ್ ಸೇರಿದಂತೆ ಹಲವರಿದ್ದರು.

ಸಂವಿಧಾನ ಓದಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಿ

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಕರೆ

ಕೆ.ಆರ್.ಪೇಟೆ, ಅ.10– ಇತಿಹಾಸ ತಿಳಿಯದವರು ಚರಿತ್ರೆ ಸೃಷ್ಟಿಸಲಾರರು. ಅಂತೆಯೇ ಭಾರತದ ಸಂವಿಧಾನ ಓದಿ ಅರ್ಥ ಮಾಡಿಕೊಳ್ಳದವರು ಸಂವಿಧಾನದ ಆಶಯಗಳಿಗೆ ಪೂರಕವಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಸಂವಿಧಾನ ಓದಿ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ಕರೆ ನೀಡಿದರು.

ಪಟ್ಟಣದ ಗ್ರಾಮಭಾರತಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಲೋಕಾಯನ ಕಲ್ಚರಲ್ ಫೌಂಡೇಶನ್, ಉದಯ ರವಿ ಟ್ರಸ್ಟ್ ಹಾಗೂ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಓದು ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಭಾರತದ ಸಂವಿಧಾನ ಕುರಿತು ಉಪನ್ಯಾಸ ನೀಡಿ ಅವರು ಮಾತನಾಡಿದರು.

ವಿವಿಧತೆಯಲ್ಲಿ ಏಕತೆ ಹೊಂದಿರುವ ಭಾರತ ಸಂವಿಧಾನ ದೇಶದ ಸಮಗ್ರತೆ ಹಾಗೂ ಸಹಬಾಳ್ವೆಗೆ ಪೂರಕವಾಗಿದೆ. ನಮ್ಮ ನೆಲ, ಸಂಸ್ಕೃತಿ, ಪರಂಪರೆ ಹಾಗೂ ಇತಿಹಾಸ



ಅರಿಯದವರು ಇತಿಹಾಸ ಸೃಷ್ಟಿಸಲಾರರು. ಅದೇ ರೀತಿ ಭಾರತದ ಸಂವಿಧಾನ ಓದಿ ಜಾತಿ ಮತ ಪಂಥಗಳಿಂದ ಮುಕ್ತವಾದ ಸಮ ಸಮಾಜ ನಿರ್ಮಾಣಕ್ಕೆ ಮುಂದಾಗದವರು ಯಾವುದೇ ಚರಿತ್ರೆ ನಿರ್ಮಿಸಲು ಸಾಧ್ಯವಿಲ್ಲ. ಇಂದು ಸಂಸತ್ತಿನಲ್ಲಿ ಕೇವಲ ಭಾವನಾತ್ಮಕ ವಿಚಾರ ಚರ್ಚೆಯಾಗುತ್ತಿವೆಯೇ ಹೊರತು ನಮ್ಮ ಬದುಕನ್ನು ರೂಪಿಸುವ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳಿಸುವ ವಿಷಯಗಳ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ನಮ್ಮ ದೇಶದ ಸಂಸತ್ತನ್ನು ಖಾಸಗಿಯವರಿಗೆ ವಹಿಸುವ ಸಂದರ್ಭ ನಿರ್ಮಾಣವಾದರೆ ಆಶ್ಚರ್ಯ ಪಡಬೇಕಾಗಿಲ್ಲ. ನಮ್ಮ ನೆಲ, ಜಲ, ಭಾಷೆ, ಏಕತೆ ಹಾಗೂ ಸಮಗ್ರತೆಗೆ ಪೂರಕವಾದ ಸಂವಿಧಾನ ತಿದ್ದುಪಡಿ ಮಾಡುವುದಾಗಲಿ, ಬದಲಾಯಿಸುವುದಾಗಲಿ ಯಾರಿಂದಲೂ ಸಾಧ್ಯವಿಲ್ಲ. ಭಾರತದ ಸಂವಿಧಾನ ದೇಶದ ಅಖಂಡತೆ, ಸಮಗ್ರತೆ ಹಾಗೂ ಸಹಬಾಳ್ವೆಗೆ ಪೂರಕವಾಗಿದೆ. ಯುವಜನರು, ವಿದ್ಯಾರ್ಥಿಗಳು ಸಂವಿಧಾನವನ್ನು ಓದುವ, ಭಾರತೀಯತೆಯನ್ನು ಅರ್ಥ ಮಾಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಸಂವಿಧಾನದ ಆಶಯಗಳ ಈಡೇರಿಕೆಗಾಗಿ ನಾವೆಲ್ಲರೂ ಹೋರಾಟ ಮಾಡುವುದು ಅಗತ್ಯವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಇಂದಿಗೂ ಸಂವಿಧಾನದ ಆಶಯಗಳು ಸಂಪೂರ್ಣವಾಗಿ ಜಾರಿಯಾಗದಿರುವುದು ವಿಪರ್ಯಾಸ ಎಂದರು.

ಈ ವೇಳೆ ಅಕ್ಕಿಹೆಬ್ಬಾಳು ಹೋಬಳಿ ಸರ್ಕಾರಿ ಶಾಲೆಗಳು, ಪದವಿ ಪೂರ್ವ ಕಾಲೇಜುಗಳು, ಕೆ.ಆರ್.ಪೇಟೆ ಕೆಪಿಎಸ್ ಶಾಲೆ, ಗ್ರಾಮ ಭಾರತಿ ಶಿಕ್ಷಣ ಸಂಸ್ಥೆ, ಶೀಳನೆರೆ ಹಾಗೂ ವಿಠಲಾಪುರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಸಂವಿಧಾನ ಓದು ಪುಸ್ತಕ ನೀಡಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ ಲೋಕಾಯನ ಕಲ್ಚರಲ್ ಫೌಂಡೇಶನ್ ಸಂಚಾಲಕ ಶಶಿಧರ ಬಾರಿಘಾಟ್, ಉದಯರವಿ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ಸೋಮಶೇಖರ್, ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಮೈಸೂರಿನ ಎಸ್‌ಡಿಎಮ್ ಮಹಿಳಾ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಮಾರುತಿ ಪ್ರಸನ್ನ, ಗ್ರಾಮ ಭಾರತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್.ಸಿ.ಕಿರಣ್‌ಕುಮಾರ್, ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ವಾಸು, ರಾಜ್ಯ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ನಂದಿನಿ, ಕೆಪಿಎಸ್ ಸ್ಕೂಲ್ ಪ್ರಾಂಶುಪಾಲ ಡಿ.ಬಿ.ಸತ್ಯ, ಯುವ ಸಾಹಿತಿ ಮೊಹಮದ್ ಅಜರುದ್ದೀನ್ ಸೇರಿದಂತೆ ಇತರರಿದ್ದರು.

ಇಂದು ಸಾರ್ವಜನಿಕರ ಕುಂದು ಕೊರತೆ ಸಭೆ

ಮಂಡ್ಯ, ಅ.10– ಜಿಪಂ ವತಿಯಿಂದ ಅ.11ರಂದು ಬೆಳಗ್ಗೆ 11 ಗಂಟೆಗೆ ಶ್ರೀರಂಗಪಟ್ಟಣ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಪಟಅತಿ ಅಭಿವೃದ್ಧಿ ಅಧಿಕಾರಿನ್ನೊಳಗೊಂಡಂತೆ ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ಆಯ್ದ ಗ್ರಾಪಂಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿಕ್ಕತಮ್ಮೇಗೌಡ ನಿಧನ

ಪಾಂಡವಪುರ, ಅ.10– ಪಟ್ಟಣದ ಬೀರಶೆಟ್ಟಿಹಳ್ಳಿ ನಿವಾಸಿ, 2ನೇ ವಾರ್ಡ್ ಜೆಡಿಎಸ್ ಪುರಸಭೆ ಸದಸ್ಯ ಚಿಕ್ಕತಮ್ಮೇಗೌಡ (70) ಸೋಮವಾರ ರಾತ್ರಿ ನಿಧನರಾದರು.



ಮೃತರು ಪತ್ನಿ ಗೀತ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಿತು. ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಇನ್ನಿತರರು ಮೃತರ ಅಂತಿಮ ದರ್ಶನ ಪಡೆದರು.

ಒಂದನೇ ಪುಟದಿಂದ

ದಸರಾ ಆಚರಣೆಗೆ ಭರದ ಸಿದ್ಧತೆ: ಪ್ರಾಯೋಜಕತ್ವಕ್ಕೆ ಅಧಿಕ ಆದ್ಯತೆ

ಅಧ್ಯಕ್ಷತೆಯಲ್ಲಿ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ, ಕೇಂದ್ರ ಕೌಶಲ್ಯಾಭಿವೃದ್ಧಿ ಸಚಿವ ರಾಜೀವ್ ಚಂದ್ರಶೇಖರ್, ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಕೇಂದ್ರ ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ಎ.ನಾರಾಯಣ ಸ್ವಾಮಿ, ಕೇಂದ್ರ ರಾಸಾಯನಿಕ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರುವರು ಎಂದು ವಿವರ ನೀಡಿದರು.

ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿ ಮೆರವಣಿಗೆ ದಿನದಂದು ಮೈಸೂರು ಅರಮನೆಯ ಬಲರಾಮ ದ್ವಾರದಲ್ಲಿ ಅಕ್ಟೋಬರ್ 24 ರಂದು ಮಧ್ಯಾಹ್ನ 1.46 ರಿಂದ 2.08 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಸಿದ್ದರಾಮಯ್ಯ ನಂದಿ ಧ್ವಜ ಪೂಜೆ ಸಲ್ಲಿಸುವರು. ತರುವಾಯ ಅರಮನೆ ಆವರಣದಲ್ಲಿ ಸಂಜೆ 4.40 ರಿಂದ 5 ಗಂಟೆಯೊಳಗೆ ಸಲ್ಲುವ ಮೀನ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿಮನ್ಯು ಚಿನ್ನದ ಅಂಬಾರಿಯಲ್ಲಿ ಹೊತ್ತು ತರುವ ನಾಡ ದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಜಯದಶಮಿ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡುವರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಹಲವು ಗಣ್ಯರು ಈ ವೇಳೆ ಹಾಜರಿರುವರು ಎಂದು ಡಾ.ರಾಜೇಂದ್ರ ಮಾಹಿತಿ ನೀಡಿದರು. ದಸರಾ ಮಹೋತ್ಸವದ ಅಂತಿಮ ಘಟ್ಟವಾದ ಟಾರ್ಚ್ ಲೈಟ್ ಪರೇಡ್ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅಕ್ಟೋಬರ್ 24 ರಂದು ಸಂಜೆ 7 ಗಂಟೆಗೆ ನಡೆಯಲಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕವಾಯತು ವೀಕ್ಷಿಸಿ, ಗೌರವ ವಂದನೆ ಸ್ವೀಕರಿಸುವರು. ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಆ ವೇಳೆ ಉಪಸ್ಥಿತರಿರುವರು ಎಂದು ತಿಳಿಸಿದರು. ಅಕ್ಟೋಬರ್ 15 ರಂದು ದಸರಾ ಉದ್ಘಾಟನೆ ದಿನದಂದೇ ಚಲನಚಿತ್ರೋತ್ಸವ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ದಸರಾ ವಸ್ತು ಪ್ರದರ್ಶನ, ಯೋಗ ದಸರಾ, ಚಿತ್ರ ಶಿಲ್ಪ ಕಲಾ ಪ್ರದರ್ಶನ, ನವರಾತ್ರಿ ರಂಗೋತ್ಸವ ಹಾಗೂ ದೀಪಾಲಂಕಾರ ಕೂಡ ಉದ್ಘಾಟನೆಗೊಳ್ಳಲಿದೆ ಎಂದರು.

ಯುವ ಕವಿಗೋಷ್ಠಿ, ಉರ್ದು ಕವಿಗೋಷ್ಠಿ, ಪಾರಂಪರಿಕ ಸೈಕಲ್ ಸವಾರಿ, ಪಾರಂಪರಿಕ ಟಾಂಗಾ ಸವಾರಿ, ಪಾರಂಪರಿಕ ನಡಿಗೆ,ಯೋಗಾಸನ ಸ್ಪರ್ಧೆ, ರೈತ ದಸರಾ ಮೆರವಣಿಗೆ, ಯೋಗ ಚಾರಣ ಸೇರಿದಂತೆ ಹಲವು ಕಾರ್ಯಕ್ರಮಗಳು 9 ದಿನಗಳ ಕಾಲ ಬೆಳಿಗ್ಗೆಯಿಂದ ರಾತ್ರಿ ತನಕ ನಡೆಯಲಿದೆ ಎಂದು ಡಾ.ರಾಜೇಂದ್ರ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದಿದ್ದ ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಅದ್ದೂರಿ ದಸರಾ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ವಾಡಿಕೆಯಷ್ಟು ಮಳೆಯಾಗದೆ ಬರಗಾಲದ ಪರಿಸ್ಥಿತಿ ಎದುರಾಗಿರುವ ಹಿನ್ನೆಲೆ ಈ ಬಾರಿ ಅದ್ದೂರಿಯಲ್ಲದ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಣೆಗೆ ಸರ್ಕಾರ ತೀರ್ಮಾನ ಮಾಡಿದೆ. ಆದರೆ ಇದೇ ಮೊದಲ ಬಾರಿಗೆ ಹೆಚ್ಚಿನ ಭಾಗ ಖಾಸಗಿ ಪ್ರಾಯೋಜಕತ್ವದಲ್ಲಿ ದಸರಾ ನಡೆಸಲು ನಿರ್ಧಾರ ಮಾಡಲಾಗಿದೆ. ಆದರೆ ತಮ್ಮ ಕಂಪನಿಗಳ ಜಾಹಿರಾತಿಗೆ ಹೆಚ್ಚು ಪ್ರಚಾರ ಸಿಗಬೇಕು ಎಂದು ಪ್ರಾಯೋಜಕತ್ವ ಪಡೆಯುವವರು ಷರತ್ತು ವಿಧಿಸಿದ್ದಾರೆ. ಆದರೆ ಅವರು ಹೇಳಿದಂತೆ ಜಾಹಿರಾತಿಗೆ ಹೆಚ್ಚಿನ ಆದ್ಯತೆ ನೀಡಿದರೆ ದಸರಾ ತನ್ನ ಮಹತ್ವ ಕಳೆದುಕೊಳ್ಳುತ್ತದೆ ಎಂಬ ದೃಷ್ಟಿಯಿಂದ ಅವರ ಬೇಡಿಕೆ ಪರಿಗಣಿಸಿಲ್ಲ. ಆದರೂ ಸರ್ಕಾರದ ಶಿಷ್ಟಾಚಾರದಂತೆ ಇತಿಮಿತಿಯಲ್ಲಿ ಪ್ರಾಯೋಜಕತ್ವ ಕಂಪನಿಗಳ ಜಾಹಿರಾತಿಗೆ ಅವಕಾಶ ನೀಡಲಾಗುವುದು ಎಂದು ಡಾ.ರಾಜೇಂದ್ರ ಸ್ಪಷ್ಟಪಡಿಸಿದರು.

ಬರಗಾಲದ ಹಿನ್ನೆಲೆ ಸರಳ ದಸರಾ ಆಚರಣೆ ಮಾಡುತ್ತಿದ್ದಾರೆ ಎಂದು ಪ್ರಚಾರ ಮಾಡಿದರೆ ಆಕರ್ಷಣೆ ಇರುವುದಿಲ್ಲವೆಂದು ಪ್ರವಾಸಿಗರ ಸಂಖ್ಯೆ ಕಡಿಮೆ ಯಾಗುತ್ತದೆ. ಇದರಿಂದ ಮೈಸೂರಿನ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಅದ್ದೂರಿ ಅಲ್ಲದ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಣೆ ಮಾಡುತ್ತಿದ್ದೇವೆ ಎಂಬುವುದಕ್ಕೆ ಹೆಚ್ಚು ಒತ್ತು ನೀಡುತ್ತಿದ್ದೇವೆ. ದಸರಾ ವೇಳೆ ಹೊರ ರಾಜ್ಯ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಅಂತರಾಜ್ಯ ವಾಹನಗಳ ಪ್ರವೇಶಕ್ಕೆ ವಾಹನಗಳ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ರಾಜೇಂದ್ರ ತಿಳಿಸಿದರು.

ಅ.22, 23ರಂದು ಏರ್ ಶೋ

ಟಾರ್ಚ್ ಲೈಟ್ ಪರೇಡ್ ರಿಹರ್ಸಲ್ ಕೂಡ ಯಾವುದೇ ಪಾಸ್ ಇಲ್ಲದೆ ಉಚಿತವಾಗಿ ನೋಡಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ದಸರಾ ಸಂದರ್ಭದಲ್ಲಿ ಹೆಲಿ ರೈಡ್, ಪ್ಯಾರಾ ಮೋಟಾರಿಂಗ್ ಸೇರಿದಂತೆ ಇನ್ನು ಹಲವು ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು. ಗೋಲ್ಡನ್ ಪಾಸ್ ಪಡೆಯುವರಿಗೆ ಆಸನದ ವ್ಯವಸ್ಥೆ ಹೇಗಿರಬೇಕೆಂದು ಚರ್ಚೆ ನಂತರ ಮಾರಾಟಕ್ಕೆ ಬಿಡಲಾಗುವುದು ಎಂದು ಸ್ಪಷ್ಟಪಡಿಸಿದ ಡಾ.ರಾಜೇಂದ್ರ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರನ್ನು ಶಿಷ್ಟಾಚಾರದ ಪ್ರಕಾರ ನಾಳೆ, ನಾಡಿದ್ದು ಆಹ್ವಾನಿಸಲಾಗುವುದು ಎಂದರು. ಮೈಸೂರು ರಾಜವಂಶಸ್ಥರಿಗೆ ಎಷ್ಟು ಮೊತ್ತದ ಗೌರವ ಧನ ನೀಡಬೇಕು, ಜಿಲ್ಲಾಡಳಿತದ ವತಿಯಿಂದ ಅವರನ್ನು ಯಾವಾಗ ಆಹ್ವಾನಿಸಬೇಕು ಎಂಬ ಬಗ್ಗೆ ಇನ್ನು ತೀರ್ಮಾನ ಮಾಡಿಲ್ಲ ಎಂದರು.

ಅ.18ರಿಂದ ಯುವ ದಸರಾ

ಎಂದರು. ಅ.19ರಂದು ಪಾಲ್ಗುಣಿ ಗೌಡ, ಶಿಲ್ಪಾರಾವ್ ಹಾಗೂ ಸಂಚಿತ್ ಹೆಗಡೆ ಗಾನಸುಧೆ ಹರಿಸಲಿದ್ದಾರೆ. ಅ.20 ರಂದು ಕನ್ನಡ ರ್‍ಯಾಪರ್ ಅಲೋಕ್ ಮತ್ತು ತಂಡದಿಂದ ಆಲ್ ಓಕೆ ಸಂಗೀತ ಮತ್ತು ಸಲೀಂ ಸುಲೈಮಾನ್ ತಂಡದಿಂದ ಸಂಗೀತ ಕಾರ್ಯಕ್ರಮವಿರುತ್ತದೆ. ಇದಾದ ನಂತರ ಖ್ಯಾತ ಫ್ಯಾಷನ್ ಕಲಾವಿದ ಪಲಶ್ ಬಿದ್ದಪ್ಪ ಅವರಿಂದ ಫ್ಯಾಷನ್ ಶೋ ನಡೆಯಲಿದೆ ಎಂದು ಸೀಮಾ ಲಾಟ್ಕರ್ ಮಾಹಿತಿ ನೀಡಿದರು. ಅ.21ರಂದು ಬಾಲಿವುಡ್‌ನ ಮೋಹನ್ ಸಿಸ್ಟರ್ಸ್‌ರಿಂದ ಸಂಗೀತ ಹಾಗೂ ಬೆಲ್ಲಿ ದಯಾಳ್ ಅವರು ಸಂಗೀತದ ರಸದೌತಣ ಉಣಬಡಿಸಲಿದ್ದಾರೆ ಎಂದು ವಿವರ ನೀಡಿದರು. ಖ್ಯಾತ ಕಲಾವಿದರ ಹಲವು ಕಾರ್ಯಕ್ರಮಗಳ ಮಧ್ಯೆ ಸ್ಥಳೀಯ ಕಲಾವಿದರಿಗೂ ಅವಕಾಶ ನೀಡಲಾಗುವುದು ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಅಭಿಮನ್ಯು ಜೊತೆ ಸಾಗುವ ಸಿಬ್ಬಂದಿಗಳಿಗೆ ದರ್ಬಾರ್ ಡ್ರೆಸ್ ಮೆರಗು

ಕಾರ್ಯ ಕೈಗೊಳ್ಳಲಾಗಿದೆ ಎಂದು ಶೀಘ್ರದಲ್ಲೆ ಮಾಹಿತಿ ನೀಡಲಾಗುವುದು ಎಂದರು. ಅ.24ರಂದು ನಡೆಯುವ ಜಂಬೂ ಸವಾರಿ ಮೆರವಣಿಗೆ ಶಿಸ್ತುಬದ್ಧವಾಗಿ ಸಾಗಲು ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಯಾವುದೇ ಗದ್ದಲ, ಗೊಂದಲವಿಲ್ಲದೆ ಜಂಬೂ ಸವಾರಿ ಮೆರವಣಿಗೆ ಸಾಗುವಂತೆ ಎಲ್ಲಾ ರೀತಿಯ ಅಚ್ಚುಕಟ್ಟಾದ ವ್ಯವಸ್ಥೆ ರೂಪಿಸಲಾಗುತ್ತಿದೆ. ಈ ಬಾರಿ ಆಯಾ ಜಿಲ್ಲೆಯ ಸ್ತಬ್ಧ ಚಿತ್ರಗಳ ಜೊತೆಗೆ ಆಯಾಯ ಜಿಲ್ಲೆಯ ಜಾನಪದ ಕಲಾ ತಂಡಗಳು ಜೊತೆ ಜೊತೆಯಾಗಿ ಸಾಗಲಿವೆ ಎಂದು ರಮೇಶ್ ಬಾನೋತ್ ಹೇಳಿದರು. ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾಗಿಯಾಗಲು 300 ಕ್ಕೂ ಹೆಚ್ಚು ಕಲಾವಿದರು ಅರ್ಜಿ ಸಲ್ಲಿಸಿದ್ದಾರೆ. ಇದರಲ್ಲಿ ಅಂತಿಮವಾಗಿ ಕಲಾವಿದರನ್ನು ಆಯ್ಕೆ ಮಾಡುವ ಪ್ರಕ್ರಿಯೆಗಳು ನಡೆಯುತ್ತಿದೆ ಎಂದು ರಮೇಶ್ ಬಾನೋತ್ ಮಾಹಿತಿ ನೀಡಿದರು. ಅಕ್ಟೋಬರ್ 23 ರಂದು ಮೈಸೂರಿನ ಬನ್ನಿ ಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಟಾರ್ಚ್‌ಲೈಟ್ ಪರೇಡ್ ತಾಲೀಮು ನಡೆಯಲಿದೆ. ಅಕ್ಟೋಬರ್ 24ರಂದು ಟಾರ್ಚ್‌ಲೈಟ್ ಪರೇಡ್ ನಡೆಯಲಿದ್ದು, ಇದಕ್ಕೂ ಕೂಡ ಎಲ್ಲಾ ರೀತಿಯ ಸಿದ್ಧತೆ ಮಾಡಲಾಗಿದೆ ಎಂದು ರಮೇಶ್ ಬಾನೋತ್ ತಿಳಿಸಿದರು.

ಪುಷ್ಪದಲ್ಲಿ ರೂಪುಗೊಳ್ಳಲಿದೆ ಚಂದ್ರಯಾನ–3 ಕಲಾಕೃತಿ

ಪರಿಕಲ್ಪನೆಯ ಕಲಾಕೃತಿ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು. 40 ಚದರಡಿ ಚಂದ್ರನ ಅಂಗಳದಲ್ಲಿ 24 ಅಡಿ ಎತ್ತರದ ರಾಕೆಟ್, 15 ಅಡಿ ಎತ್ತರದ ವಿಕ್ರಮ ಲ್ಯಾಂಡರ್ ಹಾಗೂ ಪ್ರಗ್ಯಾನ್ ರೋವರ್ ಇರುವ ಕಲಾಕೃತಿಯನ್ನು ಗುಲಾಬಿ ಹೂವಿನಿಂದ ಮಾಡಲಾಗುವುದು. ಇದಕ್ಕೆ ಸುಮಾರು ಎರಡು ಲಕ್ಷ ಗುಲಾಬಿ ಹೂವು ಬಳಕೆ ಮಾಡಲಾಗುವುದು. ಇದು ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನದ ಪ್ರಮುಖ ಆಕರ್ಷಣೆ ಎಂದು ಗಾಯತ್ರಿ ತಿಳಿಸಿದರು. ತೋಟಗಾರಿಕೆ ಇಲಾಖೆಯಿಂದ 60 ಸಾವಿರ ಹೂವಿನ ಗಿಡಗಳನ್ನು ಬೆಳೆಸಿದ್ದು, ಇಡೀ ಕುಪ್ಪಣ್ಣ ಪಾರ್ಕ್ ಅನ್ನು ಹೂವುಗಳಿಂದ ಅಲಂಕರಿಸಲಾಗುವುದು. ಚಾಮುಂಡೇಶ್ವರಿ ತಾಯಿ ಹಾಗೂ ದೇವಸ್ಥಾನದ ಗೋಪುರ, ಸುವರ್ಣ ಕರ್ನಾಟಕ–ಕರ್ನಾಟಕದ ಶ್ರೀಮಂತ ಪರಂಪರೆ, ಕ್ರೀಡೆಗಳ ಥೀಮ್, ಕ್ರಿಕೆಟ್ ಹೂವಿನ ಕಲಾಕೃತಿ, ಅಂಬಾರಿ ಹೂವಿನ ಕಲಾಕೃತಿ, ಕಾಫಿ–ಕಪ್ ಸೇರಿದಂತೆ ಹಲವು ಪುಷ್ಪ ಕಲಾಕೃತಿಗಳಿಗೆ ವಿನೂತನ ರೂಪ ನೀಡಲಾಗುವುದು ಎಂದು ಗಾಯತ್ರಿ ವಿವರಿಸಿದರು.

ರಾಜ್ಯ ಸರ್ಕಾರ ಸೆ.16 ರಂದು ನಡೆದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸುವ ಜೊತೆಗೆ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಈ ಹಿನ್ನೆಲೆ ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ ಸಂವಿಧಾನ ಪೀಠಿಕೆ ಪುಷ್ಪ ಕಲಾಕೃತಿ ನಿರ್ಮಾಣ ಮಾಡಲಾಗುವುದು. ಅಲ್ಲಿ ಸಾರ್ವಜನಿಕರಿಗೆ ಸೆಲ್ಫಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಈ ಮೂಲಕ ಸಂವಿಧಾನ ಪೀಠಿಕೆಯ ಓದು ಅಭಿಯಾನದ ಮಹತ್ವ ಸಾರಲಾಗುವುದು ಎಂದು ಹೇಳಿದರು. ಮೈಸೂರಿನ ಹೃದಯ ಭಾಗದಲ್ಲಿರುವ 16 ಎಕರೆ ಪ್ರದೇಶದ ನಿಶಾದ್ ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನದ ವೇಳೆ ವಿಶಿಷ್ಟ ರೀತಿಯ ಅಲಂಕಾರಿಕ ಹೂವಿನ ಗಿಡಗಳನ್ನು ಪ್ರದರ್ಶಿಸಲಾಗುವುದು. ವಿವಿಧ ಕುಂಬಳ ಜಾತಿ ತರಕಾರಿಗಳಿಂದ ಮನೆಯ ಮಾದರಿ ಯನ್ನು ನಿರ್ಮಾಣ ಮಾಡಲಾಗುವುದು ಎಂದು ಗಾಯತ್ರಿ ವಿವರಿಸಿದರು.

ಮದುವೆ, ರಾಜಕೀಯ ಇನ್ನಿತರೆ ಕಾರ್ಯಕ್ರಮಗಳಲ್ಲಿ

ಪಟಾಕಿಗೆ ನಿಷೇಧ

ದೀಪಾವಳಿಯಲ್ಲಿ ಹಸಿರು ಪಟಾಕಿಗೆ ಮಾತ್ರ ಅವಕಾಶ

ಬೆಂಗಳೂರು, ಅ.10(ಕೆಎಂಶಿ)– ಸಾಂಪ್ರದಾಯಿಕ ದೀಪಾವಳಿ ಹಬ್ಬದಲ್ಲಿ ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ಆದರೆ, ಮದುವೆ, ರಾಜಕೀಯ ಹಾಗೂ ಇತರೆ ಸಮಾರಂಭಗಳಲ್ಲಿ ಪಟಾಕಿ ಸಿಡಿಸುವುದಕ್ಕೆ ನಿಷೇಧ ಹೇರಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಸೂಚನೆ ಉಲ್ಲಂಘಿಸಿದರೆ ಕಾರ್ಯಕ್ರಮ ಆಯೋಜಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪ್ರತಿಯೊಂದು ಪಟಾಕಿ ಲೈಸೆನ್ಸ್ ದಾರರ ಸ್ಥಳ ಪರಿಶೀಲನೆ ನಡೆಸಿ, ಲೋಪಗಳಿದ್ದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಕಟ್ಟಾದೇಶ ಮಾಡಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಅತ್ತಿಬೆಲೆ ಪಟಾಕಿ ದುರಂತದ ಹಿನ್ನೆಲೆಯಲ್ಲಿ ನಡೆಸಿದ ಉನ್ನತ ಮಟ್ಟದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ಮುಂದೆ ಪ್ರತಿ ವರ್ಷ ಪರವಾನಗಿ ನವೀಕರಣವಾಗಬೇಕು. ನಿಗದಿ ಮಾನದಂಡ ಪೂರೈಸದಿದ್ದರೂ, ತಪಾಸಣಾ ವರದಿ ನೀಡಿ ಶಿಫಾರಸು ಮಾಡಿದ ತಹಶೀಲ್ದಾರ್, ಇನ್ಸ್‌ಪೆಕ್ಟರ್ ಮತ್ತು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಅಮಾನತಿಗೆ ನಿರ್ದೇಶನ ನೀಡಿದರು. ಎಕ್ಸ್‌ಪ್ಲೋಸಿವ್ ಆಕ್ಟ್ ನಲ್ಲಿ ಲೈಸೆನ್ಸ್ ಕೊಡುವಾಗ ನೀವು ಎಚ್ಚರಿಕೆ ವಹಿಸಬೇಕು. ಹದಿನಾಲ್ಕು ಜನರ ಜೀವಕ್ಕೆ ಯಾರು ಹೊಣೆಗಾರರು. ಕಾಯ್ದೆ ಓದಿದ್ದೀರಾ? ಅವರು ಅದರಲ್ಲಿರುವ ಎಲ್ಲ ಮಾನದಂಡಗಳನ್ನು ಪೂರೈಸಿದ್ದಾರೆಯೇ ಎಂದು ನೋಡಬೇಕು.

ತಳಹಂತದ ಅಧಿಕಾರಿಗಳು ಸಲ್ಲಿಸಿದ ವರದಿ ಸರಿಯಿದೆಯೇ ಎಂಬುದನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಬೇಕು ಎಂದು ತಾಕೀತು ಮಾಡಿದರು.

ಅಲ್ಲಿರುವ ಎಲ್ಲ ಮಳಿಗೆಗಳ ಸುರಕ್ಷತೆಯನ್ನೂ ತಪಾಸಣೆ ಮಾಡಲು ಸೂಚಿಸಿದರು. ಇನ್ನು ಮುಂದೆ ಲೈಸೆನ್ಸ್ ನೀಡುವಾಗ ಜಿಲ್ಲಾಧಿಕಾರಿಗಳು, ಪೊಲೀಸ್ ಅಧೀಕ್ಷಕರು ಹಾಗೂ ಅಗ್ನಿಶಾಮಕ ದಳದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು ಎಂದು ಸೂಚನೆ ನೀಡಿದರು.

ತಪಾಸಣಾ ವರದಿ ಸರಿಯಾಗಿದೆಯೇ ಎಂದು ಪರಿಶೀಲಿಸಿಯೇ ಲೈಸೆನ್ಸ್ ನೀಡುವ ಬಗ್ಗೆ ತೀರ್ಮಾನಿಸಬೇಕು. ಪಟಾಕಿ ದುರಂತ ಪ್ರಕರಣದಲ್ಲಿ ಗೋಡೌನ್‌ಗೆ ಅನುಮತಿ ನೀಡಿರಲಿಲ್ಲ. ಮಾರಾಟಕ್ಕೆ ಮಾತ್ರ ಅನುಮತಿ ನೀಡಲಾಗಿತ್ತು ಎಂದು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು ಎಂದರು.

ರಾಜ್ಯದೆಲ್ಲೆಡೆ, ತಪಾಸಣೆ ನಡೆಸಿ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಎಲ್ಲ ಗೋಡೌನ್‌ಗಳು ಹಾಗೂ ಮಳಿಗೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವುಗಳ ಪರವಾನಗಿ ರದ್ದುಪಡಿಸಬೇಕು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಅಧಿಕಾರಿಗಳು ಎಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಅತ್ತಿಬೆಲೆ ಪಟಾಕಿ ದುರಂತ ನಡೆದ ಮಳಿಗೆಗೆ ಸಂಬಂಧಿಸಿದಂತೆ ಸರ್ಕಲ್ ಇನ್ಸ್‌ಪೆಕ್ಟರ್ ವರದಿ, ಛಾಯಾಚಿತ್ರಗಳೊಂದಿಗೆ ಚಕ್ಕುಬಂದಿ ನಿಗದಿ ಮಾಡಿ, ವರದಿ ಸಲ್ಲಿಸಿದ್ದಾರೆ. ಪೊಲೀಸ್ ಅಧೀಕ್ಷಕರು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ. ಅದರ ಆಧಾರದಲ್ಲಿ ಜಿಲ್ಲಾಧಿಕಾರಿಗಳು ಪರವಾನಗಿ ನೀಡಿದ್ದಾರೆ. ಜಿಲ್ಲಾಧಿಕಾರಿಗಳು ತಹಸೀಲ್ದಾರರಿಂದಲೂ ವರದಿ ಪಡೆದಿದ್ದಾರೆ ಎಂದು ಅಧಿಕಾರಿಗಳು ವಿವರಿಸಿದರು. ಬೆಂಗಳೂರು ನಗರದಲ್ಲಿ ಎರಡು ರೀತಿಯ ಪರವಾನಗಿಗಳಿವೆ. ಶಾಶ್ವತ ಮಳಿಗೆಗಳು ಹಾಗೂ ತಾತ್ಕಾಲಿಕ ಮಳಿಗೆಗಳಿಗೆ ಪರವಾನಗಿ ನೀಡಲಾಗುತ್ತಿದೆ.

ಬಿಬಿಎಂಪಿ, ವಿದ್ಯುತ್, ಅಗ್ನಿಶಾಮಕ, ಟ್ರಾಫಿಕ್ ಮತ್ತು ಕಾನೂನು–ಸುವ್ಯವಸ್ಥೆ ವಿಭಾಗದ ನಿರಾಕ್ಷೇಪಣಾ ಪತ್ರ ಪಡೆದು ಲೈಸೆನ್ಸ್ ನೀಡಲಾಗುತ್ತದೆ. ಇದು ಐದು ವರ್ಷಕ್ಕೊಮ್ಮೆ ನೀಡಲಾಗುತ್ತಿದೆ.

ನವೀಕರಣಕ್ಕೆ ನಿರಾಕ್ಷೇಪಣಾ ಪತ್ರದ ಅಗತ್ಯವಿರುವುದಿಲ್ಲ. ಸ್ಫೋಟಕಗಳ ನಿಯಂತ್ರಕರು ನವೀಕರಿಸುತ್ತಾರೆ. ಈ ಕುರಿತು ನಿಯಮಾವಳಿಗಳ ತಿದ್ದುಪಡಿ ಅಗತ್ಯವಿದೆ. ಈ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವುದರ ಜೊತೆಗೆ ರಾಜ್ಯಕ್ಕೆ ಅನ್ವಯಿಸುವ ನಿಯಮ ಬದಲಿಸಲು ಸೂಚಿಸಿದರು. ಅತ್ತಿಬೆಲೆ– ಹೊಸೂರು ಗಡಿ ಭಾಗದಲ್ಲಿ ಬರುವ ಪಟಾಕಿಗಳ ಕುರಿತು ತೀವ್ರ ನಿಗಾ ವಹಿಸಬೇಕು. ಈ ಕುರಿತು ನ್ಯಾಯಾಲಯಗಳ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳುವುದರ ಜೊತೆಗೆ ಹಸಿರು ಪಟಾಕಿಗಳ ಮಾರಾಟವನ್ನೂ ಖಾತರಿಪಡಿಸಿಕೊಳ್ಳಲು ಸೂಚಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ರಾಜಕೀಯ ಸಮಾವೇಶಗಳು ಹಾಗೂ ವಿವಾಹ ಸಮಾರಂಭಗಳಲ್ಲಿ ಸುರಕ್ಷತೆಯ ದೃಷ್ಟಿಯಿಂದ ಪಟಾಕಿ ಬಳಕೆಯನ್ನು ನಿಷೇಧಿಸುವಂತೆ ಸಲಹೆ ನೀಡಿದರು.



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪಿ. ದೇವರಾಜು ಅವರನ್ನು ಅವರ ಅಭಿಮಾನಿಗಳು ಹಾಗೂ ಹಿತೈಷಿಗಳು ಅಭಿನಂದಿಸಿ, ಶುಭಾಶಯ ಕೋರಿದರು. ಚಿತ್ರದಲ್ಲಿ ಶ್ರೀರಾಂಪುರ ಗ್ರಾಪಂ ಮಾಜಿ ಸದಸ್ಯ ಬಂಗಾರಪ್ಪ ಇತರರನ್ನು ಕಾಣಬಹುದು.

ತರಗತಿ ಬಹಿಷ್ಕರಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಉಪನ್ಯಾಸಕರ, ಮೂಲ ಸೌಲಭ್ಯ, ಕಂಪ್ಯೂಟರ್ ಕೊರತೆ ನೀಗಿಸಲು ಆಗ್ರಹ



ಮಡಿಕೇರಿ, ಅ.10– ವಿವಿಧ ಬೇಡಿಕೆಗಳನ್ನು ತಕ್ಷಣವೇ ಈಡೇರಿಸಬೇಕೆಂದು ಆಗ್ರಹಿಸಿ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪದವಿ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಕಾಲೇಜು ತರಗತಿಗಳನ್ನು ಬಹಿಷ್ಕರಿಸಿ ಕಾಲೇಜು ಆವರಣದಲ್ಲಿ ಧರಣಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ನ್ಯಾಯ ಒದಗಿಸುವಂತೆ ಕಾಲೇಜು ಆಡಳಿತ ಮತ್ತು ಮಂಗಳೂರು ವಿಶ್ವ ವಿದ್ಯಾನಿಲಯವನ್ನು ಒತ್ತಾಯಿಸಿದರು.

ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ, ಮೂಲಸೌಲಭ್ಯ, ಕಂಪ್ಯೂಟರ್ ಕೊರತೆ ಸೇರಿದಂತೆ ಹಲವಷ್ಟು ಸಮಸ್ಯೆಗಳಿವೆ. ಈ ಕುರಿತು ಕಾಲೇಜು ಆಡಳಿತ ಮಂಡಳಿ ಗಮನಕ್ಕೂ ತಂದರೂ ಯಾವುದೇ ರೀತಿಯ ಸ್ಪಂದನೆ ದೊರಕಿಲ್ಲ ಎಂದು ಪ್ರತಿಭಟನಾನಿರತ ವಿದ್ಯಾರ್ಥಿಗಳು ತೀವ್ರ ಅಸಮಾಧಾನ ಹೊರಗೆಡವಿದರು.

ಸಮಸ್ಯೆ ಪರಿಹಾರದ ಭರವಸೆ: ವಿದ್ಯಾರ್ಥಿಗಳ ಪ್ರತಿಭಟನೆಯ ಮಾಹಿತಿ ಅರಿತು ಸ್ಥಳಕ್ಕಾಗಮಿಸಿದ ಕೊಡಗು ವಿಶ್ವ ವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ. ಸೀನಪ್ಪ ಮತ್ತು ಕುಲಪತಿ ಅಶೋಕ್ ಸಂಗಪ್ಪ ಅವರುಗಳು ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು. ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಸಹಿತ ಹತ್ತಾರು ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ಪ್ರಾಂಶುಪಾಲರ ಗಮನ ಸೆಳೆದರು. ಸಮಸ್ಯೆ ಪರಿಹಾರವಾಗದಿದ್ದಲ್ಲಿ ಕಾಲೇಜು ತರಗತಿಗಳನ್ನು ಅನಿರ್ದಿಷ್ಟಾವಧಿಗೆ ಬಹಿಷ್ಕರಿಸುವುದಾಗಿ ವಿದ್ಯಾರ್ಥಿಗಳು ಒಕ್ಕೊರಲಿನಿಂದ ಘೋಷಿಸಿದರು.

ಈ ಸಂದರ್ಭ ಮಾತನಾಡಿದ ಕುಲಪತಿ ಅಶೋಕ್ ಸಂಗಪ್ಪ, ಈಗಾಗಲೇ ಈ ಕುರಿತು ಸರಕಾರಕ್ಕೆ ಪತ್ರ ಬರೆಯಲಾಗಿದೆ. ಕಂಪ್ಯೂಟರ್ ಕೊರತೆ ಕುರಿತು ವಿವಿಧ ಇನ್ಫೋಸಿಸ್, ವಿಪ್ರೋ ಸೇರಿದಂತೆ ಕೆಲವು ಸಂಸ್ಥೆಗಳ ಜೊತೆ ಸಂಪರ್ಕ ಮಾಡಲಾಗಿದೆ. ಉಪನ್ಯಾಸಕರ ನೇಮಕಕ್ಕೂ ಪ್ರಯತ್ನ ಸಾಗಿದೆ. ಕೆಲವು ವಿಚಾರಗಳನ್ನು ಮಂಗಳೂರು ವಿ.ವಿ. ಮಾಡಬೇಕಾಗುತ್ತದೆ ಎಂದು ಸಮಜಾಯಿಷಿ ನೀಡಿದರು. ಹಂತ ಹಂತವಾಗಿ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ ಎಂದು ಇದೇ ಸಂದರ್ಭ ಭರವಸೆ ನೀಡಿದರಲ್ಲದೇ ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿದರು. ಈ ಸಂದರ್ಭ ಮಾತನಾಡಿದ ವಿದ್ಯಾರ್ಥಿಗಳು, ತಾವು ನೀಡಿದ ಭರವಸೆಗಳನ್ನು ಲಿಖಿತವಾಗಿ ನೀಡುವಂತೆ ಪಟ್ಟು ಹಿಡಿದ ಘಟನೆಯೂ ನಡೆಯಿತು. ವಿವಿಧ ವಿಭಾಗಗಳ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಸ್ರೇಲ್–ಪ್ಯಾಲಸ್ತೀನ್ ಯುದ್ಧ: ಕೊಡಗಿನವರು ಸಿಲುಕಿದ್ದರೆ ಮಾಹಿತಿ ನೀಡಿ

ಮಡಿಕೇರಿ, ಅ.10– ಇಸ್ರೇಲ್ ಹಾಗೂ ಪ್ಯಾಲಸ್ತೀನ್ ದೇಶಗಳ ನಡುವೆ ಯುದ್ಧ ನಡೆಯುತ್ತಿದ್ದು, ಅಪಾರ ಪ್ರಮಾಣದ ಸಾವು–ನೋವು ಸಂಭವಿಸಿದೆ. ಕರ್ನಾಟಕದ ಹಲವರು ಸಿಲುಕಿಕೊಂಡಿರುವ ಮಾಹಿತಿಯಿದೆ. ಕೊಡಗು ಜಿಲ್ಲೆಯ ಯಾರಾದರೂ ಇಸ್ರೇಲ್ ದೇಶದಲ್ಲಿ ಸಿಲುಕಿದ್ದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ನೀಡುವಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಟಣೆಯಲ್ಲಿ ತಿಳಿಸಿದೆ. ಜಿಲ್ಲಾ ವಿಪತ್ತು ನಿಯಂತ್ರಣಾ ಕೊಠಡಿ–08272–221077, 1077, 08272–221099 ವಾಟ್ಸಾಪ್ ಸಂಖ್ಯೆ–8550001077 ಅನ್ನು ಸಂಪರ್ಕಿಸಲು ಜಿಲ್ಲಾಡಳಿತ ಕೋರಿದೆ.

ಸ್ಥಾಯಿ ಸಮಿತಿ ಅಧ್ಯಕ್ಷನಿಂದ ಕರ್ತವ್ಯಕ್ಕೆ ಅಡ್ಡಿ

ಸೇವೆ ಸ್ಥಗಿತಗೊಳಿಸಿ ನಗರಸಭೆ ಅಧಿಕಾರಿಗಳು, ಸಿಬ್ಬಂದಿ ಪ್ರತಿಭಟನೆ

ಕೆಲಸವಾಗದೆ ಸಾರ್ವಜನಿಕರ ಪರದಾಟ



ಮಡಿಕೇರಿ, ಅ.10– ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ.ಸತೀಶ್ ಅವರು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ನಗರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸೇವೆಯನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದರು.

ನಗರಸಭಾ ಪೌರಾಯುಕ್ತರ ಮೇಲೆ ಹಲ್ಲೆಗೆ ಯತ್ನ ಆರೋಪದ ಹಿನ್ನೆಲೆಯಲ್ಲಿ ಪೌರ ಸೇವಾ ನೌಕರರ ಸೇವಾ ಸಂಘದಿಂದ ಕರ್ತವ್ಯಕ್ಕೆ ಹಾಜರಾಗದೆ ನಗರಸಭಾ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸರ್ಕಾರದ ಅಧೀನ ಕಾರ್ಯದರ್ಶಿಗಳೊಂದಿಗೆ ಸೋಮವಾರ ವಿಡಿಯೋ ಕಾನ್ಫರೆನ್ಸ್ ನಡೆಸುತ್ತಿದ್ದ ಸಂದರ್ಭ ಕಚೇರಿ ಪ್ರವೇಶಿಸಿದ ಸತೀಶ್ ಅವರು, ಫಾರಂ ನಂಬರ್ 3 ವಿಚಾರದಲ್ಲಿ ಪೌರಾಯುಕ್ತರೊಂದಿಗೆ ಕಲಹ ನಡೆಸಿದ್ದಾರೆ. ಅಲ್ಲದೆ ಅಗೌರವದಿಂದ ನಡೆದುಕೊಂಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸಿಬ್ಬಂದಿಗಳಿಗೆ ಮಾನಸಿಕ ಕಿರುಕುಳ ನೀಡಬಾರದು, ಶಿಸ್ತನ್ನು ಪಾಲಿಸಬೇಕು, ಸೌಜನ್ಯದಿಂದ ವರ್ತಿಸಬೇಕು, ಸತೀಶ್ ಅವರ ನಗರಸಭಾ ಸದಸ್ಯತ್ವ ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ನಗರಸಭಾ ಸಿಬ್ಬಂದಿಗಳು ಪ್ರತಿಭಟನೆಯಲ್ಲಿ ನಿರತರಾದ ಕಾರಣ ಕಚೇರಿಗೆ ಬಂದ ಸಾರ್ವಜನಿಕರು ಅರ್ಜಿಗಳು ವಿಲೇವಾರಿಯಾಗದೆ ಮರಳಿದರು. ನಿತ್ಯ ನಗರಸಭೆಯಲ್ಲಿ ಒಂದಲ್ಲ ಒಂದು ಗೊಂದಲ, ಶೀತಲ ಸಮರಗಳು ನಡೆಯುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಮನೆಗಳ್ಳನ ಬಂಧನ; ಬೆಳ್ಳಿ, ನಗದು ವಶ

ಮಡಿಕೇರಿ, ಅ.10– ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ



ಆರೋಪಿಯನ್ನು ಕುಶಾಲನಗರ ಪಟ್ಟಣ ಪೊಲೀಸರು ಬಂಧಿಸಿದ್ದಾರೆ. ಕುಶಾಲನಗರ ನಿವಾಸಿ ಯತೀಶ್ ಎ.ಎಂ.(19) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಆತನ ಬಳಿಯಿಂದ 600 ಗ್ರಾಂ ಬೆಳ್ಳಿ ಹಾಗೂ 40 ಸಾವಿರ ರೂ. ನಗದನ್ನು ವಶಕ್ಕೆ ಪಡೆಯಲಾಗಿದೆ.

ಘಟನೆ ಹಿನ್ನೆಲೆ: ಕುಶಾಲನಗರದ ಕೋಣ ಮಾರಿಯಮ್ಮ ದೇವಸ್ಥಾನ ಬಳಿಯ ನಿವಾಸಿ ಸತೀಶ್ ಕುಮಾರ್ ಅವರ ಮನೆಯಲ್ಲಿ ಜೂನ್ 24ರಂದು ನಗದು ಹಾಗೂ ಬೆಳ್ಳಿ ಸಾಮಗ್ರಿ ಕಳುವಾಗಿತ್ತು. ಈ ಹಿನ್ನೆಲೆಯಲ್ಲಿ ಸತೀಶ್ ಕುಮಾರ್ ಅವರು ಕುಶಾಲನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣದ ತನಿಖೆ ನಡೆಸಿದ ಪೊಲೀಸರು ಅ.9ರಂದು ಆರೋಪಿ ಎ.ಎಂ. ಯತೀಶ್ ಎಂಬಾತನನ್ನು ಬಂಧಿಸಿ ಕಾನೂನು ಕ್ರಮ ಕೈಗೊಂಡಿದ್ದಾರೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಕುಶಾಲನಗರ ವೃತ್ತ ನಿರೀಕ್ಷಕ ಕೆ.ರಾಜೇಶ್, ಠಾಣಾಧಿಕಾರಿಗಳಾದ ಹೆಚ್.ವಿ. ಚಂದ್ರಶೇಖರ್, ಹೆಚ್.ಟಿ. ಗೀತಾ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಪೊನ್ನಂಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಬೆಳ್ಳಿಹಬ್ಬದ ಸಂಭ್ರಮ

ನ.3ರಿಂದ ರಾಜ್ಯಮಟ್ಟದ 'ಕೃಷಿಯಂತ್ರ ಮೇಳ–2023



ಮಡಿಕೇರಿ, ಅ.10– ಪೊನ್ನಂಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಸಿಐಟಿ) ತಾಂತ್ರಿಕ ಶಿಕ್ಷಣ ಸಂಸ್ಥೆ ಮುಂದಿನ ಸಾಲಿಗೆ 25 ವರ್ಷಗಳ ಸಾರ್ಥಕ ಸೇವೆಯನ್ನು ಪೂರ್ಣಗೊಳಿಸಿ 'ಬೆಳ್ಳಿ ಮಹೋತ್ಸವ'ಕ್ಕೆ ಪಾದಾರ್ಪಣೆ ಮಾಡಲಿದ್ದು, ಈ ಹಿನ್ನೆಲೆ ನ.3ರಿಂದ 5ರವರೆಗೆ ಸಿಐಟಿಯಲ್ಲಿ ರಾಜ್ಯ ಮಟ್ಟದ 'ಕೃಷಿ ಯಂತ್ರ ಮೇಳ–2023' ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಕೊಡವ ಎಜುಕೇಷನ್ ಸೊಸೈಟಿಯ ಅಧ್ಯಕ್ಷ ಡಾ. ಮುಕ್ಕಾಟಿರ ಕಾರ್ಯಪ್ಪ ಮಾತನಾಡಿ, 1999ರಲ್ಲಿ ಆರಂಭಗೊಂಡ ಸಿಐಟಿ ಸಂಸ್ಥೆ ಸ್ಥಳೀಯ ವಿದ್ಯಾರ್ಥಿಗಳಿಗೆ ಸುಲಭವಾಗಿ ತಾಂತ್ರಿಕ ಶಿಕ್ಷಣ ದೊರಕುವಂತೆ ಮಾಡಿದೆ. ಸಂಸ್ಥೆಯ ಬೆಳ್ಳಿ ಮಹೋತ್ಸವದ ಹಿನ್ನೆಲೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದಾಗಿ ತಿಳಿಸಿದರು.

ಕಾಲೇಜಿನ ಉಪನ್ಯಾಸಕರಾದ ಡಾ. ರಾಮಕೃಷ್ಣ ಮಾತನಾಡಿ, 'ಕೃಷಿ ದೇವೋಭವ' ಘೋಷವಾಕ್ಯದಡಿ ಕೃಷಿ ಮೇಳ ಆಯೋಜಿತವಾಗುತ್ತಿದೆ. ಮೇಳದಲ್ಲಿ ಕೃಷಿಗೆ ಪೂರಕವಾದ ಯಂತ್ರಗಳು, ಪಂಪ್‌ಸೆಟ್ ಹೀಗೆ ಕೃಷಿಗೆ ಉಪಯುಕ್ತವಾದ ಯಂತ್ರೋಪಕರಣಗಳ 150 ರಿಂದ 200 ಮಳಿಗೆಗಳು ಪ್ರದರ್ಶಿಸಲ್ಪಡಲಿದೆ. ಈ ಮೇಳದ ಮೂಲಕ ಜಿಲ್ಲೆಯ ಕೃಷಿಕ ಬಂಧುಗಳು ಮಾರುಕಟ್ಟೆ ದರಕ್ಕಿಂತಲೂ ಕಡಿಮೆಯ ದರಕ್ಕೆ ಯಂತ್ರೋಪಕರಣಗಳನ್ನು ಪಡೆಯಬಹುದಾಗಿದೆಯೆಂದು ತಿಳಿಸಿದರು.

ಕೃಷಿ ಮೇಳದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಿದ ಅವರು, ಮೇಳದಲ್ಲಿ ಕೃಷಿಗೆ ಪೂರಕವಾದ ಚರ್ಚಾ ಗೋಷ್ಠಿಗಳು, ಸಾಧಕರಿಗೆ ಸನ್ಮಾನ ಕಾರ್ಯಕ್ರಮಗಳು ನಡೆಯಲಿದೆ. ಇದರೊಂದಿಗೆ ರೈತರ ಅನುಕೂಲಕ್ಕಾಗಿ 'ಉಚಿತ ಮಣ್ಣು ಪರೀಕ್ಷೆಗೆ ಅವಕಾಶವನ್ನು ಕಲ್ಪಿಸಲಾಗಿದೆ. ಯಾಂತ್ರೀಕೃತ ಭತ್ತದ ಕೃಷಿಯ ಬಗ್ಗೆಯೂ ಮೇಳದಲ್ಲಿ ವಿಶೇಷ ಮಾಹಿತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಸಮಾರೋಪ ನ.5ರಂದು ನಡೆಯಲಿದ್ದು, ಬಳಿಕ ಸಂಜೆ ಖ್ಯಾತನಾಮರಾದ ಪಂಡಿತ್ ಗೋಡ್ಕಿಂಡಿ ಅವರ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸರಕಾರಿ ಬಸ್ ವ್ಯವಸ್ಥೆ: ಕೃಷಿ ಮೇಳದಲ್ಲಿ ಜಿಲ್ಲೆಯ ಕೃಷಿಕರು, ಸಾರ್ವಜನಿಕರು ಪಾಲ್ಗೊಳ್ಳುವುದಕ್ಕೆ ಅನುಕೂಲವಾಗುವಂತೆ ಶಾಸಕ ಪೊನ್ನಣ್ಣ ಅವರ ಸಹಕಾರದಿಂದ ವಿರಾಜಪೇಟೆ, ಮಡಿಕೇರಿ, ಕುಶಾಲನಗರ, ಸೋಮವಾರಪೇಟೆ, ಮೈಸೂರು, ಬೆಂಗಳೂರು ಮಾರ್ಗದ ಕೆಲ ಸರ್ಕಾರಿ ಬಸ್‌ಗಳನ್ನು ಪೊನ್ನಂಪೇಟೆ ಸಿಐಟಿ ಕಾಲೇಜು ಮಾರ್ಗವಾಗಿ ತೆರಳುವ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಬೆಳ್ಳಿಹಬ್ಬದ ಸಂಚಾಲಕ ಕಾಲೇಜಿನ ಪ್ರೊಫೆಸರ್ ಡಾ. ರೋಹಿಣಿ ತಿಮ್ಮಯ್ಯ ಮಾತನಾಡಿ, ನ.2ರಂದು ಸಿಐಟಿ ಕಾಲೇಜಿನಲ್ಲಿ ಬೆಳ್ಳಿಹಬ್ಬದ 'ಲೋಗೋ' ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಇದಕ್ಕೂ ಮುನ್ನ ಗೋಣಿಕೊಪ್ಪಲು ಕಾವೇರಿ ಕಾಲೇಜಿನಿಂದ ಸಿಐಟಿ ಕಾಲೇಜಿನವರೆಗೆ 10 ಕಿ.ಮೀ. ಮ್ಯಾರಥಾನ್, ವಿರಾಜಪೇಟೆಯಿಂದ ಕಾಲೇಜಿನವರೆಗೆ ಬೈಕ್ ಜಾಥಾವನ್ನು ಆಯೋಜಿಸಲಾಗಿದೆ ಎಂದು ವಿವರಿಸಿದರು. ನವೆಂಬರ್‌ನಲ್ಲಿ ಪ್ರಾಜೆಕ್ಟ್ ಎಕ್ಸಿಬಿಷನ್, ಮುಂದಿನ ಜನವರಿಯಲ್ಲಿ ಅಂತಾರಾಷ್ಟ್ರೀಯ ತಾಂತ್ರಿಕ ಸಮಾವೇಶ, ಏಪ್ರಿಲ್‌ನಲ್ಲಿ ಟೆಕ್ ಫೆಸ್ಟ್, ಕಲ್ಚರಲ್ ಫೆಸ್ಟ್, ಸ್ಪೋರ್ಟ್ಸ್ ಫೆಸ್ಟ್‌ನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸುಂಟಿಕೊಪ್ಪದಲ್ಲಿ ಭಾರಿ ಮಳೆ

ತಗ್ಗುಪ್ರದೇಶದ ಅಂಗಡಿ–ಮುಂಗಟ್ಟುಗಳಿಗೆ ನುಗ್ಗಿದ ನೀರು, ಸಾರ್ವಜನಿಕರ ಪರದಾಟ

ಸುಂಟಿಕೊಪ್ಪ, ಅ.10– ಸುಂಟಿಕೊಪ್ಪ ಪಟ್ಟಣದಲ್ಲಿ ಗುಡುಗು ಸಿಡಿಲಿನ ಸಹಿತ ಭಾರಿ ಮಳೆ ಸುರಿದಿದ್ದು ವಿವಿಧ ಬಡಾವಣೆಗಳಿಂದ ಹರಿದು ಬಂದ ನೀರು ಜನತಾ ಕಾಲೋನಿ ತಗ್ಗು ಪ್ರದೇಶಗಳಿಗೆ ನುಗ್ಗಿದೆ. ಮಂಗಳವಾರ ಸಂಜೆ ಸುರಿದ ಭಾರಿ ಮಳೆಗೆ ಅತೂರು ತೋಟ, ಪಾರ್ವತಿ ಬಡಾವಣೆಗಳಿಂದ ಮಾರುಕಟ್ಟೆಗಳ ಮೂಲಕ ಹರಿದ ಕೆಸರು ಮಿಶ್ರಿತ ನೀರು ಜನತಾ ಕಾಲೋನಿಯ ತಗ್ಗು ಪ್ರದೇಶದ ಅಂಗಡಿ ಮುಂಗಟ್ಟುಗಳಿಗೆ ನುಗ್ಗಿದೆ. ರಸ್ತೆಯಲ್ಲಿ ನೀರು ಹರಿದ ಪರಿಣಾಮ ಆಟೋ ಚಾಲಕರು, ವಾಹನಗಳು ಹಾಗೂ ಶಾಲಾ ಮಕ್ಕಳು ಸಾರ್ವಜನಿಕರು ಸಂಚರಿಸಲು ಪರದಾಡುವಂತಾಯಿತು. ಅತಿಯಾಗಿ ಸುರಿದ ಮಳೆಯಿಂದಾಗಿ ಗುಡ್ಡಪ್ಪ ರೈ ಬಡಾವಣೆ, ಜನತಾ ಕಾಲೋನಿ, ಪಂಪ್‌ಹೌಸ್ ಬಡಾವಣೆ ಕೆಲವು ಮನೆಗಳಿಗೆ ನೀರು ನುಗ್ಗಿದ್ದು ಈ ಭಾಗದ ಜನರು ತೊಂದರೆ ಅನುಭವಿಸುವಂತಾಯಿತು. ಮಾರುಕಟ್ಟೆ ರಸ್ತೆ, ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲವು ಪ್ರಮುಖ ಸ್ಥಳಗಳಲ್ಲಿ ಚರಂಡಿ ನಿರ್ಮಾಣವಾಗದೆ ಇರುವುದೇ ಮಳೆ ರಸ್ತೆಯಲ್ಲಿ ನೀರು ಹರಿದು ಮನೆಗಳಿಗೆ ನುಗ್ಗಲು ಕಾರಣವಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಮಾರುಕಟ್ಟೆ ರಸ್ತೆಯಲ್ಲಿ ಗ್ರಾಪಂ ವೈಜ್ಞಾನಿಕ ರೀತಿಯಲ್ಲಿ ಚರಂಡಿ ನಿರ್ಮಿಸದೆ ಕಡೆಗಣಿಸಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಮುಡಿಸೇವೆಗೆ ಹೆಚ್ಚುವರಿ ಹಣ ಪಡೆಯದಂತೆ ಎಚ್ಚರಿಕೆ

ಬೆಟ್ಟದ ಮುಡಿಕಟ್ಟೆಗೆ ಕಾರ್ಯದರ್ಶಿ ಸರಸ್ವತಿ ಭೇಟಿ

ಹನೂರು, ಅ.10– ಜಿಲ್ಲೆಯ ಹನೂರು ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಮುಡಿಕಟ್ಟೆಗೆ ಮಂಗಳವಾರ ಮಹದೇಶ್ವರಸ್ವಾಮಿ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ದಿಢೀರ್ ಭೇಟಿ ನೀಡಿದರು.

ಬೆಟ್ಟದಲ್ಲಿ ಮುಡಿಸೇವೆ ಮಾಡುವ ಭಕ್ತರಿಗೆ 50ರೂ. ಟಿಕೆಟ್ ನಿಗದಿ ಮಾಡಲಾಗಿದೆ. ಆದರೆ, ಭಕ್ತರಿಂದ ಮುಡಿ ಮಾಡುವ ನೌಕರರು ಹೆಚ್ಚುವರಿಯಾಗಿ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಭಕ್ತಾದಿಗಳು ಸಾಮಾಜಿಕ ಜಾಲತಾಣ ಹಾಗೂ ದೂರವಾಣಿ ಮುಖಾಂತರ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಅವರಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಸರಸ್ವತಿ ಅವರು ಭೇಟಿ ನೀಡಿ, ಪರಿಶೀಲಿಸಿದರು. ಮಂಗಳವಾರ ಬೆಳಗ್ಗೆ ಮುಡಿ ಕೌಂಟರ್ ಹಾಗೂ ಮುಡಿ ಸೇವೆಯ ಸ್ಥಳಕ್ಕೆ ಭೇಟಿ ನೀಡಿ ಭಕ್ತರಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಮುಡಿಸೇವೆ ಮಾಡುತ್ತಿದ್ದ 25 ನೌಕರರಿಗೆ ಕಾರ್ಯದರ್ಶಿ ಅವರು ಖಡಕ್ ಎಚ್ಚರಿಕೆ ನೀಡಿ ಭಕ್ತರಿಂದ ಹಣ ವಸೂಲಿ ಮಾಡಬಾರದು. ನಿಮಗೆ ಯಾವುದಾದರೂ ತೊಂದರೆಗಳಿದ್ದರೆ ನನ್ನ ಬಳಿ ಹೇಳಿ, ನಾನು ಸಮಸ್ಯೆ ಬಗೆಹರಿಸುತ್ತೇನೆ. ಅದನ್ನು ಹೊರತುಪಡಿಸಿ ಭಕ್ತರಿಂದ ಹಣ ವಸೂಲಿ ಮಾಡುವುದು ಸರಿಯಲ್ಲ ಎಂದರು.

ಈ ಸಂದರ್ಭದಲ್ಲಿ ಮುಡಿಸೇವೆ ಮಾಡುವ ಸಿಬ್ಬಂದಿ ಮಾತನಾಡಿ, ಟೆಂಡರ್ ಪಡೆದಿರುವವರು ಒಂದು ಮುಡಿಗೆ 25ರೂ. ಮಾತ್ರ ನೀಡುತ್ತಿದ್ದಾರೆ. ಇದು ನಮಗೆ ಸಾಕಾಗುವುದಿಲ್ಲ. ಭಕ್ತರು ಪ್ರೀತಿ ಪಟ್ಟು ಕೊಟ್ಟರೆ ಪಡೆಯುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಈ ವೇಳೆ ನಿಮಗೆ ತೊಂದರೆಯಾಗಿದ್ದಲ್ಲಿ ಮುಡಿ ಟಿಕೆಟ್ ಅನ್ನು 75 ರೂ. ಮಾಡೋಣ, ನಿಮ್ಮ ಸಮಸ್ಯೆಯನ್ನು ಬಗೆಹರಿಸೋಣ ಎಂದು ಭರವಸೆ ನೀಡಿ ತೆರಳಿದ್ದರು. ಇದಾದ ಒಂದು ಗಂಟೆಯ ನಂತರ ತಮ್ಮ ಕಚೇರಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮೆರಾದಲ್ಲಿ ಪರಿಶೀಲನೆ ನಡೆಸಿದಾಗ ಮತ್ತೆ ಭಕ್ತರಿಂದ ಹಣ ವಸೂಲಿ ಮಾಡುತ್ತಿರುವುದು ಕಂಡು ಬಂದಿದೆ. ಈ ವೇಳೆ ಮತ್ತೆ ಭೇಟಿ ನೀಡಿದ ಕಾರ್ಯದರ್ಶಿ ಅವರು ಮುಡಿಕಟ್ಟೆಯ ಉಸ್ತುವಾರಿ ಎಸ್. ನಾಗರಾಜು ಹಾಗೂ ಸಿಬ್ಬಂದಿಗಳಿಗೆ ನಿಮಗೆ ಇದು ಕೊನೆಯ ಎಚ್ಚರಿಕೆ ಎಂದು ಸೂಚನೆ ನೀಡಿದ್ದಾರೆ.

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ

ರೈತರ ಅಹೋರಾತ್ರಿ ಪ್ರತಿಭಟನೆ



ಚಾಮರಾಜನಗರ, ಅ.10– ಕೃಷಿ ಜಮೀನುಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಆಗ್ರಹಿಸಿ ನಗರದಲ್ಲಿ ಮಂಗಳವಾರದಿಂದ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಅಹೋರಾತ್ರಿ ಪ್ರತಿಭಟನೆ ಆರಂಭಗೊಂಡಿದೆ.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿ ಹಳ್ಳಿಕೆರೆಹುಂಡಿ ಭಾಗ್ಯರಾಜು ನೇತೃತ್ವದಲ್ಲಿ ಸಮಾವೇಶಗೊಂಡ ಸಂಘದ ಪದಾಧಿಕಾರಿಗಳು ಹಾಗೂ ರೈತರು, ಕೈಯಲ್ಲಿ ಕಬ್ಬಿನ ಜಲ್ಲೆಗಳನ್ನು ಹಿಡಿದುಕೊಂಡು ಸೆಸ್ಕಾಂ ಅಧಿಕಾರಿಗಳು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಸಮರ್ಪಕ ವಿದ್ಯುತ್ ನೀಡುವಂತೆ ಆಗ್ರಹಿಸಿದರು.

ನಂತರ ಅಲ್ಲಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿದರು. ಬಳಿಕ, ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿ ಸಾಗಿ ಸೆಸ್ಕ್ ಕಚೇರಿಯ ಮುಂದೆ ಜಮಾಯಿಸಿ, ಕಚೇರಿಗೆ ಬೀಗ ಜಡಿದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಜಿಲ್ಲೆಯಲ್ಲಿ ಸುಮಾರು 75,000ಕ್ಕೂ ಹೆಚ್ಚು ಕೃಷಿ ಪಂಪ್‌ಸೆಟ್‌ಗಳಿದ್ದು, ಈ ಪಂಪ್‌ಸೆಟ್‌ಗಳಲ್ಲಿ ಸುಮಾರು 2ಲಕ್ಷಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬಾಳೆ, ತೆಂಗು, ಕಬ್ಬು, ತರಕಾರಿ, ಅರಿಶಿನ, ಜೋಳ, ರಾಗಿ ಸೇರಿದಂತೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದು ಇವುಗಳಿಗೆ ಕೃಷಿ ಪಂಪ್‌ಸೆಟ್‌ಗಳಿಂದ ನೀರಿನ ಲಭ್ಯತೆಯಿದೆ. ಆದರೆ ಪ್ರಸ್ತುತ ವಿದ್ಯುತ್ ಅನ್ನು ಏಕಾಏಕಿ ಕಡಿತ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ತನ್ನ ಪ್ರಣಾಳಿಕೆಯಲ್ಲಿ 10 ಗಂಟೆ ಕೃಷಿಗೆ ವಿದ್ಯುತ್ ನೀಡುತ್ತೇವೆಂದು ಭರವಸೆ ನೀಡಿ, ಈಗ ವಚನ ಭ್ರಷ್ಟವಾಗಿದೆ. ಆದ್ದರಿಂದ ಸರ್ಕಾರ ಸಮರ್ಪಕವಾಗಿ ಕೃಷಿಗೆ ವಿದ್ಯುತ್ ನೀಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ಲಿಂಕ್ ಮಾಡುವುದನ್ನು ಕೈಬಿಡಬೇಕು. ನೂತನ ಕೃಷಿ ಪಂಪ್‌ಸೆಟ್ ನೋಂದಾವಣಿಗೆ ಅವಕಾಶ ನೀಡಬೇಕು ಹಾಗೂ ಬೆಂಕಿಗೆ ಆಹುತಿಯಾದಂತಹ ಕಬ್ಬಿಗೆ ವೈಜ್ಞಾನಿಕ ಬೆಳೆ ನಷ್ಟವನ್ನು ತಕ್ಷಣ ನೀಡಬೇಕು ಎಂದು ಆಗ್ರಹಿಸಿದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶ್ರೀಧರ್ ಅವರು, ರೈತರ ಪ್ರತಿಭಟನೆ ಮತ್ತು ಬೇಡಿಕೆಗಳ ಬಗ್ಗೆ ಸರಿಯಾಗಿ ಸ್ಪಂದಿಸದೆ, ಸಮರ್ಪಕ ಉತ್ತರ ನೀಡದಿದ್ದರಿಂದ ಆಕ್ರೋಶಗೊಂಡ ರೈತರು ಪ್ರತಿಭಟನೆಯನ್ನು ಅಹೋರಾತ್ರಿ ಮುಂದುವರೆಸಿದರು.

ಪ್ರತಿಭಟನೆಯಲ್ಲಿ ಸಂಘದ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜ್, ಕಾರ್ಯಾಧ್ಯಕ್ಷ ಮಲಿಯೂರು ಹರ್ಷ, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಮಲೆಯೂರು ಗ್ರಾಮ ಘಟಕದ ಅಧ್ಯಕ್ಷ ಬಸವರಾಜಪ್ಪ, ಮಹೇಂದ್ರ, ಸತೀಶ್, ಕಾಳಪ್ಪ, ಮಹೇಶ್, ಕೃಷ್ಣ, ಮಹದೇವಸ್ವಾಮಿ, ಗುರುಮಲ್ಲಪ್ಪ, ಗುರುಸಿದ್ದಪ್ಪ, ಮಾದೇಶ್, ಸಿದ್ದೇಶ್, ಸಿದ್ದಲಿಂಗಪ್ಪ, ಮಹೇಶ್, ಮಲ್ಲಪ್ಪ, ಪ್ರಕಾಶ್, ನಾಗಣ್ಣ, ರಾಜಣ್ಣ, ಸುಧಾಕರ, ರಘು, ನಾಗು, ಸುರೇಶ್, ಶೇಖರ್, ಹರಳಿಕಟ್ಟೆ ಪ್ರಭುಸ್ವಾಮಿ, ಮಹದೇವಪ್ಪ, ಗುರುಸಿದ್ದಪ್ಪ, ಸಿದ್ದಲಿಂಗಪ್ಪ, ರಾಮಸಮುದ್ರ ಮಂಜು ಸೇರಿದಂತೆ ರೈತ ಮುಖಂಡರು ಹಾಜರಿದ್ದರು.

ಮುಂದುವರಿದ ಪ್ರತಿಭಟನೆ: ಚಾಮರಾಜನಗರದ ಸೆಸ್ಕ್ ಕಚೇರಿಯ ಮುಂದೆ ಒಂದು ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆಯನ್ನು ಮುಂದುವರಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಸೆಸ್ಕ್ ಇಇ ವಸಂತಕುಮಾರ್ ಪ್ರತಿಭಟನಾಕಾರರ ಮನವೊಲಿಸಲು ಮುಂದಾದರು. ಆದರೆ, ಸ್ಥಳಕ್ಕೆ ಸೆಸ್ಕ್ ಎಂಡಿ ಬರಬೇಕು ಎಂದು ಪಟ್ಟು ಹಿಡಿದರು. ಸಂಜೆ 7 ಗಂಟೆಯಾದರೂ ರೈತರು ಜಿಲ್ಲಾಡಳಿತ ಭವನದಲ್ಲಿ ಪ್ರತಿಭಟನೆಯನ್ನು ಮುಂದುವರಿಸಿದ್ದರು.

ಜಾನುವಾರುಗಳನ್ನು ಸಾಗಿಸುತ್ತಿದ್ದ ವಾಹನ ಪಲ್ಟಿ: ಒಂದು ಹಸು ಸಾವು

ಅಕ್ರಮವಾಗಿ ತಮಿಳುನಾಡಿನ ಕಸಾಯಿಖಾನೆಗೆ ರವಾನಿಸುತ್ತಿದ್ದ ವಾಹನ

ಚಾಮರಾಜನಗರ, ಅ.10– ತಾಲೂಕಿನ ಪಣ್ಯದಹುಂಡಿ ಬಳಿ ಜಾನುವಾರುಗಳನ್ನು ಸಾಗಿಸುತ್ತಿದ್ದ ವಾಹನ ಪಲ್ಟಿಯಾದ ಪರಿಣಾಮ ಸ್ಥಳದಲ್ಲಿಯೇ ಒಂದು ಹಸು ಮೃತಪಟ್ಟಿರುವ ಘಟನೆ ಮಂಗಳವಾರ ಮುಂಜಾನೆ ನಡೆದಿದೆ.

ಕವಲಂದೆ ಕಡೆಯಿಂದ ತಮಿಳುನಾಡಿಗೆ ಹೋಗುತ್ತಿದ್ದಾಗ ಪಣ್ಯದಹುಂಡಿ ಗ್ರಾಮದಿಂದ ಹೆಗ್ಗೋಠಾರ ಗ್ರಾಮಕ್ಕೆ ತೆರಳುವ ತಿರುವೊಂದರಲ್ಲಿ ಅಶೋಕ್ ಲೈಲ್ಯಾಂಡ್ (ಕೆಎ20ಎಬಿ0750) ಮಿನಿ ಲಾರಿಯು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ವಾಹನದಲ್ಲಿದ್ದ 9 ಹಸುಗಳು, 2 ಎಮ್ಮೆಗಳ ಪೈಕಿ ಒಂದು ಹಸು ಸ್ಥಳದಲ್ಲಿಯೇ ಮೃತಪಟ್ಟರೆ ಉಳಿದ ಜಾನುವಾರುಗಳಿಗೆ ಸಣ್ಣ ಪುಟ್ಟ ಗಾಯಗಳಾಗಿದೆ. ವಾಹನ ಪಲ್ಟಿಯಾಗುತ್ತಿದ್ದಂತೆಯೇ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು ಸ್ಥಳಕ್ಕಾಗಮಿಸಿದ ಪೊಲೀಸರು ಹಾಗೂ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಜಾನುವಾರುಗಳನ್ನು ರಕ್ಷಣೆ ಮಾಡಿದ್ದಾರೆ. ಮೃತಪಟ್ಟ ಹಸುವನ್ನು ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಸಂಸ್ಕಾರ ಮಾಡಲಾಯಿತು. ಉಳಿದ ಜಾನುವಾರುಗಳನ್ನು ಕನಕಗಿರಿಯಲ್ಲಿರುವ ಪಿಂಜಾರಾಪೋಲ್‌ಗೆ ಬಿಡಲಾಯಿತು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಾಹನದ ಚಾಲಕ, ಮಾಲೀಕ ಹಾಗೂ ಜಾನುವಾರುಗಳ ಮಾಲೀಕನ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು, ವಾಹನವನ್ನು ವಶಕ್ಕೆ ಪಡೆದುಕೊಂಡಿರುವ ಪೊಲೀಸರು ಆರೋಪಿಗಳ ಸೆರೆಗೆ ಬಲೆ ಬೀಸಿದ್ದಾರೆ.

> **6** ಹುಣಸೂರು ಕಡೆಯಿಂದ ತಮಿಳುನಾಡಿನ ಕಸಾಯಿಖಾನೆಗೆ ಸಾಗಿಸಲು ಜಾನುವಾರುಗಳನ್ನು ತುಂಬಿಕೊಂಡು ಬರುತ್ತಿದ್ದ ಖಚಿತ ಮಾಹಿತಿಯನ್ನು ಆಧರಿಸಿ ನಮ್ಮ ಸಿಬ್ಬಂದಿಗಳನ್ನು ಗಸ್ತಿಗೆ ಕಳುಹಿಸಲಾಗಿತ್ತು. ಈ ವೇಳೆ ಕವಲಂದೆ ಕಡೆಯಿಂದ ಅವರು ನಮ್ಮ ಪೊಲೀಸರನ್ನು ನೋಡಿ ಭಯಗೊಂಡು ವಾಹನವನ್ನು ಹೆಗ್ಗೋಠಾರ ಕಡೆಗೆ ತಿರುಗಿಸಿದ್ದಾರೆ. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಗಿದೆ.
> - **ಚಿಕ್ಕರಾಜಶೆಟ್ಟಿ,** ಪೊಲೀಸ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆ

ಗ್ರಾಪಂ ವ್ಯಾಪ್ತಿಯಲ್ಲಿ ಮದ್ಯದಂಗಡಿಗೆ ಅನುಮತಿ ವಿರೋಧಿಸಿ

ಬಿಜೆಪಿ ಮಹಿಳಾ ಮೋರ್ಚಾದಿಂದ ಅಣಕು ಶವಯಾತ್ರೆ ಪ್ರತಿಭಟನೆ



ಚಾಮರಾಜನಗರ, ಅ.10– ರಾಜ್ಯ ಕಾಂಗ್ರೆಸ್ ಸರ್ಕಾರ ಗ್ರಾಮ ಪಂಚಾಯಿತಿಗಳಲ್ಲಿ ನೂತನ ಮದ್ಯದಂಗಡಿ ಆದೇಶ ನೀಡಿರುವುದನ್ನು ಖಂಡಿಸಿ ನಗರದಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದ ಕಾರ್ಯಕರ್ತರು, ರಾಜ್ಯ ಸರ್ಕಾರದ ಅಣಕು ಶವಯಾತ್ರೆ ನಡೆಸಿದರು.

ನಗರದ ಸಂತೇಮರಹಳ್ಳಿ ವೃತ್ತ ದಲ್ಲಿ ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷೆ ಕಮಲಮ್ಮ, ಜಿಲ್ಲಾಧ್ಯಕ್ಷ ನಾರಾಯಣ್ ಪ್ರಸಾದ್, ಮಾಜಿ ಶಾಸಕರಾದ ಎಸ್. ಬಾಲರಾಜು, ಎನ್. ಮಹೇಶ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಸರ್ಕಾರದ ಅಣಕು ಶವಯಾತ್ರೆ ಆರಂಭಿಸಿ ಸಂತೇಮರಹಳ್ಳಿ ರಸ್ತೆಯಲ್ಲಿರುವ ರೇಷ್ಮೆ ಕಾರ್ಖಾನೆ ಸಮೀಪದಲ್ಲಿರುವ ಮೈದಾನದಲ್ಲಿ ಅಂತ್ಯಗೊಳಿಸಿ, ಸಾರಾಯಿ ಪೌಚ್‌ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ನಾಗಶ್ರೀಪ್ರತಾಪ್ ಮಾತನಾಡಿ, ಜನರ ಹಿತ, ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾದ ರಾಜ್ಯ ಕಾಂಗ್ರೆಸ್ ಸರ್ಕಾರ ನೂತನ ಮದ್ಯಂಗಡಿಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ತೆರೆಯಲು ಆದೇಶ ನೀಡುವ ಮೂಲಕ ಜನತೆಗೆ ತೊಂದರೆ ಉಂಟು ಮಾಡಲು ಹಾಗೂ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಕೆಲಸಕ್ಕೆ ಮುಂದಾಗಿದೆ ಎಂದು ಆರೋಪಿಸಿದರು. ನಂತರ ಮಾಜಿ ಶಾಸಕ ಎನ್. ಮಹೇಶ್ ಮಾತನಾಡಿ, ರಾಜ್ಯ ಸರ್ಕಾರವು ಗ್ರಾಪಂಗೆ ಒಂದು ಮದ್ಯದಂಗಡಿಯನ್ನು ತೆರೆಯಲು ತೆಗೆದುಕೊಂಡಿರುವ ತೀರ್ಮಾನ ಸರಿಯಲ್ಲ ಎಂದರು.

ಅಣಕು ಶವಯಾತ್ರೆಗೆ ಪೊಲೀಸರ ತಡೆ: ರಾಜ್ಯ ಸರ್ಕಾರದ ಅಣುಕು ಶವಯಾತ್ರೆಗೆ ಮುಂದಾಗಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದು, ಅಣುಕು ಶವವನ್ನು ಕಸಿದುಕೊಂಡರು. ಇದರಿಂದ ಕೆಲಕಾಲ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ, ಆಕ್ರೋಶಗೊಂಡ ಪ್ರತಿಭಟನಾಕಾರರು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿದರು. ಇದರಿಂದ ಕೆಲಕಾಲ ಕೊಳ್ಳೇಗಾಲ ಚಾಮರಾಜನಗರ ಮಾರ್ಗದ ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಈ ವೇಳೆ ಮಧ್ಯ ಪ್ರವೇಶಿಸಿದ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಲು ಮುಂದಾದರು. ಆದರೆ, ಅವರು ಅಣುಕು ಶವವನ್ನು ನೀಡಬೇಕು ಎಂದು ಪಟ್ಟುಹಿಡಿದರು. ಬಳಿಕ, ಪೊಲೀಸರು ಅಣುಕು ಶವವನ್ನು ನೀಡಿ, ಪ್ರತಿಭಟನೆಗೆ ಸಹಕರಿಸಿದರು.

ಬಳಿಕ, ಅಣುಕು ಶವಯಾತ್ರೆಯನ್ನು ರೇಷ್ಮೆ ಕಾರ್ಖಾನೆ ಸಮೀಪದಲ್ಲಿರುವ ಮೈದಾನದವರೆಗೂ ತಂದು ಸುಟ್ಟುಹಾಕಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಎಂ. ಶೈಲಾ, ಉಪಾಧ್ಯಕ್ಷರಾದ ಸರೋಜಾ ಸಿದ್ದರಾಜು, ಕಲಾವತಿ, ಖಜಾಂಚಿ ವನಜಾಕ್ಷಿ, ದಾಕ್ಷಾಯಿಣಿ, ಮಹೇಶ್ವರಿ, ಮಂಡಲ ಮೋರ್ಚಾದ ಪದಾಧಿಕಾರಿಗಳು, ಮುಖಂಡರಾದ ನೂರೊಂದುಶೆಟ್ಟಿ, ನಗರ ಮಂಡಲ ಅಧ್ಯಕ್ಷ ನಾಗರಾಜು, ಅಗರ ರಾಜು, ಜಿಲ್ಲಾ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡ್ನಾಕೂಡು ಪ್ರಕಾಶ್, ಮಂಡಲ ಅಧ್ಯಕ್ಷ ಮುತ್ತಿಗೆ ಮೂರ್ತಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಕಾವೇರಿದ ಕಿಚ್ಚು : ಕರ್ನಾಟಕ ಸೇನಾಪಡೆಯಿಂದ

ಟಿಶ್ಯೂ ಪೇಪರ್ ಹಿಡಿದು ಪ್ರತಿಭಟನೆ



ಚಾಮರಾಜನಗರ, ಅ. 10– ರಾಜ್ಯ ಸರ್ಕಾರವು ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಟಿಶ್ಯೂ ಪೇಪರ್ ಹಿಡಿದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿತರು ಟಿಶ್ಯೂ ಪೇಪರ್ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರನ್ನು ಬಿಟ್ಟಿರುವುದನ್ನು ಖಂಡಿಸಿ ನಮ್ಮ ಸಂಘಟನೆ ವತಿಯಿಂದ ಒಂದು ತಿಂಗಳಿನಿಂದ ನಿರಂತರ ಹೋರಾಟ ನಡೆಸುತ್ತಿದ್ದು ಇಂದು ಕೂಡ ಕರ್ನಾಟಕ ಜನತೆಗೆ ನೀರು ಇಲ್ಲದೆ ಟಿಶ್ಯೂ ಪೇಪರ್‌ನಲ್ಲಿ ಒರೆಸುವ ಪರಿಸ್ಥಿತಿ ಬರುತ್ತಿದೆ. ಕಾವೇರಿ ನೀರನ್ನೆಲ್ಲ ತಮಿಳುನಾಡಿಗೆ ಬಿಟ್ಟು ಮುಂದಿನ ದಿನಗಳಲ್ಲಿ ಜನತೆ ಮುಖ, ಕೈಕಾಲು ತೊಳೆಯಲಿಕ್ಕೆ, ಸ್ನಾನ ಮಾಡುವುದಕ್ಕೆ ಟಿಶ್ಯೂಪೇಪರ್‌ನಲ್ಲಿ ಒರೆಸಿಕೊಳ್ಳಬೇಕಾಗುತ್ತದೆ ಅಂತಾ ಹೇಳಿ ಒಂದು ಅಣಕು ಪ್ರತಿಭಟನೆ ಮಾಡಿ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡುತ್ತಿದೆ ಎಂದರು.

ತಮಿಳುನಾಡಿನ ಶಾಸನಸಭೆಯಲ್ಲಿ ಮುಖ್ಯಮಂತ್ರಿ ಸ್ಟಾಲಿನ್ ಮತ್ತು ಸರ್ಕಾರ ನಿರ್ಣಯ ಕೈಗೊಂಡು ಕರ್ನಾಟಕ ಸರ್ಕಾರ ಕಾವೇರಿಯಲ್ಲಿ ನೀರಿಲ್ಲ ಎಂದು ಸುಳ್ಳು ಹೇಳುತ್ತಿದೆ ಸಂಪೂರ್ಣ ನೀರು ಬಿಡುವಂತೆ ಒತ್ತಾಯ ಮಾಡಿರುವುದು ನಿಜಕ್ಕೂ ಅತ್ಯಂತ ಖಂಡನೀಯ. ಮುಂದಿನ ದಿನಗಳಲ್ಲಿ ತಮಿಳುನಾಡು ಸಿಎಂ ಸ್ಟಾಲಿನ್ ವಿರುದ್ಧ ದೊಡ್ಡ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಒಂದನೇ ಪುಟದಿಂದ

ಕೊನೆ ಕ್ಷಣದಲ್ಲೂ ಸನ್ನದ್ಧರಾಗಿರಬೇಕು

ಅ.13ರಂದು ಯಾವ ರೀತಿ ಆಗುತ್ತದೆ ಎಂಬುದರ ಮೇಲೆ ನಮ್ಮ ಪ್ರತಿಕ್ರಿಯೆ ಅವಲಂಬಿತವಾಗಲಿದೆ ಎಂದು ತಿಳಿಸಿದರು. ಮಹಿಷ ದಸರಾ ಆಚರಿಸಲು ಮುಂದಾಗಿರುವವರು ಯಾರನ್ನಾದರೂ ಪೂಜೆ ಮಾಡಿಕೊಳ್ಳಲಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ದಸರಾ ನಡೆಯುವುದು ಚಾಮುಂಡಿ ಮಾತೆಗೆ ಮಾತ್ರವಾಗಿದೆ. ಇಡೀ ದೇಶದಲ್ಲಿ ಒಂದೊಂದು ಊರಿನಲ್ಲಿ ಒಂದೊಂದು ರೀತಿಯಲ್ಲಿ ವಿವಿಧ ಹೆಸರುಗಳಲ್ಲಿ ದಸರಾ ಉತ್ಸವ ಆಚರಣೆಯಲ್ಲಿದೆ. ಇಂತಹ ಸಂದರ್ಭದಲ್ಲಿ ಮಹಿಷ ದಸರಾ ಹೆಸರಿನಲ್ಲಿ ನಮ್ಮ ನಂಬಿಕೆಗೆ ಧಕ್ಕೆ ತರುವುದನ್ನು ಮಾತ್ರ ಸಹಿಸಲು ಸಾಧ್ಯವಿಲ್ಲ. ಮಹಿಷ ದಸರಾ ಆಚರಣೆಯ ಪೋಸ್ಟರ್‌ನಲ್ಲಿ ಚಾಮುಂಡಿಬೆಟ್ಟದ ಹೆಸರನ್ನು 'ಮಹಿಷ ಬೆಟ್ಟ' ಎಂದು ಉಲ್ಲೇಖಿಸಿದ್ದು, ಇದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ಧ್ವನಿ ಜೋರಾದ ಬಳಿಕ ಅವರು ಇದು ಚಾಮುಂಡಿಗೆ ಪರ್ಯಾಯ ಉತ್ಸವ ಅಲ್ಲ ಎಂದು ಹೇಳಿಕೊಂಡರು. ಅಲ್ಲದೆ, ಮಹಿಷನಿಗೆ ಪೂಜೆ ಅಷ್ಟೇ ಎಂದರು. ಮಹಿಷನ ಪೂಜೆಗೆ ದಸರಾ ಸಂದರ್ಭವೇ ಏಕೆ ಎಂಬುದು ನಮ್ಮ ಪ್ರಶ್ನೆ. ನಿಮ್ಮ ಮನೆಯಲ್ಲಿ ಚಾಮುಂಡಿ ಫೋಟೋ ಹೊರ ಹಾಕಿ ಮಹಿಷನ ಫೋಟೋ ಇಟ್ಟುಕೊಳ್ಳಲು ನಿಮ್ಮ ಮನೆಯವರೇ ಒಪ್ಪುತ್ತಾರೆಯೇ ಎಂದು ಪ್ರಶ್ನೆ ಹಾಕಿದೆವು. ನಮ್ಮ ಚಲೋ ಚಾಮುಂಡಿಬೆಟ್ಟ ಹೋರಾಟಕ್ಕೆ ರಾಜ್ಯದ ವಿವಿಧ ಮೂಲೆಗಳಿಂದ ಬೆಂಬಲ ವ್ಯಕ್ತವಾಗಿದೆ ಎಂದರು. ಮಹಿಷ ದಸರಾ ವಿಚಾರದಲ್ಲಿ ಮುಖ್ಯಮಂತ್ರಿಗಳು ತುಸು ಸರಿಯಾಗಿಯೇ ನಡೆದುಕೊಂಡಿದ್ದಾರೆ. ಮೊನ್ನೆ ಮಾಧ್ಯಮದವರು ಈ ಬಗ್ಗೆ ಅವರನ್ನು ಕೇಳಿದಾಗ, ಜಿಲ್ಲಾಡಳಿತ ನೋಡಿಕೊಳ್ಳಲಿದೆ ಎಂದು ಹೇಳಿದ್ದಾರೆ. ಅವರೇನಾದರೂ ಮಹಿಷ ದಸರಾವನ್ನೂ ಮಾಡಲಿ ಬಿಡಿ ಎಂದಿದ್ದರೆ, ತೀವ್ರತರ ಹೋರಾಟಕ್ಕೆ ಸಿದ್ಧವಾಗಿಯೇ ಇದ್ದೆವು ಎಂದು ಹೇಳಿದರು.

ನಮ್ಮ ಅಂದಾಜಿನ ಪ್ರಕಾರ ಕನಿಷ್ಠ ಮೂರು ಸಾವಿರ ಜನ ನಮ್ಮ ಹೋರಾಟದಲ್ಲಿ ಪಾಲ್ಗೊಳ್ಳಲು ಸಜ್ಜಾಗಿದ್ದಾರೆ. ಮಹಿಷ ದಸರಾ ಆಚರಣೆಗೆ ಅನುಮತಿ ಕೋರಿ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು. ಅಂತೆಯೇ ನಾವು ಬಿಜೆಪಿಯಿಂದ ಚಲೋ ಚಾಮುಂಡಿಬೆಟ್ಟ ಹೋರಾಟಕ್ಕೆ ಅನುಮತಿ ನೀಡುವಂತೆ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದೆವು. ಇಂದು ಸಂಜೆ ಪೊಲೀಸ್ ಆಯುಕ್ತರು ಎರಡಕ್ಕೂ ಅನುಮತಿ ಇಲ್ಲವೆಂದು ಪ್ರಕಟಣೆ ನೀಡಿದ್ದಾರೆ. ಇದು ಸ್ವಾಗತಾರ್ಹ ಎಂದು ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರು ಸೂಕ್ತ ಕ್ರಮ ವಹಿಸಿದ್ದಾರೆ. ಹಾಗಾಗಿ ಅವರ ಮೇಲೆ ಗೌರವ ಹೊಂದಿದ್ದೇವೆ. ರಾಜ್ಯ ಸರ್ಕಾರ ನಮ್ಮ ಬೆಂಬಲಕ್ಕೆ ಇರುತ್ತದೆ. ಈ ವರ್ಷ ಆಚರಣೆ ಮಾಡಬಹುದು ಎಂದು ಮಹಿಷ ದಸರಾ ಆಚರಣಾ ಸಮಿತಿಯವರು ಧೈರ್ಯದಿಂದ ಇದ್ದರು. ಅದೆಲ್ಲವೂ ನಮ್ಮ ಗಟ್ಟಿ ಧ್ವನಿಯ ಕಾರಣಕ್ಕೆ ನಿಂತಿದೆ. ನಾವೆಲ್ಲರೂ ಒಗ್ಗಟ್ಟಿನಿಂದ ಇರುವ ಕಾರಣಕ್ಕೆ ಇಂದು ಒಳ್ಳೆಯ ಸಂದೇಶ ಸಿಕ್ಕಿದೆ ಎಂದು ಹೇಳಿದರು. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಮೈಸೂರು ವಿಭಾಗೀಯ ಪ್ರಭಾರಿ ಮೈ.ವಿ.ರವಿಶಂಕರ್, ನಗರ ಪ್ರಧಾನ ಕಾರ್ಯದರ್ಶಿಗಳಾದ ವಾಣೀಶ್ ಕುಮಾರ್, ಸೋಮಸುಂದರ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಹಿಷ ದಸರಾ ಮಾಡಿಯೇ ತೀರುತ್ತೇವೆ

ಚಾಮುಂಡಿ ಬೆಟ್ಟದ ಮಹಿಷಾಸುರನಿಗೆ ಪುಷ್ಪಾರ್ಚನೆಗೆ ಮಹಿಷ ದಸರಾ ಅನುಷ್ಠಾನ ಸಮಿತಿ ಕೋರಿದ್ದ ಮನವಿಗೆ ಹಾಗೂ 'ಚಾಮುಂಡಿ ಬೆಟ್ಟ' ಚಲೋಗೆ ಬಿಜೆಪಿ ಅನುಮತಿ ಕೋರಿದ್ದ ಮನವಿಗಳಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ನಿರಾಕರಿಸಬಾರದಿತ್ತು. ಬದಲಾಗಿ ಬೇರೆ ಬೇರೆ ಸಮಯ ನಿಗಧಿಪಡಿಸಿ, ಅನುಮತಿ ನೀಡಬಹುದಿತ್ತು ಎಂದು ಅಭಿಪ್ರಾಯಪಟ್ಟರು.

ನಗರ ಪೊಲೀಸ್ ಆಯುಕ್ತರು 'ಮಹಿಷ ದಸರಾ' ಆಚರಣೆಗೆ ಅನುಮತಿ ನಿರಾಕರಿಸಿದ್ದರೂ ನಾವು ಮಹಿಷ ದಸರಾ ನಡೆಸುತ್ತೇವೆ. ನಮ್ಮ ಸಮಿತಿಯ ಸದಸ್ಯರು ಬುಧವಾರ ಸಭೆ ಸೇರಿ, ಮಹಿಷ ದಸರಾ ಎಲ್ಲಿ ಆಚರಿಸಬೇಕು, ಯಾವ ರೀತಿ ಆಚರಿಸಬೇಕು ಎಂಬುದರ ಕುರಿತು ನಿರ್ಧರಿಸಿ, ಮಾಧ್ಯಮಗಳಿಗೆ ಮಾಹಿತಿ ನೀಡುತ್ತೇವೆ. ಮಹಿಷ ದಸರಾ ಪಕ್ಷಾತೀತ ಆಚರಣೆ. ನಮ್ಮ ಪೂರ್ವಜರನ್ನು ಪಿತೃ ಪಕ್ಷದಲ್ಲಿ ನೆನೆಯುವುದು ವಾಡಿಕೆ. ಅದೇ ರೀತಿ ಪೂರ್ವಜ ಮಹಿಷನನ್ನು ಸಂಪ್ರದಾಯದಂತೆ ನೆನೆಯುವುದು ನಮ್ಮ ಆದ್ಯ ಕರ್ತವ್ಯ ಎಂದರು. ನಮ್ಮ ಮಹಿಷ ದಸರಾದಿಂದ ಯಾರಿಗೆ ತೊಂದರೆ ಆಗಲಿದೆ ಎಂಬುದು ತಿಳಿಯುತ್ತಿಲ್ಲ. ಸಂವಿಧಾನ ಆಶಯದಂತೆ ನಾವು ಆಚರಣೆ ಮಾಡುತ್ತೇವೆ. ಸಂಸದ ಪ್ರತಾಪ ಸಿಂಹ ರೀತಿ ನಾವು ವರ್ತಿಸುವುದಿಲ್ಲ. ನಾವು ಕಾನೂನಿಗೆ ಬೆಲೆ ಕೊಡುತ್ತೇವೆ. ಪೊಲೀಸರ ಆದೇಶಕ್ಕೆ ವಿರುದ್ಧವಾಗಿ, ಯಾವುದೇ ಆಚರಣೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರಲ್ಲದೆ, ಮಹಿಷ ದಸರಾ ಆಚರಣೆ ಸಂಬಂಧ ಹೈಕೋರ್ಟ್‌ನಲ್ಲಿ ಮೈಸೂರಿನ ನಾಗರಿಕರೊಬ್ಬರು ಪ್ರಕರಣ ದಾಖಲಿಸಿದ್ದು, ಅದರ ನೋಟೀಸ್ ಅನ್ನು ಇಂದು(ಅ.10) ಮಧ್ಯಾಹ್ನ ಸ್ವೀಕರಿಸಿದ್ದೇನೆ. ಆ ಪ್ರಕರಣ ನಾಳೆ(ಅ.11) ನಡೆಯಲಿದೆ. ಈ ಸಂಬಂಧ ನ್ಯಾಯಾಲಯಕ್ಕೆ ಸೂಕ್ತ ದಾಖಲಾತಿ ಸಲ್ಲಿಸುತ್ತೇವೆ ಎಂದಷ್ಟೇ ಹೇಳಿದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜ ಅರಸ್ ಮಾತನಾಡಿ, ಸಂಸದ ಪ್ರತಾಪ ಸಿಂಹ 'ಮಹಿಷಾ ದಸರಾ' ಆಚರಣೆ ವಿರೋಧಿಸುವುದು ಸರಿಯಲ್ಲ. ಈ ಆಚರಣೆಗೆ ವಿರುದ್ಧವಾಗಿ 'ಚಾಮಂಡಿಬೆಟ್ಟ – ಚಲೋ' ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸುತ್ತಿರುವುದು ಏಕೆ? ಸಂಸದರಿಗೆ ಚಾಮಂಡಿಬೆಟ್ಟದ ಇತಿಹಾಸ ಗೊತ್ತಿಲ್ಲ. ಬೆಟ್ಟಕ್ಕೆ 'ಚಾಮುಂಡಿ' ಹೆಸರು ಹೇಗೆ ಬಂತು ಎಂದು ತಿಳಿಯದು. ಮೊದಲು ಈ ಬೆಟ್ಟಕ್ಕೆ ಮಹಾಬಲಾದ್ರಿ ಎಂಬ ಹೆಸರಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬೃಹತ್ ಗೋಪುರ ಕಟ್ಟಿಸಿ, ಲೋಕಾರ್ಪಣೆಗೊಳಿಸುವ ಸಂದರ್ಭದಲ್ಲಿ ಮಹಾರಾಜರಿಂದ ಮಹಾಬಲಾದ್ರಿ ಬೆಟ್ಟಕ್ಕೆ, 'ಚಾಮುಂಡಿ' ಎಂಬ ಹೆಸರು ಹೇಳಿಸಿದ್ದರ ಪರಿಣಾಮ ಅಂದಿನಿಂದ ಈ ಬೆಟ್ಟಕ್ಕೆ 'ಚಾಮುಂಡಿಬೆಟ್ಟ' ಎಂಬ ಹೆಸರು ಪ್ರಸಿದ್ಧಿ ಪಡೆಯಿತು. ಅಲ್ಲದೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ನಿಧನರಾಗುವ 2 ವರ್ಷಗಳ ಮುನ್ನ ಚಾಮುಂಡಿಬೆಟ್ಟದಲ್ಲಿ ಮಹಿಷಾಸುರನ ಪ್ರತಿಮೆ ಸ್ಥಾಪಿಸಿದ್ದ ಪ್ರಸಂಗವನ್ನು ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ವಿಚಾರವಾದಿ ಪ್ರೊ.ಕೆ.ಎಸ್. ಭಗವಾನ್ ಸೇರಿದಂತೆ ಇತರೆ ಪ್ರಗತಿಪರ ಚಿಂತಕರು ಉಪಸ್ಥಿತರಿದ್ದರು.

'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಗೆ ಆಯ್ಕೆ

ಡಾ.ಪದ್ಮಾಮೂರ್ತಿ, ಬೆಂಗಳೂರು ವಿವಿ ಕಲಾ ವಿಭಾಗದ ಮುಖ್ಯಸ್ಥರಾಗಿ, ಮದರಾಸು ಮ್ಯೂಸಿಕ್ ಅಕಾಡೆಮಿ ತಜ್ಞರ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ದೇಶ, ವಿದೇಶಗಳಲ್ಲಿ ಹಲವು ಸಂಗೀತ ಕಛೇರಿ ನಡೆಸಿಕೊಟ್ಟಿದ್ದಾರೆ. ಇವರ ಕರ್ನಾಟಕ ಸಂಗೀತ ಲಕ್ಷಣ ಸಂಗ್ರಹ 2 ಸಂಪುಟಗಳಲ್ಲಿ ಪ್ರಕಟವಾಗಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾಶ್ರೀ ಪ್ರಶಸ್ತಿ, ಮದರಾಸಿನ ಪಾರ್ಥಸಾರಥಿ ಸಂಗೀತ ಸಭಾದಿಂದ ವಿದ್ಯಾರತ್ನ ಪ್ರಶಸ್ತಿ, ಬೆಂಗಳೂರು ಗಾಯನ ಸಮಾಜದ ವರ್ಷದ ಕಲಾವಿದೆ ಮುಂತಾದ ಅನೇಕ ಪುರಸ್ಕಾರಗಳು ಇವರಿಗೆ ಸಂದಿವೆ. ದಸರಾ ಉದ್ಘಾಟನೆ ದಿನ ತವರಲ್ಲಿ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಈವರೆಗೆ ಪ್ರಶಸ್ತಿ ಪ್ರದಾನ ಮಾಡುವ ಹಿಂದಿನ ದಿನ ಪುರಸ್ಕೃತರ ಹೆಸರು ಘೋಷಿಸುತ್ತಿದ್ದರು. ಈ ಬಾರಿ ಮುಂಚಿತವಾಗಿಯೇ ಪ್ರಶಸ್ತಿ ಆಯ್ಕೆ ಮಾಡಿ, ಘೋಷಣೆ ಮಾಡಿರುವುದು ಗಮನಾರ್ಹ.

ಕಲ್ಲು ತೂರಾಟ; ಕಿಟಕಿ ಗಾಜು ಪುಡಿ

ಸುಮಾರು 7.45ರಿಂದ 8 ಗಂಟೆ ವೇಳೆಯಲ್ಲಿ ಬೈಕ್ ಪೆಟ್ರೋಲ್ ಟ್ಯಾಂಕ್ ಮೇಲಿನ ಪೌಚ್‌ನಲ್ಲಿ ಜಲ್ಲಿ ಕಲ್ಲು ತುಂಬಿಕೊಂಡು ಬಂದ ಆತ, ದೂರದಲ್ಲಿ ನಿಂತು ಮುಖ್ಯಮಂತ್ರಿ ಮನೆ ಮೇಲೆ ಕಲ್ಲುಗಳನ್ನು ತೂರಿ ಕಿಟಕಿ ಗಾಜುಗಳನ್ನು ಪುಡಿ ಪುಡಿ ಮಾಡಿದ್ದಾನೆ. ಶಬ್ದ ಕೇಳುತ್ತಿದ್ದಂತೆಯೇ ಸ್ಥಳದಲ್ಲಿದ್ದ ಪೊಲೀಸರು ಅವನ ಹಿಡಿಯಲು ಹೋಗುತ್ತಿದ್ದಂತೆ ಶಿವಮೂರ್ತಿ ಬೈಕ್‌ನಲ್ಲಿ ಪರಾರಿಯಾಗಿದ್ದಾನೆ.

ವಿಷಯ ತಿಳಿಯುತ್ತಿದ್ದಂತೆಯೇ ಸರಸ್ವತಿಪುರಂ ಠಾಣೆ ಸಬ್ ಇನ್ಸ್‌ಪೆಕ್ಟರ್ ಮಹೇಂದ್ರ, ಹೆಡ್ ಕಾನ್‌ಸ್ಟೇಬಲ್‌ಗಳಾದ ಬಸವರಾಜ ಅರಸ್, ಮೋಹನ್‌ಕುಮಾರ್ ಹಾಗೂ ಕಾನ್‌ಸ್ಟೇಬಲ್ ಸುದೀಪ್ ಅವನ ಬೆನ್ನತ್ತಿದರು. ಹೂಟಗಳ್ಳಿ ಬಳಿ ಆತ ಇವರ ಮೇಲೂ ಕಲ್ಲು ತೂರಿದ. ಆ ವೇಳೆ ಸುದೀಪ ಅವರಿಗೆ ಗಾಯಗಳಾಗಿವೆ.

ಕೊನೆಗೂ ಆತನನ್ನು ಬಂಧಿಸಿ, ಬೈಕ್ ವಶಪಡಿಸಿಕೊಂಡ ಪೊಲೀಸರು, ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ, ಅಚ್ಚರಿ ವಿಷಯ ಬಾಯ್ಬಿಟ್ಟಿದ್ದಾನೆ. ರೈತರ ಸಾಲ ಮನ್ನಾದಂತೆ ಹೆಲ್ಮೆಟ್ ರಹಿತ ಚಾಲನೆ ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಬಾಕಿ ಇರುವ ದಂಡವನ್ನೂ ಮನ್ನಾ ಮಾಡಬೇಕೆಂದು ಮನವಿ ಮಾಡಲೆಂದು ನಾನು ಶನಿವಾರ ಮುಖ್ಯಮಂತ್ರಿಗಳ ಮೈಸೂರು ಮನೆ ಬಳಿ ಹೋಗಿ ಸಾಲಿನಲ್ಲಿ ನಿಂತಿದ್ದೆ. ಆದರೆ ಸಿದ್ದರಾಮಯ್ಯ ಮನೆ ಒಳಗೆ ಹೋದವರು ಸಂಜೆ 4 ಗಂಟೆವರೆಗೂ ಹೊರಗೆ ಬಾರದ ಕಾರಣ ವಾಪಸ್ ಹೋಗಿದ್ದೆ ಎಂದು ಶಿವಮೂರ್ತಿ ತಿಳಿಸಿದ್ದಾನೆ. ಈ ಹಿಂದೆ ಮಹಾರಾಜ ಕಾಲೇಜು ಮೈದಾನದಲ್ಲಿ ಗೃಹಲಕ್ಷ್ಮಿ ಗ್ಯಾರಂಟಿ ಯೋಜನೆ ಉದ್ಘಾಟನೆ ಕಾರ್ಯಕ್ರಮದಲ್ಲೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ. ಆದ್ದರಿಂದ ಸಿದ್ದರಾಮಯ್ಯ ಅವರೇ ನನ್ನನ್ನು ಹುಡುಕಿಕೊಂಡು ಬರಲಿ ಎಂದು ನಾನು ಇಂದು ಅವರ ಮನೆ ಮೇಲೆ ಕಲ್ಲು ತೂರಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾನೆ.

ಸಿಎಂ ಮನೆ ಮೇಲೆ ಕಲ್ಲು ತೂರಿದ್ದಕ್ಕಾಗಿ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೆ, ಪೊಲೀಸರತ್ತ ಕಲ್ಲು ತೂರಿ ಹಲ್ಲೆ ನಡೆಸಿ ಗಾಯಗೊಳಿಸಿರುವ ಸತ್ಯಮೂರ್ತಿ ವಿರುದ್ಧ ವಿಜಯನಗರ ಠಾಣೆ ಪೊಲೀಸರು ಸಹ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇಂದು ಸಂಜೆ ಆತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.



ವಿಶ್ವಕಪ್ ಮಹಾಸಮರ 2023

ಗೆಲುವಿನ ಲಯಕ್ಕೆ ಮರಳಿದ ಇಂಗ್ಲೆಂಡ್

ಬಾಂಗ್ಲಾ ವಿರುದ್ಧ ಆಂಗ್ಲರಿಗೆ 137 ರನ್‌ಗಳ ಬೃಹತ್ ಗೆಲುವು



ಧರ್ಮಶಾಲಾ, ಅ.10– ಡೇವಿಡ್ ಮಲನ್ ಅವರ ಭರ್ಜರಿ ಶತಕ ಹಾಗೂ ರೀಸ್ ಟೋಪ್ಲಿ ಅವರ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಇಂಗ್ಲೆಂಡ್ ಬಾಂಗ್ಲಾದೇಶದ ವಿರುದ್ಧ 137 ರನ್‌ಗಳ ಬೃಹತ್ ಗೆಲುವು ಸಾಧಿಸಿದೆ. ಆ ಮೂಲಕ ಗೆಲುವಿನ ಲಯಕ್ಕೆ ಮರಳಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್‌ಗೆ ಆರಂಭಿಕರಾದ ಡೇವಿಡ್ ಮಲನ್ ಹಾಗೂ ಜಾನಿ ಬೈರ್ಸ್ಟೋವ್ ಮೊದಲ ವಿಕೆಟ್ 115 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 52 ರನ್ ಗಳಿಸಿದ್ದ ಬೈರ್ಸ್ಟೋವ್ ವಿಕೆಟ್ ಒಪ್ಪಿಸಿದರು. ನಂತರ ಜೊತೆಗೂಡಿದ ಮಲನ್ ಹಾಗೂ ಜೋ ರೂಟ್ 2ನೇ ವಿಕೆಟ್‌ಗೆ 151ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 250ರ ಗಡಿ ದಾಟಿಸಿದರು. ಬಾಂಗ್ಲಾ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಡೇವಿಡ್ ಮಲನ್ ಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 107 ಎಸೆತಗಳಲ್ಲಿ 16 ಬೌಂಡರಿ, 5 ಸಿಕ್ಸರ್ ಒಳಗೊಂಡ 140 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿದ್ದ ಜೋ ರೂಟ್ ಕೂಡ 82 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಜೋಸ್ ಬಟ್ಲರ್, ಹ್ಯಾರಿ ಬ್ರೂಕ್ ತಲಾ 20, ಸ್ಯಾಮ್ ಕರ್ರನ್, ಆದೀಲ್ ರಶೀದ್ ತಲಾ 11, ಕ್ರಿಸ್ ವೋಕ್ಸ್ 14, ಮಾರ್ಕ್ ವುಡ್ 6 ರನ್ ಗಳಿಸಿದರು. ಅಂತಿಮವಾಗಿ ಇಂಗ್ಲೆಂಡ್ ನಿಗದಿತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 364ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಬಾಂಗ್ಲಾದೇಶದ ಪರ ಬೌಲಿಂಗ್‌ನಲ್ಲಿ ಮಹೇದಿ ಹಸನ್ 4, ಶೋರಿಫುಲ್ ಇಸ್ಲಾಂ 3, ಶಕೀಬ್ ಅಲ್ ಹಸನ್ ಹಾಗೂ ತಸ್ಕಿನ್ ಅಹ್ಮದ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

365 ರನ್‌ಗಳ ಗುರಿ ಬೆನ್ನತ್ತಿದ ಬಾಂಗ್ಲಾದೇಶ 48.2 ಓವರ್‌ಗಳಲ್ಲಿ 227 ರನ್‌ಗಳಿಗೆ ಆಲೌಟಾಗಿ ಸೋಲು ಅನುಭವಿಸಿತು. ತಂಡದ ಪರ ಲಿಂಟನ್ ದಾಸ್ 66 ಎಸೆತಗಳಲ್ಲಿ 2 ಸಿಕ್ಸರ್, 7 ಬೌಂಡರಿ ಒಳಗೊಂಡ 76, ಮುಶ್ಫಿಕರ್ ರಹೀಮ್ 51, ತೌಹಿದ್ ಹೃದಯೊಯ್ 39 ಗಳಿಸಿದರು. ಮಹೇದಿ ಹಸನ್ 14, ತಸ್ಕಿನ್ ಅಹಮ್ಮದ್ 15, ಶೋರಿಫುಲ್ ಇಸ್ಲಾಂ 12 ರನ್ ಗಳಿಸಿದರು. ಆದರೆ ನಾಯಕ ಶಕೀಬ್ ಅಲ್ ಹಸನ್ ಸೇರಿದಂತೆ ಇನ್ನಿತರರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಇಂಗ್ಲೆಂಡ್ ಪರ ಬೌಲಿಂಗ್‌ನಲ್ಲಿ ರೀಸ್ ಟೋಪ್ಲಿ 4, ಕ್ರಿಸ್ ವೋಕ್ಸ್ 2, ಸ್ಯಾಮ್ ಕರ್ರನ್, ಮಾರ್ಕ್ ವುಡ್, ಆದಿಲ್ ರಶೀದ್, ಲಿಯಾಮ್ ಲಿವಿಂಗ್‌ಸ್ಟೋನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಡೇವಿಡ್ ಮಲನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ನ್ಯೂಜಿಲ್ಯಾಂಡ್	2	2	0	0	4
ಪಾಕಿಸ್ತಾನ್	2	2	0	0	4
ದಕ್ಷಿಣ ಆಫ್ರಿಕಾ	1	1	0	0	2
ಇಂಡಿಯಾ	1	1	0	0	2
ಇಂಗ್ಲೆಂಡ್	2	1	1	0	2
ಬಾಂಗ್ಲಾದೇಶ	2	1	1	0	2
ಆಸ್ಟ್ರೇಲಿಯಾ	1	0	1	0	0
ಶ್ರೀಲಂಕಾ	2	0	2	0	0
ಅಫ್ಘಾನಿಸ್ತಾನ್	1	0	1	0	0
ನೆದರ್‌ಲ್ಯಾಂಡ್ಸ್	2	0	2	0	0

ಇಂದಿನ ಪಂದ್ಯ: ಭಾರತ / ಅಫ್ಘಾನಿಸ್ತಾನ — ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ಹೊಸದಿಲ್ಲಿ

ಶ್ರೀಲಂಕಾಕ್ಕೆ ಸೋಲುಣಿಸಿದ ಬಾಬರ್ ಪಡೆ

345 ರನ್ ಚೇಸ್ ಮಾಡಿ ಪಾಕಿಸ್ತಾನ ವಿಶ್ವದಾಖಲೆ



ಹೈದರಾಬಾದ್, ಅ.10– ಅಬ್ದುಲ್ಲಾ ಶಫೀಕ್ ಹಾಗೂ ಮೊಹಮ್ಮದ್ ರಿಜ್ವಾನ್ ಅವರ ಭರ್ಜರಿ ಶತಕಗಳ ನೆರವಿನಿಂದ ಪಾಕಿಸ್ತಾನ ಶ್ರೀಲಂಕಾ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ.

ಆ ಮೂಲಕ 345 ರನ್‌ಗಳ ಬೃಹತ್ ಗೆಲುವಿನ ಗುರಿಯನ್ನು ಚೇಸ್ ಮಾಡಿ ವಿಶ್ವಕಪ್‌ನಲ್ಲಿ ಸತತ 2ನೇ ಗೆಲುವು ಸಾಧಿಸಿದೆ. ಅಲ್ಲದೇ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ರನ್ ಹಿಂಬಾಲಿಸಿ ಗೆದ್ದ ತಂಡ ಎಂಬ ವಿಶ್ವದಾಖಲೆಗೆ ಪಾತ್ರವಾಗಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತ ರಾಷ್ಟ್ರೀಯ ಮೈದಾನದಲ್ಲಿ ನಡೆದ ವಿಶ್ವಕಪ್ ಪಂದ್ಯಾವಳಿಯ 8ನೇ ಪಂದ್ಯದಲ್ಲಿ ಶ್ರೀಲಂಕಾ ನೀಡಿದ 345 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ 48.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಇನ್ನೂ 10 ಎಸೆತ ಬಾಕಿ ಉಳಿದಿರುವಂತೆಯೇ ಗೆಲುವಿನ ದಡ ಸೇರಿತು. ತಂಡದ ಮೊತ್ತ 37 ರನ್ ಆಗುವಷ್ಟರಲ್ಲಿ 12 ರನ್ ಗಳಿಸಿದ್ದ ಇಮಾಮ್ ಉಲ್ ಹಕ್, 10 ರನ್ ಗಳಿಸಿದ್ದ ನಾಯಕ ಬಾಬರ್ ಅಜಂ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಗೂಡಿದ ಅಬ್ದುಲ್ಲಾ ಶಫೀಕ್ ಹಾಗೂ ಮೊಹಮ್ಮದ್ ರಿಜ್ವಾನ್ ಭರ್ಜರಿ ಆಟವಾಡುವ ಮೂಲಕ ಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ 3ನೇ ವಿಕೆಟ್‌ಗೆ 176 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ 113 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಅಬ್ದುಲ್ಲಾ ಶಫೀಕ್ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಸೌದ್ ಶಕೀಲ್ 31 ರನ್ ಗಳಿಸಿದರು ನಿರ್ಗಮಿಸಿದರು. ಮತ್ತೊಂದೆಡೆ ಕ್ರಿಸ್‌ನಲ್ಲಿ ಗಟ್ಟಿಯಾಗಿ ನಿಂತ ಮೊಹಮ್ಮದ್ ರಿಜ್ವಾನ್ 131 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಇಫ್ತಿಕಾರ್ ಅಹಮ್ಮದ್ 22 ರನ್ ಗಳಿಸಿದರು. ಶ್ರೀಲಂಕಾ ಪರ ದಿಲ್ಷಾನ್ ಮಧುಶಂಕ 2, ಮಹೇಶ್ ತೀಕ್ಷಣ, ಮತೀಶ ಪತಿರಾನ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 344 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಆರಂಭಿಸಿದ ಕುಶಾಲ್ ಪರೆರಾ ಶೂನ್ಯಕ್ಕೆ ನಿರ್ಗಮಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಪಥುಮ್ ನಿಸ್ಸಾಂಕ ಹಾಗೂ ಕುಸಾಲ್ ಮೆಂಡೀಸ್ 102 ರನ್‌ಗಳ ಜೊತೆಯಾಟವಾಡುವ ಮೂಲಕ ಚೇತರಿಕೆ ನೀಡಿದರು. ಆದರೆ 51 ರನ್ ಗಳಿಸಿದ್ದ ನಿಸ್ಸಾಂಕ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಮತ್ತೊಂದೆಡೆ ಪಾಕ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಕುಸಾಲ್ ಮೆಂಡೀಸ್ ಕೇವಲ 65 ಎಸೆತಗಳಲ್ಲಿ ಶತಕ ಸಿಡಿಸಿ ದಾಖಲೆ ಬರೆದರು. ಆದರೆ 77 ಎಸೆತಗಳಲ್ಲಿ 6 ಸಿಕ್ಸರ್, 14 ಬೌಂಡರಿ ಒಳಗೊಂಡ 122ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸದೀರ ಸಮರ ವಿಕ್ರಮ 89 ಎಸೆತಗಳಲ್ಲಿ 11 ಬೌಂಡರಿ, 2 ಸಿಕ್ಸರ್ ಒಳಗೊಂಡ 108ರನ್ ಗಳಿಸಿ ಔಟಾದರು. ಉಳಿದಂತೆ ಧನಂಜಯ ಡಿಸಿಲ್ವಾ 25, ಶನಕ 12, ವೆಲ್ಲಾಲಗೆ 10 ರನ್ ಗಳಿಸಿದರು. ಪಾಕಿಸ್ತಾನದ ಪರ ಬೌಲಿಂಗ್‌ನಲ್ಲಿ ಹಸನ್ ಅಲಿ 4, ಹ್ಯಾರಿಸ್ ರೌಫ್ 2, ಶಹೀನ್ ಆಫ್ರಿದಿ, ಮೊಹಮ್ಮದ್ ನವಾಜ್ ಹಾಗೂ ಶದಾಬ್ ಖಾನ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು. ಮೊಹಮ್ಮದ್ ರಿಜ್ವಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮರದ ಅಂಬಾರಿ ಹೊತ್ತು ಸರಾಗವಾಗಿ ಸಾಗಿದ ಮಹೇಂದ್ರ!



ಮೈಸೂರು, ಅ.10(ಎಸ್‌ಬಿಡಿ)– ದಸರಾ ಗಜಪಡೆಯ ಮಹೇಂದ್ರ ಮಂಗಳವಾರ ಮರದ ಅಂಬಾರಿ ಹೊತ್ತು ಅರಮನೆ ಅಂಗಳದಿಂದ ಬನ್ನಿಮಂಟಪದವರೆಗೆ ನಿರಾಯಾಸವಾಗಿ ಹೆಜ್ಜೆ ಹಾಕಿದ.

ಮೊದಲ ದಿನ ಅಂಬಾರಿ ಆನೆ ಅಭಿಮನ್ಯುಗೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗಿತ್ತು. ಇಂದು ಮಹೇಂದ್ರ ಯಶಸ್ವಿಯಾಗಿ ತಾಲೀಮು ಪೂರೈಸಿ ಸೈ ಎನಿಸಿಕೊಂಡ. 280 ಕೆಜಿ ಮರದ ಅಂಬಾರಿ, ಗಾದಿ, ನಮ್ದಾ, ಮರಳು ಮೂಟೆ ಸೇರಿ ಸಾವಿರ ಕೆಜಿ ತೂಕ ಹೊತ್ತು ಜಂಬೂಸವಾರಿ ರಾಜಮಾರ್ಗದಲ್ಲಿ ಗಾಂಭೀರ್ಯದಿಂದ ಬನ್ನಿಮಂಟಪದವರೆಗೆ ಹೆಜ್ಜೆ ಹಾಕಿದ. ಉಳಿದ ಆನೆಗಳು ಮಹೇಂದ್ರನನ್ನು ಹಿಂಬಾಲಿಸಿದವು.

ಎರಡನೇ ಬಾರಿ ದಸರಾದಲ್ಲಿ ಭಾಗಿಯಾಗಿರುವ ಮಹೇಂದ್ರ ಅತ್ಯಂತ ಸೌಮ್ಯ ಸ್ವಭಾವದವನು. ಹಾಗಾಗಿ ಮೊದಲ ವರ್ಷವೇ ಶ್ರೀರಂಗಪಟ್ಟಣ ದಸರಾದಲ್ಲಿ ಅಂಬಾರಿ ಹೊತ್ತು ಗಮನ ಸೆಳೆದಿದ್ದ. ಇದೀಗ ಎರಡನೇ ಬಾರಿ ಅ.16ರಂದು ಶ್ರೀರಂಗಪಟ್ಟಣ ದಸರೆಯಲ್ಲಿ ಪಾಲ್ಗೊಳ್ಳಲಿದ್ದಾನೆ. ಈ ಹಿನ್ನೆಲೆಯಲ್ಲಿ ಇಂದು ಆತನಿಗೆ ಮರದ ಅಂಬಾರಿ ಹೊರಿಸಿ, ತಾಲೀಮು ನಡೆಸಲಾಗಿದೆ.

ಜಂಬೂ ಸವಾರಿಗೆ ಆಗಮಿಸಿರುವ 14 ಆನೆಗಳಲ್ಲಿ 10 ಗಂಡಾನೆಗಳಿವೆ. ಇವುಗಳಲ್ಲಿ ಅಂಬಾರಿ ಆನೆ ಅಭಿಮನ್ಯ, ಮಹೇಂದ್ರ, ಧನಂಜಯ, ಗೋಪಿ ಹಾಗೂ ಕಂಜನ್ ಆನೆಗಳಿಗೆ ಮರಳು ಮೂಟೆ ಹೊರಿಸಿ ತಾಲೀಮು ನಡೆಸಲಾಗುತ್ತಿದೆ. ಇನ್ನು ನಿನ್ನೆಯಿಂದ ಮರದ ಅಂಬಾರಿ ಹೊರಿಸಿ ತಾಲೀಮು ಆರಂಭಿಸಲಾಗಿದೆ. ಮೊದಲ ದಿನ ಅಭಿಮನ್ಯು, ಎರಡನೇ ದಿನ ಮಹೇಂದ್ರ ಯಶಸ್ವಿಯಾಗಿ ಜವಾಬ್ದಾರಿ ನಿಬಾಯಿಸಿದ್ದಾರೆ. ಹೀಗೆ ನಿತ್ಯ ಬೇರೆ ಬೇರೆ ಆನೆಗಳಿಗೆ ಮರದ ಅಂಬಾರಿ ಹೊರಿಸಿ, ತಾಲೀಮು ಮಾಡಿಸಲಾಗುವುದು. ಮರದ ಅಂಬಾರಿ ಹೊರಿಸಿ ತಾಲೀಮಿನಲ್ಲಿ ಡಿಸಿಎಫ್ ಸೌರಭ್ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಮತ್ತಿತರರು ಉಪಸ್ಥಿತರಿದ್ದರು.

ಮೆಗಾ ಬ್ರೈಡಲ್ ಸ್ಪರ್ಧೆಯಲ್ಲಿ ಮೇಕಪ್ ಕಲಾವಿದರ ಕೈಚಳಕ ಪ್ರದರ್ಶನ



ಮೈಸೂರು, ಅ.10(ಜಿಎ)–ಮೈಸೂರು ಬ್ಯೂಟಿಷಿಯನ್ಸ್ ವೆಲ್ಫೇರ್ ಅಸೋಸಿಯೇಷನ್, ಬೆಂಗಳೂರಿನ ಕೌಂಟ್ ಆನ್ ಅಸ್ ಅಕಾಡೆಮಿ ಸಹಯೋಗದಲ್ಲಿ ನಗರದ ಹೋಟೆಲ್ ಪ್ರೆಸಿಡೆಂಟ್‌ನಲ್ಲಿ ಮೆಗಾ ಬ್ರೈಡಲ್ ಸ್ಪರ್ಧೆ (ಮದುವೆ ವಧುವಿನ ಆರತಕ್ಷತೆ ಅಲಂಕಾರ) ಮಂಗಳವಾರ ನಡೆಯಿತು.

ಮೆಗಾ ಬ್ರೈಡಲ್ ಸ್ಪರ್ಧೆಯನ್ನು ದಕ್ಷಿಣ ಭಾರತದ ನಟಿ ಹಾಗೂ ಅಂತಾರಾಷ್ಟ್ರೀಯ ಭರತನಾಟ್ಯ ಕಲಾವಿದೆ ಸಾಯಿ ಜ್ಯೋತಿ ಉದ್ಘಾಟಿಸಿ ಶುಭ ಹಾರೈಸಿದರು. ಅಂತಾರಾಷ್ಟ್ರೀಯ ಮಹಿಳಾ ವೃತ್ತದ ಅಧ್ಯಕ್ಷೆ ನಮ್ರತಾ ಶೆಣೈ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಬಾಲಿವುಡ್ ಸೆಲೆಬ್ರಿಟಿ ಮೇಕಪ್ ಕಲಾವಿದೆ ಅಲ್ಪಾ ರಾಜ್ಗೋರ್ ಮೇಕಪ್ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸ್ಪರ್ಧೆಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ 40ಕ್ಕೂ ಅಧಿಕ ಮೇಕಪ್ ಕಲಾವಿದರು ಭಾಗವಹಿಸಿ, ತಮ್ಮ ಕಲೆ ಪ್ರದರ್ಶಿಸಿದರು.

ಅಸೋಸಿಯೇಷನ್ ಅಧ್ಯಕ್ಷೆ ಕೆ.ವೇದವತಿ ಎನ್.ರೈ, ಕಾರ್ಯದರ್ಶಿ ಎಂ.ಎ.ಸಬೀನಾ, ಜಂಟಿ ಕಾರ್ಯದರ್ಶಿ ಎಂ.ಮಂಜುಳಾ, ಸದಸ್ಯರಾದ ಪ್ರತಿಭಾ ಶೆಟ್ಟಿ ಆರ್.ಮಾಲಿನಿ, ಅಹಲ್ಯಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅ.13ಕ್ಕೆ ದಸರಾ ಫಲಪುಷ್ಪ ಪ್ರದರ್ಶನ ಉದ್ಘಾಟನೆ

ಮೈಸೂರು, ಅ.10– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗವು 18ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನವನ್ನು ಕುಕ್ಕರಹಳ್ಳಿ ಕೆರೆಯ ಪೂರ್ವ ಹಾಗೂ ಪಶ್ಚಿಮ ದಂಡೆಯಲ್ಲಿ ಏರ್ಪಡಿಸಲಾಗಿದ್ದು, ದಸರಾ ಫಲಪುಷ್ಪ ಪ್ರದರ್ಶನವನ್ನು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಕ್ಟೋಬರ್ 13ರಂದು ಉದ್ಘಾಟಿಸಲಿದ್ದಾರೆ.

ಪುಷ್ಪ ಪ್ರದರ್ಶನವು 2023ರ ಅಕ್ಟೋಬರ್ 24ರವರೆಗೆ ನಡೆಯಲಿದ್ದು, ಪ್ರತಿ ದಿನವೂ ಬೆಳಗ್ಗೆ 9ರಿಂದ ಸಂಜೆ 7 ಗಂಟೆಯವರೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರುತ್ತದೆ ಎಂದು ತೋಟಗಾರಿಗೆ ವಿಭಾಗದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಮ್ಮ ಸನ್ನಿಧಿಯನ್ನು ಅಪವಿತ್ರಗೊಳಿಸುವುದನ್ನು ತಡೆಯೋಣ

ಮಹಿಷಾ ದಸರಾ ವಿರೋಧಿಸಿ ನಡೆಸುತ್ತಿರುವ ವಾರ್ಡ್‌ವಾರು ಸಭೆಯಲ್ಲಿ ಪ್ರತಾಪ್ ಸಿಂಹ ಕರೆ

ಮೈಸೂರು, ಅ.10(ಜಿಎ)–ಸಂಘರ್ಷವಾದರೂ ಸರಿ ಚಾಮುಂಡಿ ತಾಯಿ ಸನ್ನಿಧಿಯಲ್ಲಿ ಅಪವಿತ್ರ ಕೆಲಸ ಮಾಡುವವರನ್ನು ತಡೆಯೋಣ ಎಂದು ಸಂಸದ ಪ್ರತಾಪ್ ಸಿಂಹ ಜನರಿಗೆ ಕರೆ ನೀಡಿದರು.

ಮಹಿಷಾ ದಸರಾ ವಿರೋಧಿಸಿ ಬಿಜೆಪಿಯು ಅ.13ರಂದು ಹಮ್ಮಿಕೊಂಡಿರುವ ಚಾಮುಂಡಿಬೆಟ್ಟ ಚಲೋ ಜಾಥಾ ಈ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ ವಾರ್ಡ್‌ವಾರು ಪೂರ್ವಭಾವಿ ಸಭೆ ನಡೆಸುತ್ತಿದ್ದು, ಅದರಂತೆ ಮಂಗಳವಾರ ಮೈಸೂರಿನ ತಿಲಕ್ ನಗರದ ವಾರ್ಡ್ ನಂಬರ್ 25 ರಲ್ಲಿ ರಾಮಮಂದಿರದ ಮುಂಭಾಗ ಸಭೆ ನಡೆಸಿ ಮಾತನಾಡಿದರು.

ಪ್ರತಿ ವರ್ಷ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳು ಬಂದ ತಕ್ಷಣ ಮೈಸೂರಲ್ಲಿ ದಸರಾ ಸಿದ್ಧತೆ ಆರಂಭವಾಗುತ್ತದೆ. ಯುಗಾದಿ, ದೀಪಾವಳಿಯ ರೀತಿಯಲ್ಲಿಯೇ ನಾವು ಅತ್ಯಂತ ಸಡಗರದಿಂದ ದಸರಾ ಆಚರಿಸುತ್ತೇವೆ. ಇದರಿಂದ ವ್ಯಾಪಾರ ವಹಿವಾಟಿಗೂ ಅನುಕೂಲವಾಗುತ್ತದೆ. ಹಾಗೇ ಕಷ್ಟ–ಸುಖ ಏನೇ ಇದ್ದರೂ ಮೈಸೂರಿಗರು ಮೊದಲು ಬೆಟ್ಟದ ತಾಯಿಯ ಬಳಿ ಹೋಗುತ್ತೇವೆ. ಆಕೆ ಮಹಿಷಾ ಮರ್ದಿನಿ. ಮಹಿಷನ ಮರ್ದನ ಮಾಡಿದವಳು. 2016ರಲ್ಲಿ ದೇವರನ್ನು ದೆವ್ವ ಮಾಡಲು ದೆವ್ವವನ್ನು ದೇವರು ಮಾಡಲು ಮುಂದಾದರು.



ನಮ್ಮ ಸರ್ಕಾರ ಬಂದಾಗ ತಡೆ ಹಾಕಿದ್ದೇವು. ಆದರೆ, ಈಗ ಮತ್ತೆ ಆರಂಭಿಸಿದ್ದಾರೆ. ಮಹಿಷಾ ದಸರಾ ವಿರುದ್ಧ ನೀವು ಮುಂದಾಳತ್ವ ವಹಿಸಿಕೊಳ್ಳಿ. ನಾವು ನಿಮ್ಮ ಹಿಂದೆ ಇರುತ್ತೇವೆಂದು ಅನೇಕ ಹಿರಿಯರು, ಸಾರ್ವಜನಿಕರು ಹೇಳಿದ ಹಿನ್ನೆಲೆಯಲ್ಲಿ ಇಂದು ಸಂಘರ್ಷಕ್ಕೂ ಸಿದ್ಧನಾಗಿ ನಿಂತಿದ್ದೇನೆ ಎಂದರು.

ಇಂದು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಬರುತ್ತಿದ್ದೇನೆ. ನಾವು ಅಂದು ಎಲ್ಲಿಗೆ ಬರಬೇಕು ಎಂದು ಅರ್ಚಕರ ಹಾದಿಯಾಗಿ ಎಲ್ಲರೂ ಕೇಳುತ್ತಿದ್ದಾರೆ. ಇದಕ್ಕೆ ಈಗಾಗಲೇ ಎಲ್ಲಾ ದೇವಾಲಯ ಸಂಘ ಸಂಸ್ಥೆಗಳ ಸಹಕಾರ ನೀಡಿದ್ದಾರೆ. ಅ.13 ರಂದು ನಡೆಯಲಿರುವ ಚಾಮುಂಡಿ ಬೆಟ್ಟ ಚಲೋ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ಮಹಿಷಾ ದಸರಾ ಎಂಬ ಅನಾಚಾರವನ್ನು ಎಲ್ಲರೂ ಸೇರಿ ತಡೆಯಬೇಕು. ಯಾರೋ ಮೂರು ಮತ್ತೊಂದು ಜನ ಕಿಡಿಗೇಡಿಗಳು ಮಾಡಬೇಕು ಎಂದು ಹೊರಟಿರುವ ಈ ಮಹಿಷಾ ದಸರವನ್ನು ತಡೆಯಲೇಬೇಕು. ಅ.13 ರಂದು ಬೆಳಗ್ಗೆ 8 ಗಂಟೆಗೆ ತಾವರೆಕಟ್ಟೆ ಬಳಿ ಎಲ್ಲರೂ ಬನ್ನಿ ಎಲ್ಲರೂ ಬೆಟ್ಟಕ್ಕೆ ಹೋಗೋಣ. ನಗರದ ಹಲವು ಭಾಗಗಳಿಂದ ಸಾವಿರಾರು ಜನ ನಮ್ಮ ಪರವಾಗಿ ಬರುತ್ತಾರೆ. ಮಹಿಷಾ ಪ್ರತಿಮೆಯ ಬಳಿ ಎಲ್ಲರೂ ಕೂರೋಣ. ಚಾಮುಂಡಿ ತಾಯಿಯ ಸನ್ನಿಧಿಯಲ್ಲಿ ನಡೆಸುವ ಅನಾಚಾರವನ್ನು ಮಟ್ಟ ಹಾಕೋಣ ಎಂದರು.

ಸಭೆಯಲ್ಲಿ ವಿವಿಧ ಸಮುದಾಯದ ಮುಖಂಡರು ಮತ್ತು ಪಾಲಿಕೆ ಸದಸ್ಯ ರಂಗಸ್ವಾಮಿ ಹಾಗೂ ಬಿಜೆಪಿ ಕಾರ್ಯಕರ್ತರು ಮತ್ತು ಸ್ಥಳೀಯರು ಸಭೆಯಲ್ಲಿ ಉಪಸ್ಥಿತರಿದ್ದರು.

> ಈಗಾಗಲೇ ಬಿಜೆಪಿ ವತಿಯಿಂದ ಚಾಮುಂಡಿಬೆಟ್ಟ ಚಲೋಗೆ ಅನುಮತಿ ಕೋರಿ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಆದರೆ, ಅವರು ಮಹಿಷಾ ದಸರಾ ಮತ್ತು ಚಾಮುಂಡಿಬೆಟ್ಟ ಚಲೋ ಎರಡಕ್ಕೂ ಅನುಮತಿ ನೀಡಿಲ್ಲ. ಅನುಮತಿ ದೊರಕುವ ನಿರೀಕ್ಷೆ ಇದೆ. 144 ಸೆಕ್ಷನ್ ಜಾರಿಗೊಳಿಸಿದರೆ, ಸ್ವಾಗತಿಸುತ್ತೇವೆ.
> -ಪ್ರತಾಪ್ ಸಿಂಹ, ಸಂಸದ

ಮಾಜಿ ಶಾಸಕ ಚಿಕ್ಕಣ್ಣ ಶ್ರಮದಿಂದ ವಾಲ್ಮೀಕಿ ಭವನ ನಿರ್ಮಾಣ

ತಾಲೂಕು ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ ಚಾಕಳ್ಳಿ ಕೃಷ್ಣ

ಹೆಚ್.ಡಿ.ಕೋಟೆ, ಅ.10– ಪಟ್ಟಣದ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ನಡೆಸಿರುವ ಕಾಮಗಾರಿಯನ್ನು ತಂದೆ ದಿ.ಚಿಕ್ಕಮಾದು ಅವರದ್ದು ಎಂದು ಶಾಸಕ ಅನಿಲ್ ಚಿಕ್ಕಮಾದು ಹೇಳಿಕೆ ನೀಡಿರುವುದು ಸತ್ಯಕ್ಕೆ ದೂರ ಎಂದು ತಾಲೂಕು ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ ಚಾಕಳ್ಳಿ ಕೃಷ್ಣ ತಿಳಿಸಿದರು.

ಪಟ್ಟಣದ ಗದ್ದಿಗೆ ವೃತ್ತದ ಬಳಿ ನಿರ್ಮಾಣಗೊಂಡಿರುವ ವಾಲ್ಮೀಕಿ ಭವನಕ್ಕೆ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರು ಒಂದು ಎಕರೆ 15 ಗುಂಟೆ ಜಾಗವನ್ನು ಮಂಜೂರು ಮಾಡಿಸಿ, ಜಿಲ್ಲಾಧಿಕಾರಿ ಕಚೇರಿಯಿಂದ ಆದೇಶ ಹಾಗೂ ಕಟ್ಟಡದ ಲೈಸನ್ಸ್ ಅನ್ನು ಮಾಡಿಸಿದ್ದಾರೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆಯನ್ನು ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ರಾಮದಾಸ್, ಸಮಾಜದ ಪ್ರಸನ್ನಾನಂದಪುರಿ ಸ್ವಾಮೀಜಿ, ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕವೀರ ನಾಯಕ, ತಿಮ್ಮನಾಯಕ, ಟಿ.ಎಲ್.ಸೋಮನಾಯಕ, ಶಂಭುಲಿಂಗನಾಯಕ, ಪುರದಕಟ್ಟೆ ಬಸವರಾಜು, ಬಿ.ಎಂ.ಶಿವಣ್ಣ ಸೇರಿದಂತೆ ಸಮುದಾಯದ ಮುಖಂಡರ ಸಮ್ಮುಖದಲ್ಲಿ ನೆರವೇರಿಸಿದರು ಎಂದರು.

ಸರ್ಕಾರದಿಂದ ಒಂದು ಕೋಟಿ ರೂ., ಮಾಜಿ ಶಾಸಕರ ನಿಧಿಯಿಂದ 15 ಲಕ್ಷ ರೂ., ಸಂಸದರ ನಿಧಿಯಿಂದ 5 ಲಕ್ಷ ರೂ. ಸೇರಿ 1 ಕೋಟಿ 20 ಲಕ್ಷ ರೂ.ಅನ್ನು ಅಂದಿನ ಶಾಸಕ ಚಿಕ್ಕಣ್ಣ ಮಂಜೂರು ಮಾಡಿಸಿ ಕೆಲಸವನ್ನು ಆರಂಭಿಸಿದ್ದರು. ನಂತರ ಚಿಕ್ಕಮಾದು ಅವರು ಶಾಸಕರಾದ ಬಳಿಕ ಸರ್ಕಾರದಿಂದ ಹಣವನ್ನು ಕೊಡಿಸಿ ಕೆಲಸ ಮುಂದುವರಿಸಿದ್ದರು. ಅದೇ ರೀತಿ ಅನಿಲ್ ಚಿಕ್ಕಮಾದು ಸಹ ಕಟ್ಟಡದ ಕಾಮಗಾರಿಯನ್ನು ಶಾಸಕರಾದ ಬಳಿಕ ಮುಂದುವರಿಸಿಕೊಂಡು ಬಂದಿದ್ದಾರೆಯೇ ಹೊರತು ಕಟ್ಟಡ ನಿರ್ಮಾಣ ಮತ್ತು ಭೂಮಿ ಖರೀದಿಸುವಲ್ಲಿ ಮಾಜಿ ಶಾಸಕ ಚಿಕ್ಕಣ್ಣ ಅವರ ಪಾತ್ರವೇ ಹೆಚ್ಚು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯ ಮಿಲ್ ನಾಗರಾಜು, ನಾಗನಾಯಕ, ಹಲಸೂರು ಗೋವಿಂದ ರಾಜು, ಮಹದೇವನಾಯಕ, ಪ್ರಸಾದಿ, ಚೆನ್ನನಾಯಕ, ರಾಮಕೃಷ್ಣ, ಮೆಕಾನಿಕ್ ಸೂರಿ, ಚಂದನಾಯಕ, ಕೃಷ್ಣ, ಗಣೇಶ, ದೇವನಾಯಕ, ಸ್ವಾಮಿ, ರಾಮಕೃಷ್ಣಪ್ಪ, ರಮೇಶ್, ಬೆಟ್ಟನಾಯಕ ಇದ್ದರು.



> ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರು ತಾಲೂಕು ನಾಯಕ ಸಮುದಾಯಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡಬೇಕೆಂದು ಜಾಗ ಕೊಟ್ಟು ಶ್ರಮಿಸದಿದ್ದರೆ ಇಂತಹ ಭವನ ನಮ್ಮ ಸಮುದಾಯಕ್ಕೆ ಸಿಗುತ್ತಿರಲಿಲ್ಲ.
> -ಚಾಕಳ್ಳಿ ಕೃಷ್ಣ ತಾಲೂಕು ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ.

ಚೈತ್ರಭೂಮಿಗೆ ಯುವಕರ ಯಾತ್ರೆ



ಸರಗೂರು, ಅ.10–ಮಹಾರಾಷ್ಟ್ರದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚೈತ್ರಭೂಮಿಗೆ ಮಂಗಳವಾರ ಯಾತ್ರೆ ಹೊರಟ ತಾಲೂಕಿನ ಕೂಡಗಿ ಗ್ರಾಮದ ಮಹಾನಾಯಕ ಗೆಳೆಯರ ಬಳಗದ ಯುವಕರಿಗೆ ಗ್ರಾಮಸ್ಥರು ಶುಭಹಾರೈಸಿದರು.

ಬಳಗದ ಅಧ್ಯಕ್ಷ ಶಿವು ಮಾತನಾಡಿ, ಗ್ರಾಮದ ಯುವಕರು ಅಂಬೇಡ್ಕರ್ ಹೆಸರಿನಲ್ಲಿ ಚೀಟಿ ನಡೆಸಿ ಮತ್ತು ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಇಂತಹ ಯಾತ್ರೆಗೆ ಪ್ರತಿ ಗ್ರಾಮಗಳಿಂದ ತೆರಳಬೇಕು ಎಂದರು. ಈ ಸಂದರ್ಭದಲ್ಲಿ ಬಳಗದ ಉಪಾಧ್ಯಕ್ಷ ಚೆಂದು, (ಶಶಾಂಕ್), ರಾಮಣ್ಣ, ನಾಗೇಶ್ ದೇವರಾಜು, ವಿಜಯ್ ಕೃಷ್ಣ, ಶಿವರಾಜು, ಕೃಷ್ಣ, ಸೇಟು (ಶಿವಲಿಂಗ), ಗ್ರಾಮದ ಮುಖಂಡರು ಇದ್ದರು.

ಮಹಿಷ ದಸರಾಕ್ಕೆ ಹುಣಸೂರಿನಿಂದ 3000 ಜನ

ಹುಣಸೂರು, ಅ.10– ಮೈಸೂರಿನಲ್ಲಿ ಅ.13ರಂದು ನಡೆಯುವ ಮಹಿಷ ದಸರಾಕ್ಕೆ ಹುಣಸೂರಿನಿಂದ 3000 ಜನ ಭಾಗವಹಿಸಲಿದ್ದಾರೆ ಎಂದು ಆದಿಕರ್ನಾಟಕ ವಿಚಾರ ವೇದಿಕೆಯ ಅಧ್ಯಕ್ಷ ಪುಟ್ಟರಾಜು ತಿಳಿಸಿದರು.

ಪಟ್ಟಣದಿಂದ 15 ರಿಂದ 20 ಬಸ್ ಹಾಗೂ 200 ಬೈಕ್‌ಗಳಲ್ಲಿ ಮಹಿಷ ದಸರಾಕ್ಕೆ ತೆರಳಲಾಗುವುದು. ಹಾಸನ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಪ್ರಗತಿಪರ ಚಿಂತಕರು, ದಲಿತ ಹಾಗೂ ಅಂಬೇಡ್ಕರ್ ಸಂಘಟನೆಗಳೊಂದಿಗೆ ಸಾವಿರಾರು ಬೌದ್ಧರು ಆಗಮಿಸಲಿದ್ದಾರೆ.



ಸಂಸದ ಪ್ರತಾಪ್ ಸಿಂಹ ಮತ್ತೊಬ್ಬರ ಧಾರ್ಮಿಕ ಆಚರಣೆಗೆ ಧಕ್ಕೆ ತರುವುದು, ಸಮಾಜದಲ್ಲಿ ಅಶಾಂತಿಗೆ ಮುಂದಾಗುತ್ತಿದ್ದಾರೆ. ಇದು ಮುಂಬರುವ ಲೋಕಸಭೆ ಚುನಾವಣೆಯ ಗಿಮಿಕ್ ಆಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಸಾಂಪ್ರದಾಯಿಕ ಮಹಿಷ ದಸರಾ ಆಚರಣೆಗೆ ಸಂಸದ ಪ್ರತಾಪ್ ಸಿಂಹ ಏನಾದರೂ ಅಡ್ಡಿ ಪಡಿಸಲು ಮುಂದಾದರೆ ಮುಂದೆ ಆಗಬಹುದಾದ ಎಲ್ಲಾ ಅನಾಹುತಗಳಿಗೆ ಅವರೇ ಕಾರಣವಾಗಲಿದ್ದಾರೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿಯ ಪ್ರಸನ್ನಕುಮಾರ್, ಹೆಚ್.ಎಸ್.ವರದರಾಜು, ಕಾಂತರಾಜು ಉಪಸ್ಥಿತರಿದ್ದರು.

ಶಿಕ್ಷಣ ಇಲಾಖೆಗೆ ಆಶ್ರಮ ಶಾಲೆ ನಿರ್ವಹಣೆ ವಹಿಸಿ

ಹುಣಸೂರು, ಅ.10–ಆದಿವಾಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಕರ್ನಾಟಕ ಆಶ್ರಮ ಶಾಲೆಗಳ ನಿರ್ವಹಣೆಯನ್ನು ಶಿಕ್ಷಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ವಹಿಸಬೇಕು ಎಂದು ಬುಡಕಟ್ಟು ಕೃಷಿಕರ ಸಂಘ ಮತ್ತು ಡೀಡ್ ಸಂಸ್ಥೆ ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ಮನವಿ ಮಾಡಿದೆ.

ರಾಜ್ಯದ ಆದಿವಾಸಿ ಪ್ರದೇಶಗಳಲ್ಲಿರುವ 116ಕ್ಕೂ ಹೆಚ್ಚಿನ ಆಶ್ರಮ ಶಾಲೆಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಕ್ಕಳು 1 ರಿಂದ 7ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿದ್ದಾರೆ. ಪಶ್ಚಿಮಘಟ್ಟ ಜಿಲ್ಲೆಗಳಲ್ಲಿ 1500 ಆದಿವಾಸಿ ಹಾಡಿಗಳ 30 ಸಾವಿರ ಮಕ್ಕಳು ಆಶ್ರಮ ಮತ್ತು ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಾಗೂ ಮೂರು ಸಾವಿರ ಮಕ್ಕಳು ಪ್ರೌಢ ಶಿಕ್ಷಣದಲ್ಲಿ ತೊಡಗಿದ್ದಾರೆ. ಇದೇ ರೀತಿ ಮೈಸೂರು ಜಿಲ್ಲೆಯ 21 ಆಶ್ರಮ ಶಾಲೆಗಳಲ್ಲಿ ಸುಮಾರು ಎರಡು ಸಾವಿರ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.

ಜಿಲ್ಲೆಯಲ್ಲಿ ಸುಮಾರು 12,500 ಆದಿವಾಸಿ ಕುಟುಂಬಗಳಿದ್ದು, ನಾಲ್ಕೈದು ಪುನರ್ವಸತಿ ಕೇಂದ್ರಗಳನ್ನು ಹೊರತುಪಡಿಸಿದರೆ, ಆದಿವಾಸಿಗಳು ಕಷ್ಟದಲ್ಲಿದ್ದಾರೆ. ಆಶ್ರಮ ಹಾಗೂ ಸರ್ಕಾರಿ ಶಾಲೆಗಳಿಂದ ಆರು ಸಾವಿರ ಮಕ್ಕಳು ಶಾಲಾ ಶಿಕ್ಷಣದಲ್ಲಿ ತೊಡಗಿದ್ದಾರೆ. ಇವರಿಗೆ ಗುಣಮಟ್ಟದ ಶಿಕ್ಷಣ ಮರೀಚಿಕೆಯಾಗಿದೆ. ಕಾಯಂ ಶಿಕ್ಷಕರ ನೇಮಿಸಿಕೊಂಡಿಲ್ಲ. ಖಾಸಗಿ ಸಂಸ್ಥೆಗಳ ಮೂಲಕ ತಾತ್ಕಾಲಿಕ ಶಿಕ್ಷಕರನ್ನು ನೇಮಿಸಿರುವುದರಿಂದ ಆಶ್ರಮ ಶಾಲೆಗಳಲ್ಲಿ ಆದಿವಾಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಆದ್ದರಿಂದ ಶಿಕ್ಷಣ ಇಲಾಖೆಗೆ ಶೈಕ್ಷಣಿಕ ಜವಾಬ್ದಾರಿಯನ್ನು ವಹಿಸಬೇಕು. ಮುರಾರ್ಜಿ, ಕಿತ್ತೂರು ರಾಣಿಚೆನ್ನಮ್ಮ, ಏಕಲವ್ಯ ಶಾಲೆಗಳಲ್ಲಿ ಆದಿವಾಸಿ ಮಕ್ಕಳನ್ನು 6ನೇ ತರಗತಿಗೆ ನೇರವಾಗಿ ಪ್ರವೇಶ ಮಾಡಿಕೊಳ್ಳಬೇಕು ಎಂದು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಪಿ.ಕೆ.ರಾಮು ಮತ್ತು ಡೀಡ್ ಸಂಸ್ಥೆಯ ನಿರ್ದೇಶಕ ಡಾ.ಎಸ್.ಶ್ರೀಕಾಂತ್ ಮನವಿಯಲ್ಲಿ ಒತ್ತಾಯಿಸಿದ್ದಾರೆ.

15ರಿಂದ ನಂಜನಗೂಡಿನ ಶೃಂಗೇರಿ ಶಂಕರಮಠದಲ್ಲಿ ಶಾರದಾ ಶರನ್ನವರಾತ್ರಿ

ನಂಜನಗೂಡು, ಅ.10–ಪಟ್ಟಣದ ಶ್ರೀ ಶೃಂಗೇರಿ ಶಂಕರಮಠದಲ್ಲಿ ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವವನ್ನು ಅ.15ರಿಂದ 23ರವರೆಗೆ ಏರ್ಪಡಿಸಲಾಗಿದೆ.

ಅ.15ರಂದು ಶರನ್ನವರಾತ್ರಿ ಪೂಜಾ ಆರಂಭವಾಗಲಿದ್ದು, 17ರಂದು ಬೆಳಗ್ಗೆ 8 ಗಂಟೆಗೆ ನವಗ್ರಹ ಪುರಸ್ಕರ ಮೃತ್ಯುಂಜಯ ಹೋಮ, 18ರಂದು ಬೆಳಗ್ಗೆ 8 ಗಂಟೆಗೆ ಶ್ರೀ ಮಹಾಗಣಪತಿ ಹೋಮ, 19ರಂದು ಸ್ವಯಂವರ ಪಾರ್ವತಿ ಹೋಮ, 20ರಂದು ಸರಸ್ವತಿ ಹೋಮ, 21ರಂದು ನವಚಂಡಿಕಾ ಹೋಮ ಹಾಗೂ ಪೂಜಾ ಕಾರ್ಯವನ್ನು ಲೋಕ ಕಲ್ಯಾಣಾರ್ಥಕ್ಕಾಗಿ ಶೃಂಗೇರಿ ಮಠದ ಶ್ರೀಗಳ ಆದೇಶದಂತೆ ಏರ್ಪಡಿಸಲಾಗಿದೆ.

15 ರಿಂದ 21ರವರೆಗೆ ಪ್ರತಿದಿನ ಸಂಜೆ 5.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ. 16ರಂದು ರಾಜರಾಜೇಶ್ವರಿ ಗಾನ ಸಂಘದ ವತಿಯಿಂದ ಭಜನೆ, 17ರಂದು ಈಶ್ವರಿ ಭಜನಾ ಮಂಡಳಿಯಿಂದ, 18ರಂದು ಚಾಮುಂಡೇಶ್ವರಿ ಭಜನಾ ಮಂಡಳಿ, 19ರಂದು ಗಾಯತ್ರಿ ಭಜನಾ ಮಂಡಳಿ ವತಿಯಿಂದ ಭಜನೆ ನಡೆಯಲಿದೆ ಎಂದು ಮಠದ ಧರ್ಮಾಧಿಕಾರಿ ಎನ್.ಸಿ.ಶ್ರೀಕಂಠ ಜೋಯಿಸ್ ತಿಳಿಸಿದ್ದಾರೆ.



ಕೆ.ಆರ್.ನಗರ ತಾಲೂಕಿನ ಕರ್ತಾಳು ಗ್ರಾಮದಲ್ಲಿ ಸೋಮವಾರ ಗೌರಮ್ಮ ಮೂರ್ತಿಯನ್ನು ಮೆರವಣಿಗೆ ಮೂಲಕ ವಿಸರ್ಜಿಸಲಾಯಿತು. ಇದೇ ವೇಳೆ ಮಹಿಳೆಯರು ದೇವಿಗೆ ಬಾಗಿನ ಅರ್ಪಿಸಿ, ಪೂಜೆ ಸಲ್ಲಿಸಿದರು. ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಪರಮೇಶ್, ಗ್ರಾಮದ ಮುಖಂಡರಾದ ನಟೇಶ್, ಕುಂಟುಬಸಪ್ಪ, ಮಲ್ಲೇಶ್, ಮಹೇಶ್, ಕುಮಾರ್ ಇದ್ದರು.

ಬಸಳ್ಳಿಹುಂಡಿಯಲ್ಲಿ ಆರೋಗ್ಯ ತಪಾಸಣೆ

ತಿ.ನರಸೀಪುರ, ಅ.10–ತಾಲೂಕಿನ ವರುಣ ಕ್ಷೇತ್ರ ವ್ಯಾಪ್ತಿ ಬಸಳ್ಳಿಹುಂಡಿ ಗ್ರಾಮದಲ್ಲಿ ರಾಷ್ಟ್ರೀಯ ಸಮೃದ್ಧಿ ಬ್ಯಾಂಕ್ ಹಾಗೂ ಸೇವಾ ಭಾರತಿ ಟ್ರಸ್ಟ್ ವತಿಯಿಂದ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು.

ಗ್ರಾಮದ ಶಾಲಾ ಆವರಣದಲ್ಲಿ ನಡೆದ ಆರೋಗ್ಯ ತಪಾಸಣೆಯಲ್ಲಿ ಜೆಡಿಎಸ್ ರಾಜ್ಯ ಮಾಧ್ಯಮ ವಕ್ತಾರ ತಾಯೂರು ಪ್ರಕಾಶ್ ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯ ನೀಡುವುದೇ ಸಾಮಾಜಿಕ ಸಮಾನತೆಯ ನ್ಯಾಯ. ಇದು ಭಾರತ ಸಂವಿಧಾನದ ಆಶಯಗಳು ಇದ್ದಂತೆ. ಹಾಗಾಗಿ ಈ ಸೇವಾ ಭಾರತಿ ಟ್ರಸ್ಟ್ ಹಾಗೂ ಸಮೃದ್ಧಿ ಬ್ಯಾಂಕ್ ಟ್ರಸ್ಟ್‌ನವರು ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶಗಳನ್ನು ಗುರುತಿಸಿ ಸೇವೆ ನೀಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಶಿಬಿರದಲ್ಲಿ 200ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಡಾ.ಎ.ಎಸ್.ಚಂದ್ರಶೇಖರ್, ರಾಷ್ಟ್ರೀಯ ಸಮೃದ್ಧಿ ಬ್ಯಾಂಕ್ ಅಧ್ಯಕ್ಷ ಉದ್ಯಮಿ ಬಳ್ಳಾರಿ ವೀರೇಶ್, ಉಪಾಧ್ಯಕ್ಷ ಸುಹಾಸ್ ಗೂಳಿ, ಡಾ.ಅಭಿಲಾಷ್, ಮಹೇಶ್, ಚೇತನ್ ಪ್ರದೀಪ್, ಜಿಂದಲ್ ಕಂಪನಿ ವ್ಯವಸ್ಥಾಪಕ ಪ್ರಜ್ವಲ್, ರಾಷ್ಟ್ರೀಯ ಶಿಕ್ಷಣ ಒಕ್ಕೂಟದ ರಾಜ್ಯಾಧ್ಯಕ್ಷ ತಗಡೂರು ಗುರು ಹಾಗೂ ಡಾ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಪಿ.ಪುಟ್ಟರಾಜು ಶ್ರದ್ಧಾಂಜಲಿ ಸಭೆ



ತಿ.ನರಸೀಪುರ, ಅ.10–ಇತ್ತೀಚೆಗೆ ನಿಧನರಾದ ಮೈಸೂರು ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಉಪಾಧ್ಯಕ್ಷ ಮತ್ತು ತಿ.ನರಸೀಪುರ ತಾಲೂಕು ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು ಅವರ ಸ್ಮರಣಾರ್ಥ ಬುಧವಾರ(ಅ.11) ಮಧ್ಯಾಹ್ನ 3 ಗಂಟೆಗೆ ಪಟ್ಟಣದ ಕೋರ್ಟ್ ಪಕ್ಕದಲ್ಲಿರುವ ಶ್ರೀ ಮಹದೇವಪ್ಪ ಸ್ಮಾರಕದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿದೆ.

ಸಮಾಜ ಸೇವಕರು ಮತ್ತು ಜನಾನುರಾಗಿಗಳಾಗಿದ್ದ ಪುಟ್ಟರಾಜು ಅವರು ಖಾಸಗಿ ಬಸ್ ಮಾಲೀಕರು ಮತ್ತು ಏಜೆಂಟರುಗಳ ಏಳಿಗೆಗಾಗಿ ಸದಾ ಶ್ರಮಿಸುತ್ತಿದ್ದರಲ್ಲದೆ ತಾಲೂಕಿನ ಜನರ ಕಷ್ಟ–ಸುಖಗಳಲ್ಲಿ ಭಾಗಿಯಾಗುವ ಮೂಲಕ ಸ್ಪಂದಿಸುತ್ತಿದ್ದರು. ಅವರ ನಿಧನದಿಂದ ಖಾಸಗಿ ಬಸ್ ಮಾಲೀಕರು, ಏಜೆಂಟರುಗಳು, ಚಾಲಕರು ಮತ್ತು ಬಡ ಜನತೆಗೆ ತುಂಬಲಾರದ ನಷ್ಟವಾಗಿದ್ದು, ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ಕರುಣಿಸಲಿ ಎಂದು ಸಂಘ ಪ್ರಾರ್ಥಿಸಿದೆ.

ಗೋಣಹಳ್ಳಿಯಲ್ಲಿ ಜಾನುವಾರುಗಳಿಗೆ ಲಸಿಕೆ



ನಗರ್ಲೆ, ಅ.10–ನಂಜನಗೂಡು ತಾಲೂಕಿನ ನಗರ್ಲೆ ಪಶು ಚಿಕಿತ್ಸಾಲಯ ವ್ಯಾಪ್ತಿಯ ಗೋಣಹಳ್ಳಿ ಗ್ರಾಮದಲ್ಲಿ ಜಾನುವಾರುಗಳಿಗೆ 4ನೇ ಸುತ್ತಿನ ಕಾಲುಬಾಯಿ ಲಸಿಕೆ ಹಾಕಲಾಯಿತು.

ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಮನೆ ಮನೆಗೆ ತೆರಳಿ 300 ರಾಸುಗಳಿಗೆ ಉಚಿತವಾಗಿ ಲಸಿಕೆ ಹಾಕಲಾಯಿತು. ಇದುವರೆಗೆ ಸುಮಾರು 2 ಸಾವಿರ ರಾಸುಗಳಿಗೆ ಲಸಿಕೆ ಹಾಕಲಾಗಿದೆ ಎಂದು ಮುಖ್ಯ ಪಶು ವೈದ್ಯಾಧಿಕಾರಿ ಡಾ.ಬಿ.ಟಿ.ವಿಜೇತ್ ತಿಳಿಸಿದರು.

ಈ ಸಂದರ್ಭದಲ್ಲಿ ನಗರ್ಲೆ ಪಶು ಚಿಕಿತ್ಸಾಲಯ ಪಶು ಪರೀಕ್ಷಕ ವೆಂಕಟೇಶ್, ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ದೊಡ್ಡಸ್ವಾಮಿ, ಕಾರ್ಯದರ್ಶಿ ಮಹೇಶ್, ನಿರ್ದೇಶಕರಾದ ಮಂಜುನಾಥ್, ಸಿಬ್ಬಂದಿ ಗೌತಮ್, ಪಶುಸಖಿ ಶಶಿಕಲಾ, ಮುಖಂಡ ಪುಟ್ಟಬುದ್ಧಿ ರೈತರು ಹಾಜರಿದ್ದರು.

ಖೋ–ಖೋ ಪಂದ್ಯಾವಳಿಗೆ ಶಾಸಕ ಚಾಲನೆ



ಹುಲ್ಲಹಳ್ಳಿ, ಅ.10– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಸಂಪತ್ ಜ್ಯೋತಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ ಖೋ–ಖೋ ಪಂದ್ಯಾವಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕ್ರೀಡಾಕೂಟದಿಂದ ಮನುಷ್ಯನ ಆರೋಗ್ಯ ಸುಧಾರಣೆಯಾಗಿ ದೇಹ ಸದೃಢವಾಗಿರುತ್ತದೆ. ಉತ್ತಮ ಆರೋಗ್ಯಕ್ಕಾಗಿ 10 ಆಸ್ಪತ್ರೆ ನಿರ್ಮಾಣ ಮಾಡುವುದಕ್ಕಿಂತ ಒಂದು ಕ್ರೀಡಾಂಗಣ ನಿರ್ಮಿಸುವುದು ಸೂಕ್ತ ಎಂದು ತಿಳಿಸಿದರು.

ನಂತರ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಇದೇ ವೇಳೆ ನಿವೃತ್ತ ಶಿಕ್ಷಕರು ಹಾಗೂ ಉತ್ತಮ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಗ್ರಾಪಂ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ಹೆಚ್.ಪಿ.ಲೋಕೇಶ್, ವೈದ್ಯಾಧಿಕಾರಿ ಧನಲಕ್ಷ್ಮೀ, ಸಂಪತ್ ಜ್ಯೋತಿ ಟ್ರಸ್ಟ್ ಅಧ್ಯಕ್ಷ ಹೆಚ್.ಸಿ.ಮಧುಕರ, ಖೋ–ಖೋ ತರಬೇತುದಾರ ಹೆಚ್.ಸಿ.ಮಹದೇವಸ್ವಾಮಿ, ಶಿಕ್ಷಕರಾದ ದೇವರಾಜ್‌ನಾಯಕ್, ಮಹದೇವ ಸ್ವಾಮಿ, ಪೊಲೀಸ್ ಠಾಣೆಯ ಮಹದೇವ ಶೆಟ್ಟಿ, ಕೆಪಿಸಿಸಿ ಸದಸ್ಯ ತುಕಾರಾಂ ಇದ್ದರು.

ಈಚೂರು ಗ್ರಾಮದಲ್ಲಿ ಜನಸಂಪರ್ಕ ಸಭೆ



ಬೆಟ್ಟದಪುರ, ಅ.10– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಈಚೂರು ಗ್ರಾಮದಲ್ಲಿ ಸೋಮವಾರ ಸಚಿವ ಕೆ.ವೆಂಕಟೇಶ್ ಜನಸಂಪರ್ಕ ಸಭೆ ನಡೆಸಿದರು.

ಸಭೆಯಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪಿ.ಲೋಕೇಶ್, ಗ್ರಾಮದ ಮುಖಂಡ ಬಾಬಾ ಜಾನ್ ಮಾತನಾಡಿ, ಗ್ರಾಮದಲ್ಲಿ ಬಡವರಿದ್ದು ಅವರಿಗೆ ನಿವೇಶನ ಹಾಗೂ ಮನೆಗಳನ್ನು ನಿರ್ಮಿಸಿಕೊಡಬೇಕೆಂದು ಮನವಿ ಮಾಡಿದರು.

ನಂತರ ಮಾತನಾಡಿದ ಸಚಿವರು, ಪ್ರತಿ ಗ್ರಾಮ ಪಂಚಾಯಿತಿಗೆ 30 ರಿಂದ 40 ಮನೆಗಳನ್ನು ಮಂಜೂರು ಮಾಡಲಾಗಿದೆ. ಕಡುಬಡವರಿಗೆ ಮಾತ್ರ ನಿವೇಶನ ನೀಡಬೇಕು ಎಂದು ಗ್ರಾಪಂ ಅಧ್ಯಕ್ಷರು ಮತ್ತು ಪಿಡಿಒಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಪಿ.ದೇವರಾಜ್, ಗ್ರಾಮದ ಮುಖಂಡರಾದ ರಮೇಶ್, ಚಂದ್ರೇಗೌಡ, ವಿಎಸ್‌ಎಸ್ ನಿರ್ದೇಶಕ ನಾಗೇಗೌಡ, ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ ಉದ್ಘಾಟನೆ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಭುವನಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯನ್ನು ಸಚಿವ ಕೆ.ವೆಂಕಟೇಶ್ ಸೋಮವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಸಚಿವರು, ಸಹಕಾರ ಸಂಘಗಳ ಅನುಕೂಲಕ್ಕೆ ಹೆಚ್ಚಿನ ಅನುದಾನ ನೀಡಲಾಗುವುದು. ಸಹಕಾರ ಸಂಘಗಳು ರೈತರಿಗೆ ಸರಿಯಾದ ಸಮಯಕ್ಕೆ ಸಾಲಸೌಲಭ್ಯ ನೀಡಬೇಕು. ಜತೆಗೆ ಕೃಷಿಕರ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಹರೀಶ್, ಉಪಾಧ್ಯಕ್ಷ ವೆಂಕಟರಮಣಶೆಟ್ಟಿ, ನಿರ್ದೇಶಕರಾದ ಗಿರೀಶ್, ಜಯಣ್ಣ, ಮಲ್ಲೇಶ್, ಬೋರಪ್ಪ, ಬೇಲೂರಯ್ಯ, ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ದೇವರಾಜ್, ಪಿಡಿಒ ದೇವರಾಜೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತೀಶ್, ಅಟೆಂಡರ್ ರಾಜಶೇಖರ್ ಇತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂದ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತೋಟಗಾರಿಕಾ ತಂತ್ರಜ್ಞಾನ ಕುರಿತು ತರಬೇತಿ

ಮೈಸೂರು, ಅ. 10– ಇಲವಾಲ ಬಳಿಯ ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಅ. 17 ರಂದು ಬೆಳಗ್ಗೆ 10.30 ಗಂಟೆಗೆ ದಾಳಿಂಬೆ ಉತ್ಪಾದನೆಯಲ್ಲಿ ವಿನೂತನ ತೋಟಗಾರಿಕಾ ತಂತ್ರಜ್ಞಾನಗಳು ಕುರಿತು ತರಬೇತಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ದಾಳಿಂಬೆ ಸಂಶೋಧನಾ ಕೇಂದ್ರ, ಸೊಲ್ಲಾಪುರ, ಮಹಾರಾಷ್ಟ್ರ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿಜ್ಞಾನಿಗಳು ಹಾಗೂ ಅನುಭವಿ ದಾಳಿಂಬೆ ಕೃಷಿಕರು ಭಾಗವಹಿಸಿ, ಗುಣಮಟ್ಟದ ಹಣ್ಣು ಉತ್ಪಾದನೆಯಲ್ಲಿ ಎದುರಿಸುವ ಹಲವಾರು ಸಮಸ್ಯೆ ಮತ್ತು ಅದರ ಪರಿಹಾರದ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳ ಆಸಕ್ತ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ನೋಂದಣಿ ಮಾಡಿಸಬಹುದು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ನೋಂದಣಿಗಾಗಿ 8147959226 / 9341997297 ಸಂಪರ್ಕಿಸಿ.

ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಪ್ರಗತಿ ಪರಿಶೀಲನೆ



ತಿ.ನರಸೀಪುರ, ಅ.10–ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಮೈಸೂರು ಜಿಲ್ಲೆ ರಾಜ್ಯಕ್ಕೆ ಮೊದಲನೇ ಸ್ಥಾನ ಪಡೆಯಲು ಎಲ್ಲರೂ ಕಾರ್ಯನಿರ್ವಹಿಸಿ ಎಂದು ಬ್ಯಾಂಕ್‌ನ ರಾಜ್ಯಾಧ್ಯಕ್ಷರಾದ ತಿಪಟೂರು ಶಾಸಕ ಕೆ.ಷಡಕ್ಷರಿ ಹೇಳಿದರು.

ತಾಲೂಕಿನ ತಲಕಾಡು ಗ್ರಾಮದ ಜಲಧಾಮ ರೆಸಾರ್ಟ್‌ನಲ್ಲಿ ಮೈಸೂರು, ಚಾಮರಾಜನಗರ ಹಾಗೂ ಮಡಿಕೇರಿ ಜಿಲ್ಲೆಯ ಬ್ಯಾಂಕಿನ ಜಿಲ್ಲಾ ಸಲಹಾ ಸಮಿತಿ (ಡಿಎಸ್‌ಸಿ) ಹಾಗೂ ಜಿಲ್ಲಾ ಅಭಿವೃದ್ಧಿ ಕ್ರಿಯಾ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆ ಸಾಲ ವಸೂಲಾತಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಮುಂದಿನ ವರ್ಷ ಮೊದಲ ಸ್ಥಾನಕ್ಕೆ ಬರಬೇಕು. ಆ ನಿಟ್ಟಿನಲ್ಲಿ ರೈತರು ಹಾಗೂ ಅಧಿಕಾರಿಗಳು ಒಗ್ಗಟ್ಟಾಗಿ ಶ್ರಮಿಸಬೇಕು ಎಂದರು.

ಸಭೆಯಲ್ಲಿ ಅರಕಲಗೂಡು ಶಾಸಕ ಎ.ಮಂಜು, ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ, ಮಂಡ್ಯ ಜಿಲ್ಲಾ ನಿರ್ದೇಶಕ ತಿಮರಾಯಿಗೌಡ, ಬ್ಯಾಂಕಿನ ಕಾರ್ಯದರ್ಶಿ ಕುಮಾರ್ ಮತ್ತು ಜಿಲ್ಲಾ ವ್ಯವಸ್ಥಾಪಕಿ ಬಿ.ಪಿ.ರಶ್ಮಿತಾ ಹಾಜರಿದ್ದರು.

ನಿರ್ಮಾಣ ಕಾರ್ಯ ಆರಂಭವಾಗಿದ್ದು 12 ವರ್ಷಗಳ ಹಿಂದೆ; ಅಂತೂ ಆರಂಭವಾಗುತ್ತಿದೆಯಪ್ಪಾ...

ಈ ದಸರಾ ವೇಳೆ ಪುರಭವನ ಆವರಣದ ಬಹುಮಹಡಿ ಪಾರ್ಕಿಂಗ್ ಪ್ರದೇಶ ಮುಕ್ತ

ಮೈಸೂರು, ಅ. 10(ಆರ್‌ಕೆ)– ಹನ್ನೆರಡು ವರ್ಷಗಳ ನಂತರ ಅಂತೂ ಈ ದಸರಾದಲ್ಲಿ ಮೈಸೂರಿನ ಪುರಭವನ ಆವರಣದ ಬಹುಮಹಡಿ ವಾಹನ ನಿಲುಗಡೆ ಪ್ರದೇಶ (ಮಲ್ಟಿಲೆವೆಲ್ ಪಾರ್ಕಿಂಗ್ ಲಾಟ್) ಕಾರ್ಯಾರಂಭಗೊಳ್ಳಲಿದೆ.



ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರಹಮಾನ್ ಷರೀಫ್ ರಾಜಮಾರ್ಗದ ದಸರಾ ಕಾಮಗಾರಿ ಪರಿಶೀಲಿಸಿದ 3 ದಿನಗಳ ನಂತರ ಮಂಗಳವಾರ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಮೇಯರ್ ಶಿವಕುಮಾರ್, ಪುರಭವನದ ಬಹುಮಹಡಿ ವಾಹನ ನಿಲುಗಡೆ ಪ್ರದೇಶದ ಕಾಮಗಾರಿ ಪೂರ್ಣಗೊಂಡಿದ್ದು, ಜಿಲ್ಲಾ ಉಸ್ತುವಾರಿ ಸಚಿವರ ಸಲಹೆಯಂತೆ ದಿನಾಂಕ ನಿಗದಿ ಮಾಡಿ ದಸರಾ ಒಳಗಾಗಿ ಅಲ್ಲಿ ಸಾರ್ವಜನಿಕರ ವಾಹನ ನಿಲುಗಡೆಗೆ ಅವಕಾಶ ನೀಡಲಾಗುವುದು ಎಂದರು.

ಕಳೆದ 12 ವರ್ಷಗಳಿಂದ ಪುರಭವನ ಆವರಣದಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸುವ ಕಾಮಗಾರಿ ನಡೆಯುತ್ತಿದ್ದು, ಹಲವು ಕಾರಣಗಳಿಂದಾಗಿ ಕೆಲ ವರ್ಷ ನನೆಗುದಿಗೆ ಬಿದ್ದಿತ್ತು. 2011ರಲ್ಲಿ ಆರಂಭವಾದ ಈ ಕಾಮಗಾರಿಯು ಕಳೆದ ದಸರಾ ವೇಳೆಗೇ ಪೂರ್ಣಗೊಳ್ಳಬೇಕಾಗಿತ್ತಾದರೂ, ಅನುದಾನದ ಕೊರತೆಯಿಂದಾಗಿ ಸಾಧ್ಯವಾಗಿರಲಿಲ್ಲ ಎಂದು ಅವರು ತಿಳಿಸಿದರು. ಆದರೆ, ತಾತ್ಕಾಲಿಕವಾಗಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿತ್ತಾದರೂ, ಮಳೆ ನೀರು ಹರಿದು ಹೋಗಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಸೆಲ್ಲರ್‌ನಲ್ಲಿ ನೀರು ನಿಂತು ತೊಂದರೆಯಾಗುತ್ತಿತ್ತು. ಇದೀಗ ಸರಿಪಡಿಸಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಿರುವುದರಿಂದ ಉದ್ಘಾಟನೆಗೆ ಸಿದ್ಧಗೊಂಡಿದೆ ಎಂದು ಮೇಯರ್ ತಿಳಿಸಿದರು.

400 ಕಾರುಗಳು ಹಾಗೂ 200 ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡಬಹುದಾದ 6000 ಚದರಡಿ ವಿಸ್ತಾರದ ಸ್ಥಳವನ್ನು ಒದಗಿಸಿದ್ದು, 23.28 ಕೋಟಿ ರೂ. ವೆಚ್ಚದಲ್ಲಿ ಪಾರ್ಕಿಂಗ್ ಲಾಟ್ ಕಟ್ಟಡ ನಿರ್ಮಿಸಲಾಗಿದೆ. ಪ್ರವೇಶ, ನಿರ್ಗಮನ ದ್ವಾರ, ಪ್ರತಿ ವಾಹನ ನಿಲುಗಡೆ ಸ್ಥಳ ನಿಗದಿ, ಸೂಚನಾ ಫಲಕ, ಬೆಳಕಿನ ವ್ಯವಸ್ಥೆ, ಸಿಸಿ ಕ್ಯಾಮರಾ ಅಳವಡಿಸಿ ದಿನದ 24 ಗಂಟೆಯೂ 3 ಪಾಳಿಯಲ್ಲಿ ಭದ್ರತಾ ವ್ಯವಸ್ಥೆ ಸೇರಿದಂತೆ ಮೂಲಸೌಲಭ್ಯ ಕಲ್ಪಿಸಿ ಸಾರ್ವಜನಿಕರ ವಾಹನ ನಿಲುಗಡೆಗೆ ಮುಕ್ತ ಅವಕಾಶ ನೀಡಲಾಗುವುದು ಎಂದು ಶಿವಕುಮಾರ್ ಸ್ಥಳ ಪರಿಶೀಲನೆ ವೇಳೆ ತಿಳಿಸಿದರು.

ಮೇಯರ್, ಪಾಲಿಕೆ ಆಯುಕ್ತರಿಂದ ಸ್ಥಳ ಪರಿಶೀಲನೆ



ದಸರಾ ಕಾಮಗಾರಿ ವೀಕ್ಷಣೆ: ಪಾಲಿಕೆಯಿಂದ ಕೈಗೊಂಡಿರುವ ದಸರಾ ಕಾಮಗಾರಿಗಳನ್ನು ಪಾದಯಾತ್ರೆ ಮೂಲಕ ಪರಿಶೀಲಿಸಿದ ಮೇಯರ್ ಶಿವಕುಮಾರ್ ಮತ್ತು ಪಾಲಿಕೆ ಆಯುಕ್ತ ಅಶಾದ್ ಉರ್ ರಹಮಾನ್ ಷರೀಫ್, ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಕೆ.ಆರ್.ಸರ್ಕಲ್‌ನ ಫುಟ್‌ಪಾತ್ ರಿಪೇರಿ, ಯುಜಿಡಿ, ಗುಂಡಿ ಮುಚ್ಚುವ ಕಾಮಗಾರಿ ಹಾಗೂ ಬಣ್ಣ ಬಳಿಯುವ ಕೆಲಸವನ್ನು ಜಂಟಿಯಾಗಿ ವೀಕ್ಷಿಸಿದರು.

10 ಕೋಟಿ ರೂ. ಅನುದಾನ: ಅರಮನೆ ಸುತ್ತಲಿನ ರಸ್ತೆ, ಫುಟ್‌ಪಾತ್, ರಾಜಮಾರ್ಗದ ಯುಜಿಡಿ, ಸ್ವಚ್ಛತೆ, ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಮೈಸೂರು ಮಹಾನಗರ ಪಾಲಿಕೆ ವತಿಯಿಂದ 10 ಕೋಟಿ ರೂ. ಅನುದಾನ ನೀಡಿದ್ದು, ದಸರಾ ಒಳಗಾಗಿ ಕೆಲಸ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಮೇಯರ್ ತಾಕೀತು ಮಾಡಿದರು.

ಲಂಡನ್ ಮಾದರಿ ಅಭಿವೃದ್ಧಿ: ದೇವರಾಜ ಮಾರುಕಟ್ಟೆಯ ಚಿಕ್ಕಗಡಿಯಾರ ಬಳಿಯ ಸ್ಥಳವನ್ನು ಲಂಡನ್ ಮಾದರಿಯ ಟೈಲ್ಸ್ ಅಳವಡಿಸಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಪ್ರತೀದಿನ ಸಂಜೆ ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮಾಡಲು ಅವಕಾಶ ಕಲ್ಪಿಸಲಾಗುವುದು ಎಂದು ಆಯುಕ್ತ ಷರೀಫ್ ತಿಳಿಸಿದರು.

ಸಬ್‌ವೇ ಮುಕ್ತ: ಸಯ್ಯಾಜಿರಾವ್ ರಸ್ತೆಯ ಬಾಟಾ ಶೋರೂಂ ಎದುರಿನ ಸಬ್‌ವೇಯನ್ನು ಮೂಲಸೌಕರ್ಯದೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಸ್ವಚ್ಛತೆ, ವಿದ್ಯುತ್ ದೀಪ, ಸೆಕ್ಯೂರಿಟಿ ವ್ಯವಸ್ಥೆ ಮಾಡಿರುವುದರಿಂದ ಶೀಘ್ರ ಸಾರ್ವಜನಿಕರು ಓಡಾಡಲು ಮುಕ್ತಗೊಳಿಸಲಾಗುವುದು ಎಂದು ಆಯುಕ್ತರು ತಿಳಿಸಿದರು. ಸಯ್ಯಾಜಿರಾವ್ ರಸ್ತೆ ಬಂಬೂ ಬಜಾರ್ ರಸ್ತೆಯ ಫುಟ್‌ಪಾತ್‌ನಲ್ಲಿ ಎಳನೀರು, ಹಣ್ಣಿನ ಅಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಪಾದಚಾರಿಗಳು ರಸ್ತೆಗಿಳಿಯುತ್ತಿರುವುದನ್ನು ಕಂಡ ಮೇಯರ್, ಸಾರ್ವಜನಿಕರ ಹಿತದೃಷ್ಟಿಯಿಂದ ಫುಟ್‌ಪಾತ್ ವ್ಯಾಪಾರಿಗಳು ತಾವೇ ತೆರವುಗೊಳಿಸಬೇಕೆಂದು ಮನವಿ ಮಾಡಿದರು.

ರಸ್ತೆಗುಂಡಿ ಮುಚ್ಚುವುದು, ನೀರು ನಿಲ್ಲುವುದನ್ನು ತಪ್ಪಿಸುವುದು, ವಿದ್ಯುದ್ದೀಪಾಲಂಕಾರ ಮಾಡಿರುವೆಡೆಯಾವುದೇ ಅವಘಡ ಉಂಟಾಗದಂತೆ ಎಚ್ಚರ ವಹಿಸುವಂತೆಯೂ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ಪರಿಸರ ಇಂಜಿನಿಯರ್ ಮೈತ್ರಿ, ಹೆಲ್ತ್ ಇನ್ಸ್‌ಪೆಕ್ಟರ್‌ಗಳು, ಅಭಿವೃದ್ಧಿ ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.





ಮೈಸೂರು ನಗರ ಪಾಲಿಕೆ ಕೈಗೊಂಡಿರುವ ದಸರಾ ಕಾಮಗಾರಿಗಳನ್ನು ಪಾದಯಾತ್ರೆ ಮೂಲಕ ಮೇಯರ್ ಶಿವಕುಮಾರ್ ಮತ್ತು ಪಾಲಿಕೆ ಆಯುಕ್ತ ಅಶಾದ್ ಉರ್ ರಹಮಾನ್ ಷರೀಫ್ ಪರಿಶೀಲಿಸಿದರು.

ಮಹಿಷ ದಸರಾಗೆ ಹಲವು ಸಂಘಟನೆಗಳ ಬೆಂಬಲ

ಸಂಸದ ಪ್ರತಾಪ್ ಸಿಂಹರಿಂದ ಪ್ರಚೋದನೆ; ಕ್ರಮಕ್ಕೆ ಆಗ್ರಹ

ಮೈಸೂರು, ಅ.10(ಎಂಟಿವೈ)– ಮಹಿಷ ದಸರಾ ಆಚರಣಾ ಸಮಿತಿ ವತಿಯಿಂದ ಅ. 13ರಂದು ಚಾಮುಂಡಿಬೆಟ್ಟದಲ್ಲಿ ಆಚರಿಸಲು ಉದ್ದೇಶಿಸಿರುವ 'ಮಹಿಷ ದಸರಾ'ಗೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿವೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ವಿವಿಧ ಸಂಘಟನೆಗಳ ಮುಖಂಡರು ಪ್ರತ್ಯೇಕವಾಗಿ ಸುದ್ದಿಗೋಷ್ಠಿ ನಡೆಸಿ, ಮಹಿಷ ದಸರಾ ಆಚರಣೆಗೆ ಅನುಮತಿ ನೀಡಬೇಕು. ಅಲ್ಲದೆ, ಮಹಿಷ ದಸರಾ ಆಚರಣೆ ವಿರೋಧಿಸುವುದರೊಂದಿಗೆ ಸಂಘರ್ಷಕ್ಕೂ ಸಿದ್ಧ ಎಂದು ಹೇಳುವ ಮೂಲಕ ಪ್ರಚೋದಿಸುತ್ತಿರುವ ಸಂಸದ ಪ್ರತಾಪಸಿಂಹ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರತಿಯೊಬ್ಬರಿಗೂ ಅವರವರ ಧರ್ಮ ಆಚರಣೆಗೆ ಅವಕಾಶವಿದೆ. ಹೀಗಾಗಿ ಅದನ್ನು ತಡೆಯುವುದಾಗಿ ಹೇಳಲು ಸಂಸದ ಪ್ರತಾಪಸಿಂಹ ಅವರಿಗೆ ಹಕ್ಕಿಲ್ಲ. ಸಂಘರ್ಷಕ್ಕಿಳಿಯುವಂತೆ ಪ್ರಚೋದನೆ ನೀಡುತ್ತಿರುವ ಹಿನ್ನೆಲೆಯಲ್ಲಿ ಅವರನ್ನು ಕೂಡಲೇ ಬಂಧಿಸಬೇಕು. ಸಂಸದ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಸಮಾನಮನಸ್ಕ ವಕೀಲರ ವೇದಿಕೆ: ಸಮಾನ ಮನಸ್ಕ ವಕೀಲರ ಸಂಘದ ಸದಸ್ಯ ಪುಟ್ಟಸಿದ್ದೇಗೌಡ ಮಾತನಾಡಿ, ಚಾಮುಂಡೇಶ್ವರಿಗೆ ಅಪಮಾನ ಮಾಡಲೆಂದು ಮಹಿಷ ದಸರಾ ಆಚರಿಸುತ್ತಿಲ್ಲ. ಬದಲಾಗಿ ಸಂವಿಧಾನದಲ್ಲಿನ ಧರ್ಮಾತೀತ ಪದಗಳ ಪ್ರಸ್ತಾವನೆ ಹಿನ್ನೆಲೆಯಲ್ಲಿ ಮಹಿಷ ದಸರಾ ಆಯೋಜಿಸಲಾಗಿದೆ. ಹೀಗೆ ಮಾಡಬಾರದು ಎಂಬ ಅಧಿಕಾರ ಸಂಸದ ಪ್ರತಾಪಸಿಂಹ ಅವರಿಗಿಲ್ಲ. ಜೊತೆಗೆ ಸಂಘರ್ಷಕ್ಕೆ ಪ್ರಚೋದನೆ ನೀಡುತ್ತಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗಲಭೆ ಸೃಷ್ಟಿಸಲು ಸಂಚು ನಡೆಸುತ್ತಿದ್ದರೂ ಇದುವರೆಗೆ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಭಾರತ ಬಹುಸಂಸ್ಕೃತಿ ಹೊಂದಿರುವ ರಾಷ್ಟ್ರ. ಸಂವಿಧಾನದಲ್ಲಿ ಮಹಿಷ ದಸರಾ ಆಚರಣೆಗೆ ಅವಕಾಶವಿದೆ. ಹಾಗಿದ್ದರೂ ರಾಜಕೀಯ ಲಾಭಕ್ಕಾಗಿ ಮಹಿಷ ದಸರಾ ವಿರೋಧಿಸಲಾಗುತ್ತಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ವಕೀಲರಾದ ಮಂಜುನಾಥ್, ವಿಷ್ಣುವರ್ಧನ್, ಶಿವಕುಮಾರ್, ಸೋಮರಾಜ್ ಹಾಗೂ ಗಿರೀಶ್ ಇದ್ದರು.

ದಲಿತ ಪ್ಯಾಂಥರ್ಸ್: ಮೈಸೂರಿನ ಗಾಂಧಿನಗರದ ಕರ್ನಾಟಕ ದಲಿತ ಪ್ಯಾಂಥರ್ಸ್ ಸಂಘಟನೆಯ ಡಾ.ಚನ್ನಕೇಶವ ಮಾತನಾಡಿ, ಮಹಿಷ ದಸರಾ ಆಚರಣೆಗೆ ನಮ್ಮ ಸಂಘಟನೆಯಿಂದ ಬೆಂಬಲ ನೀಡುತ್ತಿದ್ದೇವೆ. ಸಂಘಟನೆಯ ಸುಮಾರು ಐದು ಸಾವಿರ ಕಾರ್ಯಕರ್ತರು, ಹಿತೈಷಿಗಳೊಂದಿಗೆ ಮಹಿಷ ದಸರಾದಲ್ಲಿ ಪಾಲ್ಗೊಳ್ಳುತ್ತೇವೆ. 1976ರ ಏ.7ರಂದು ಭೈರಣ್ಣ ಶಾಲೆಯ ಮೈದಾನದಲ್ಲಿ ವಿಚಾರವಾದಿ ಮಂಟೇಲಿಂಗಯ್ಯ ಮಹಿಷ ದಸರಾ ಆಚರಿಸಿದ್ದರು. ಈ ಅಂಶ ಅರಿಯದೆ ಬಿಜೆಪಿ ಮುಖಂಡರು ಸಮಾಜವನ್ನು ದಿಕ್ಕುತಪ್ಪಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಬೆಟ್ಟದಲ್ಲಿ ರಾಜವಂಶಸ್ಥರಿಂದಲೇ ಮಹಿಷ ಪ್ರತಿಮೆ ಸ್ಥಾಪನೆಯಾಗಿದೆ. ಚಿಕ್ಕಗಡಿಯಾರದ ಬಳಿಯ ಶಂಕುಸ್ಥಾಪನಾ ಕಲ್ಲೊಂದರ ಮೇಲೆ ಮಹಿಷೂರು ಎಂಬ ಪದದ ಉಲ್ಲೇಖವಾಗಿದೆ. ಇನ್ನು, ದೇಶ, ರಾಜ್ಯದಲ್ಲಿ ನಿರುದ್ಯೋಗವಿದ್ದು, ಉದ್ಯೋಗ ಸೃಷ್ಟಿ ಮೊದಲಾದ ಕಡೆಗೆ ಸಂಸದ ಪ್ರತಾಪ ಸಿಂಹ ಗಮನ ನೀಡಬೇಕೇ ಹೊರತು ಸಂಘರ್ಷಕ್ಕಲ್ಲ. ಹೀಗಾಗಿ ಇವರ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಂಡು, ಬಂಧಿಸಬೇಕು. ಜೊತೆಗೆ ಸಂಸದ ಸ್ಥಾನದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಪ್ಯಾಂಥರ್ಸ್ ಸಂಘಟನೆಯ ಯೋಗಾನರಸಿಂಹ, ನಾಡನಹಳ್ಳಿ ಪ್ರಸಾದ್, ಕಿರಣ್‌ಕುಮಾರ್, ಮೋಹನ್ ಕುಮಾರ್ ಇದ್ದರು.

ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟ: ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಪಿ.ರಾಜು ಮಾತನಾಡಿ, ಮಹಿಷ ದಸರಾದಲ್ಲಿ ದಲಿತ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಪುರಾಣ ಹಾಗೂ ಪಠ್ಯಗಳಲ್ಲಿ ಮಹಿಷನನ್ನು ಕೆಟ್ಟದಾಗಿ ಬಿಂಬಿಸಲಾಗಿದೆ. ಹೀಗಾಗಿ ಇತಿಹಾಸ ತಿಳಿಸುವ ಉದ್ದೇಶದಿಂದ ಮಹಿಷ ದಸರಾ ಆಚರಿಸಲಾಗುತ್ತಿದೆ. ಪ್ರಗತಿಪರ ಚಿಂತಕರು, ಪ್ರಗತಿಪರ ಸಂಘಟನೆಗಳು, ದಲಿತ ಸಂಘಟನೆಗಳು, ವಿದ್ಯಾರ್ಥಿಗಳು ಹಾಗೂ ಸಮಾನಮನಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಮುಖಂಡರಾದ ಕೆ.ಶಿವಕುಮಾರ್, ಎಡದೊರೆ ಮಹದೇವಯ್ಯ, ಪರಶುರಾಮ್, ಪುಟ್ಟಮಾದಯ್ಯ, ಅಂತೋಣಿ ಜಾನ್ಸನ್ ಇದ್ದರು.

ನಾಳೆ ಕ್ಯಾನ್ಸರ್ ತಪಾಸಣಾ ಉಚಿತ ಶಿಬಿರ

ಮೈಸೂರು, ಅ. 10–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಅ. 12 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ತಪಾಸಣಾ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿದೆ. ಒಂದು ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ನುಂಗುವಾಗಿನ ತೊಂದರೆ, ಗಂಟಲಲ್ಲಿ ಉರಿತ ಅಥವಾ ತಡೆತ, ಧ್ವನಿ ಬದಲಾವಣೆ ಇರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.